# ರಾಬರ್ಟ್ ಸಿವೆಲ್‌ರ
# ಚಾರಿತ್ರಿಕ ಬರೆಹಗಳ ವಿಶ್ಲೇಷಣೆ

(ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ ಎಂ.ಫಿಲ್.
ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)


ಅಭ್ಯರ್ಥಿ
ಮಾರುತಿ ಕೆ.ಎಸ್.

ಮಾರ್ಗದರ್ಶಕರು
ಡಾ. ಸಿ.ಆರ್.ಗೋವಿಂದರಾಜು
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬



೨೦೧೦

# ರಾಬರ್ಟ್ ಸಿವೆಲ್‌ರ
# ಚಾರಿತ್ರಿಕ ಬರೆಹಗಳ ವಿಶ್ಲೇಷಣೆ

(ಕನ್ನಡ ವಿಶ್ವಪಿದ್ಯಾಲಯದ ಚರಿತ್ರೆ ವಿಭಾಗಕ್ಕೆ ಎಂ.ಫಿಲ್.ಆಂಶಿಕ ಪದವಿಗಾಗಿ
ಸಲ್ಲಿಸುತ್ತಿರುವ ನಿಬಂಧ)

ಅಭ್ಯರ್ಥಿ
ಮಾರುತಿ ಕೆ.ಎಸ್.

ಮಾರ್ಗದರ್ಶಕರು
ಡಾ. ಸಿ.ಆರ್.ಗೋವಿಂದರಾಜು
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೦

## ಸಂಶೋಧಕರ ಪ್ರಮಾಣ ಪತ್ರ

ರಾಬರ್ಟ್ ಸಿವೆಲ್‌ರ ಚಾರಿತ್ರಿಕ ಬರೆಹಗಳ ವಿಶ್ಲೇಷಣೆ ಎಂಬ ನಿಬಂಧವನ್ನು ಡಾ.ಸಿ.ಆರ್. ಗೋವಿಂದರಾಜು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್.ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Maruthi K.S

ಮಾರುತಿ ಕೆ.ಎಸ್.
ಸಂಶೋಧಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : ೧೪/೦೮/೧೦

## ಮಾರ್ಗದರ್ಶಕರ ದೃಢೀಕರಣ ಪತ್ರ

ರಾಬರ್ಟ್ ಸಿವೆಲ್‌ರ ಚಾರಿತ್ರಿಕ ಬರೆಹಗಳ ವಿಶ್ಲೇಷಣೆ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ವಿಭಾಗದ ಎಂ.ಫಿಲ್.ಪದವಿಗಾಗಿ ಮಾರುತಿ ಕೆ.ಎಸ್. ಅವರು ನನ್ನ ಮಾರ್ಗದರ್ಶನ ದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಸಿ.ಆರ್.ಗೋವಿಂದರಾಜು
ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : ೧೪.೬.೨೦೧೦

# ಪರಿವಿಡಿ

# ಅಧ್ಯಾಯ ೧

## ಪ್ರವೇಶ

# ೧

# ಪ್ರವೇಶ

## ೧.೧. ಪ್ರವೇಶ

ಭಾರತದ ಮೇಲೆ ವಿದೇಶಿಯರ ದಾಳಿ ಕ್ರಿ.ಪೂ.೬ನೇ ಶತಮಾನದಿಂದಲೂ ನಡೆದಿದೆ. ಆರಂಭದಲ್ಲಿ ಪರ್ಷಿಯನ್ನರು, ಗ್ರೀಕರು, ಕುಶಾನರು ದಾಳಿ ಮಾಡಿದರೆ, ಕ್ರಿ.ಶ.೭ನೇ ಶತಮಾನದಲ್ಲಿ ಅರಬ್ಬರು ಸಂಪತ್ತಿನ ಆಸೆಗಾಗಿ ಆಕ್ರಮಣ ಎಸಗಿದರು. ಕ್ರಿ.ಶ. ೧೧ ಹಾಗೂ ೧೨ನೇ ಶತಮಾನದಲ್ಲಿ ಟರ್ಕರು ನಡೆಸಿದ ಆಕ್ರಮಣಗಳು ಭಾರತದಲ್ಲಿ ಸಾಮ್ರಾಜ್ಯ ಸ್ಥಾಪಿಸುವಂತೆ ಪ್ರೇರಣೆ ನೀಡಿದವು. ಭಾರತದಲ್ಲಿ ಟರ್ಕರು ಎರಡು ಶತಮಾನಗಳ ಕಾಲ ಆಳ್ವಿಕೆ ನಡೆಸಿದರು. ಆದರೆ ಇವರು ಮಂಗೋಲರ ದಾಳಿಗಳನ್ನು ಎದುರಿಸುವಲ್ಲಿ ವಿಫಲರಾದರು. ಇದೇ ಸಮಯಕ್ಕೆ ಯುರೋಪಿನಲ್ಲಿ ಜ್ಞಾನ ಪುನರುಜ್ಜೀವನ ಹಾಗೂ ಭೌಗೋಳಿಕ ಅನ್ವೇಷಣೆಗಳು ನಡೆದವು. ಇವುಗಳ ಪ್ರಭಾವದಿಂದಾಗಿ ಯುರೋಪಿನ ಅನೇಕ ರಾಷ್ಟ್ರಗಳು ಭಾರತದೊಳಗೆ ಹೆಜ್ಜೆ ಇಟ್ಟವು. ಇವರ ಉದ್ದೇಶ ವ್ಯಾಪಾರ ಹಾಗೂ ವಸಾಹತು ಸ್ಥಾಪಿಸುವುದಾಗಿತ್ತು. ಹೀಗೆ ಬಂದವರಲ್ಲಿ ಪೋರ್ಚುಗೀಸರು, ಡಚ್ಚರು, ಆಂಗ್ಲರು ಮತ್ತು ಫ್ರೆಂಚರು ಪ್ರಮುಖರು. ಇಂಗ್ಲೀಷರನ್ನು ಹೊರತುಪಡಿಸಿ ಉಳಿದ ಯಾರು ಭಾರತದಲ್ಲಿ ತಮ್ಮ ನೆಲೆಯನ್ನು ಗಟ್ಟಿಗೊಳಿಸಲಿಲ್ಲ. ಕಾರಣ ಬ್ರಿಟಿಷರ ನೀತಿಗಳು ಬ್ರಿಟಿಷರ ಆಡಳಿತ ವೈಖರಿ, ರಾಜಪ್ರಭುತ್ವದ ಬೆಂಬಲ ಪಡೆಯಿತು.

ಬ್ರಿಟಿಷರು ಭಾರತಕ್ಕೆ ಬಂದದ್ದೇ ವ್ಯಾಪಾರದ ಸಲುವಾಗಿ. ನಮ್ಮಲ್ಲಿದ್ದ ರಾಜಕೀಯ ಅಸ್ಥಿರತೆಯಿಂದ ರಾಷ್ಟ್ರವನ್ನು ವಶಪಡಿಸಿಕೊಳ್ಳಲು ಯತ್ನಿಸಿದರು. ಇದನ್ನು ಸಮರ್ಥವಾಗಿ ಬಳಸಿಕೊಂಡು ತಮ್ಮ ವಸಾಹತುವನ್ನಾಗಿಸಲಾಯಿತು. ಆಂಗ್ಲರು ಭಾರತೀಯರ ಪ್ರತಿಯೊಂದು ಕ್ಷೇತ್ರದಲ್ಲಿ ಪ್ರಭಾವ ಬೀರಿದ್ದು, ಸಹಜವಾಗಿ ರಾಷ್ಟ್ರ ಅವರ ನೇರ ಆಳ್ವಿಕೆಗೆ ಗುರಿಯಾಯಿತು. ಇವರು ಇಂಡಿಯಾವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಭಜಿಸಿ ಆಳ್ವಿಕೆ ಮಾಡಿದರು. ಮದ್ರಾಸ್, ಬಾಂಬೆ, ಕಲ್ಕತ್ತಾಗಳು ಇವರ ಪ್ರಮುಖ

ಪ್ರಾಂತ್ಯಗಳು ಹಾಗೂ ಆಡಳಿತ ಕಚೇರಿಗಳಾಗಿದ್ದವು. ಇವರ ಪ್ರಾಂತ್ಯಾಧಿಕಾರಿಗಳನ್ನು ಗವರ್ನರ್ ಜನರಲ್ ಎಂದು ಕರೆಯುವುದು ಸಾಮಾನ್ಯವಾಗಿತ್ತು. ಸಹಾಯಕರಾಗಿ ಗವರ್ನರ್, ಕಮೀಷನರ್, ಕಲೆಕ್ಟರ್‌ಗಳಿದ್ದರು. ಕಲೆಕ್ಟರ್ ಪದವಿಯು ಆಡಳಿತ ವರ್ಗದಲ್ಲಿ ಪ್ರಬಲವಾಗಿತ್ತು. ಭಾರತಕ್ಕೆ ಬಂದ ಬ್ರಿಟಿಷ್ ಆಡಳಿತಾಧಿಕಾರಿಗಳು ತಮ್ಮ ಆಡಳಿತದ ಜೊತೆಗೆ ಇಲ್ಲಿನ ಸಮಾಜವನ್ನು ಅರಿಯ ತೊಡಗಿದರು. ಆ ಪ್ರದೇಶದ ಸಂಸ್ಕೃತಿ, ಚರಿತ್ರೆ, ಜನಪದ ಕಥೆ, ಲಾವಣಿಗಳನ್ನು ಸಂಗ್ರಹಿಸಿದರು, ಜೊತೆಗೆ ಇಲ್ಲಿನ ಚರಿತ್ರೆಯನ್ನು ತಮಗೆ ಅನುಕೂಲವಾಗುವಂತೆ ರಚಿಸಿದರು. ಅಂಥವರಲ್ಲಿ ಪ್ರಮುಖರೆಂದರೆ ಜೇಮ್ಸ್‌ಮಿಲ್, ಮೆಕೆಂಜಿ, ಬಿ.ಎಲ್. ರೈಸ್, ಫ್ಲೀಟ್ ಮುಂತಾದವರ ಸೇವೆ ಅಪಾರವಾದುದು. ಇವರ ಸಾಲಿಗೆ ಸೇರುವ ಇನ್ನೊಬ್ಬ ಪ್ರಮುಖ ಆಡಳಿತಾಧಿಕಾರಿ ಎಂದರೆ ರಾಬರ್ಟ್ ಸಿವೆಲ್.

ರಾಬರ್ಟ್ ಸಿವೆಲ್ ಒಬ್ಬ ಬ್ರಿಟಿಷ್ ಆಡಳಿತಾಧಿಕಾರಿಯಾಗಿ ಭಾರತಕ್ಕೆ ಬಂದವರು. ಮದ್ರಾಸ್ ಪ್ರಾಂತ್ಯದಲ್ಲಿ ಆಡಳಿತಾಧಿಕಾರಿಯಾಗಿದ್ದು ಹಲವು ಹುದ್ದೆಗಳನ್ನು ನಿರ್ವಹಿಸಿದ್ದಾರೆ. ೧೮೮೪ರಲ್ಲಿ ಬಳ್ಳಾರಿ ಜಿಲ್ಲೆಯ ಕಲೆಕ್ಟರ್ ಆಗಿ ಇಲ್ಲಿನ ಸಮಾಜ, ಸಂಸ್ಕೃತಿ, ಚರಿತ್ರೆಯನ್ನು ಅರಿತಿದ್ದಾರೆ. ಇವರನ್ನು ಬಹುಮುಖ್ಯವಾಗಿ ಗುರುತಿಸುವುದು ಅವರು ತಂದ ಸುಧಾರಣೆಗಳಿಂದ ಅಲ್ಲ. ಬದಲಿಗೆ ಬ್ರಿಟಿಷ್ ಅಧಿಕಾರಿಯಾಗಿ ರಚಿಸಿದ ಕೃತಿಗಳಿಂದ. ಸಿವೆಲ್‌ರನ್ನು ಒಬ್ಬ ಹವ್ಯಾಸಿ ಸಂಶೋಧಕ ಎಂದು ಕರೆದರೂ ತಪ್ಪಿಲ್ಲ. ವಸಾಹತುಶಾಹಿ ಆಡಳಿತದ ಪ್ರತಿನಿಧಿಯಾಗಿ ಕಾಣಿಸುವ ಇವರು ಹಲವು ಐತಿಹಾಸಿಕ ಕೃತಿಗಳನ್ನು ರಚಿಸಿದ್ದಾರೆ. 'ಎ ಫರ್‌ಗಾಟನ್ ಎಂಪೈರ್' ಇವರ ಮೇರುಕೃತಿಯಾಗಿದೆ. ಈ ಕೃತಿಯು ೧೯೦೦ರ ನವೆಂಬರ್ ನಲ್ಲಿ ಲಂಡನ್ನನಲ್ಲಿ ಪ್ರಕಟವಾಯಿತು. ಈ ಕೃತಿಯಲ್ಲಿ ಆಂಗ್ಲರ ಪರೋಕ್ಷ ನಿಲುವುಗಳನ್ನು ವ್ಯಕ್ತಪಡಿಸಿರುವುದನ್ನು ಗಮನಿಸಬಹುದು. ಇಂಥ ಒಬ್ಬ ಚರಿತ್ರೆ ಸಂಶೋಧಕನ ಹಾಗೂ ಅಧಿಕಾರಿಯ ಚಿಂತನೆಗಳ ಹಿನ್ನೆಲೆಯಿಂದ ಕೂಡಿದ ಬರೆಹಗಳನ್ನು ವಿಶ್ಲೇಷಣೆಗೆ ಹಾಗೂ ಅಧ್ಯಯನಕ್ಕೆ ಒಳಪಡಿಸುವ ಒಂದು ಕಿರು ಪ್ರಯತ್ನ ಇದಾಗಿದೆ.

ಸಿವೆಲ್‌ರು ಕೇವಲ ಚರಿತ್ರೆಕಾರನಾಗಿರಲಿಲ್ಲ ಬದಲಿಗೆ ಶಾಸನತಜ್ಞ ಮತ್ತು ಖಗೋಳಶಾಸ್ತ್ರಜ್ಞರು ಆಗಿದ್ದವರು. ಈ ಕ್ಷೇತ್ರಗಳಲ್ಲಿ ಅಪಾರ ಪರಿಣಿತಿಯನ್ನು ಪಡೆದಿದ್ದರು. ದಕ್ಷಿಣ ಭಾರತದ ಚರಿತ್ರೆಗೆ ಸಂಬಂಧಿಸಿದಂತೆ ಅನೇಕ ಶಾಸನಗಳನ್ನು ಸಂಗ್ರಹಿಸಿದ್ದು 'ಎ ಹಿಸ್ಟಾರಿಕಲ್ ಇನ್‌ಸ್ಕ್ರಿಪ್ಷನ್ ಆಫ್ ಸದರ್ನ್ ಇಂಡಿಯಾ' ಎಂಬ ಕೃತಿ ರೂಪದಲ್ಲಿ ಹೊರಬಂದಿದೆ. ಇವರ ಇನ್ನೊಂದು ಕೃತಿ 'ಇಂಡಿಯಾ ಬಿಫೋರ್ ದಿ ಇಂಗ್ಲೀಷ್' ಆಗಿದೆ. ಈ ಕೃತಿಯು ಭಾರತಕ್ಕೆ ಆಂಗ್ಲರು ಮತ್ತು ಆಂಗ್ಲ ಶಿಕ್ಷಣ ಬರುವುದಕ್ಕಿಂತ ಪೂರ್ವದ ಪರಿಸ್ಥಿತಿಯನ್ನು ವಿಶ್ಲೇಷಿಸುವಂಥದ್ದು. ಅಲ್ಲದೆ ಪುರಾಣಗಳು, ಮಹಾಕಾವ್ಯ, ಸುವರ್ಣಯುಗದ ಕಲ್ಪನೆ ಎಷ್ಟು ಸತ್ಯ, ಎಷ್ಟು ಮಿಥ್ಯ ಎನ್ನುವುದನ್ನು ವಿವರಿಸಿ ಅದಕ್ಕೆ ಕಾರಣಗಳನ್ನೂ ನೀಡಿದ್ದಾರೆ. ತೆರಿಗೆ ಪದ್ಧತಿಯನ್ನೂ, ಭೂಕಂದಾಯ ಹಾಗೂ ಬ್ರಿಟಿಷರು ಜಾರಿಗೆ ತಂದ ಸುಧಾರಣೆಗಳನ್ನು ವಿಶ್ಲೇಷಿಸಿರುವುದು ಗಮನಾರ್ಹವಾದುದು.

## ೧.೨. ಉದ್ದೇಶ

ಪ್ರಸ್ತುತ ಅಧ್ಯಯನವು ಸಿವೆಲ್‌ರು ಬರೆದಿರುವ ಹಲವು ಕೃತಿಗಳ ವಿಶ್ಲೇಷಣೆಯಾಗಿದೆ. ಅದರಲ್ಲೂ ವಿಶೇಷವಾಗಿ 'ಎ ಫರ್‌ಗಾಟನ್ ಎಂಪೈರ್' ಕೃತಿಯನ್ನು ಮಾತ್ರ ವಿಶೇಷವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸಿವೆಲ್‌ರ ಬರೆಹಗಳಲ್ಲಿನ ವಸಾಹತುಶಾಹಿ, ಸಾಮ್ರಾಜ್ಯಶಾಹಿ ಧೋರಣೆಗಳ ಜೊತೆಗೆ ಕೋಮುವಾದಿ ನೆಲೆಗಳನ್ನು ಸಹ ಪ್ರಸ್ತುತ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ.

ಸಿವೆಲ್‌ರ ಕಾಲಘಟ್ಟದಲ್ಲಿ ಈ ವಿಷಯದ ಆಯ್ಕೆಗೆ ಎಂಥ ಸನ್ನಿವೇಶವಿತ್ತು ಎಂಬುದು ಮುಖ್ಯವಾದುದು. ಭಾರತದಲ್ಲಿ ಬ್ರಿಟಿಷರು ತಮ್ಮ ಆಳ್ವಿಕೆಯನ್ನು ಬಲಪಡಿಸುವ ಸಲುವಾಗಿ ಹಾಗೂ ಹೊಸ ಪ್ರದೇಶಗಳ ಮೇಲೆ ಹಿಡಿತ ಸಾಧಿಸುವ ಹುನ್ನಾರಗಳನ್ನು ಈ ಕೃತಿಯ ಮೂಲಕ ಪರೋಕ್ಷವಾಗಿ ಬಿಂಬಿತವಾಗಿದೆ. ಸಿವೆಲ್‌ರ ಈ ಕೃತಿಯ ರಚನೆಗೆ ಒದಗಿದ ಅವಕಾಶ, ಈ ಸಾಮ್ರಾಜ್ಯಕ್ಕೆ 'ಮರೆತು ಹೋದ ಮಹಾಸಾಮ್ರಾಜ್ಯ' ಎಂದು ಕರೆಯಲು ಕಾರಣ, ಯಾರಿಂದ ಮರೆತ ಸಾಮ್ರಾಜ್ಯ? ಹೇಗೆ? ಏಕೆ ಮರೆಯಲಾಯಿತು?, ಜನರೆ, ಸ್ಥಳೀಯರೆ, ಆಡಳಿತವರ್ಗವೆ? ಎಂಬ ಅನೇಕ ಪ್ರಶ್ನೆಗಳಿವೆ. ಬ್ರಿಟಿಷ್ ಆಡಳಿತಾಧಿಕಾರಿಯಾಗಿ ಈ ಕೃತಿಯ ರಚನೆಯಲ್ಲಿ ಅವರ ಚಿಂತನೆಗಳು ಇಲ್ಲಿ ಹೇಗೆ ಮೇಳೈಸಿವೆ ಎಂಬುದನ್ನು ತಿಳಿಯಬೇಕಿರುವುದು ಅವಶ್ಯ ಹಾಗೂ ಅನಿವಾರ್ಯ. ಸಿವೆಲ್‌ರ ಆಲೋಚನಾ ಕ್ರಮವು ಸಮಕಾಲೀನ ಸ್ಥಿತಿಗೆ ಹೇಗೆ ಹೊಂದಿಕೊಂಡಿದೆ, ಈ ಸಾಮ್ರಾಜ್ಯವನ್ನು ಅರ್ಥೈಸುವ ಸೈದ್ಧಾಂತಿಕ ನಿಲುವುಗಳಿಗೆ ಕೈಗನ್ನಡಿಯಾಗಿದೆ ಎಂಬುದನ್ನು ಪರಿಶೀಲಿಸುವುದು ಈ ಅಧ್ಯಯನದ ಆಶಯವಾಗಿದೆ.

## ೧.೩. ಅಧ್ಯಯನದ ವಿಧಿ-ವಿಧಾನ

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಹಾಗೂ ಪೂರಕ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಸಮಕಾಲೀನ ಕೃತಿಗಳಲ್ಲಿ ವ್ಯಕ್ತವಾಗಿರುವ ಇತರೆ ಅಂಶಗಳನ್ನು ಗಮನಿಸಿ ಕ್ಷೇತ್ರಕಾರ್ಯದ ಮೂಲಕ ಅವಶ್ಯವಿರುವ ಆಕರಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಅಧ್ಯಯನವನ್ನು ಕೈಗೊಳ್ಳುವುದಾಗಿದೆ.

ವಸಾಹತುಕಾಲದ ಸಂದರ್ಭದಲ್ಲಿ ರಚಿತವಾದ ಈ ಕೃತಿಯನ್ನು ಸಮಕಾಲೀನ ಇತರೇ ಕೃತಿಗಳೊಂದಿಗೆ ಹೋಲಿಸಿ ನೋಡುವ ಮತ್ತು ಆ ಕೃತಿಗಳಲ್ಲಿ ವ್ಯಕ್ತವಾಗಿರುವ ವಿಷಯಗಳನ್ನು ಚಾರಿತ್ರಿಕ ಹಿನ್ನಲೆಯಿಂದ ಚರ್ಚಿಸುವುದಾಗಿದೆ. ವಿಜಯನಗರ ಸಾಮ್ರಾಜ್ಯವನ್ನು ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆಯಾದರೂ ನಿರ್ದಿಷ್ಟವಾಗಿ ಈ ಕೃತಿಯ ಹಾಗೂ ರಾಬರ್ಟ್ ಸಿವೆಲ್‌ರ ಮೇಲೆ ನಡೆದ ಅಧ್ಯಯನಗಳ ಸಂಖ್ಯೆ ವಿರಳ. ಈ ನಿಟ್ಟಿನಲ್ಲಿ ರಾಬರ್ಟ್ ಸಿವೆಲ್‌ರ ಚಾರಿತ್ರಿಕ ಬರೆಹಗಳ ವಿಶ್ಲೇಷಣೆಯೂ ಅವಶ್ಯಕವಾಗಿದೆ. ಸಮರ್ಪಕ ಅಧ್ಯಯನ ನಡೆಸುವ ಕಾರಣದಿಂದ 'ರಾಬರ್ಟ್ ಸಿವೆಲ್‌ರ ಚಾರಿತ್ರಿಕ ಬರೆಹಗಳ ವಿಶ್ಲೇಷಣೆ' ಎಂಬ ಶೀರ್ಷಿಕೆಯ ಅಡಿಯಲ್ಲಿ ಈ ನಿಬಂಧವನ್ನು ರಚಿಸಲಾಗಿದೆ. ಸಾಕಷ್ಟು ಕ್ಷೇತ್ರಕಾರ್ಯ ಗ್ರಂಥಾಲಯ ಹಾಗೂ

ಪತ್ರಾಗಾರಗಳಲ್ಲಿನ ಆಕರ ಸಾಮಾಗ್ರಿಗಳನ್ನು ಬಳಸಿ ಚರಿತ್ರೆಯ ಶಿಸ್ತಿನ ವಿಧಿ-ವಿಧಾನಗಳು ಮುಖೇನ ವಿಶ್ಲೇಷಿಸುವ ಕ್ರಮವನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ.

## ೧.೪. ವ್ಯಾಪ್ತಿ

ಯಾವುದೇ ವಸ್ತು, ವಿಷಯ, ವ್ಯಕ್ತಿ ಅಥವಾ ಘಟನೆಯ ಮೇಲೆ ಅಧ್ಯಯನ ಕೈಗೊಂಡಾಗ ಆ ವಿಷಯದ ಆಯ್ಕೆ ಕುರಿತು ಅದರ ಮಿತಿಗಳನ್ನು ನಿರ್ಧರಿಸುವುದು ಸೂಕ್ತ. ಇದು ವಿಷಯದ ಸ್ವರೂಪ, ಗುಣ-ಲಕ್ಷಣಗಳು ಹಾಗೂ ವ್ಯಾಪ್ತಿಯನ್ನು ಒಳಗೊಳ್ಳುವಂಥದ್ದು.

ಪ್ರಸ್ತುತ ವಿಷಯದ ಆಯ್ಕೆಯು ಹಲವು ನಿಯಂತ್ರಣಗಳನ್ನು ಹೊಂದಿರುತ್ತದೆ. ಸಾಮಾನ್ಯವಾಗಿ ವ್ಯಾಪ್ತಿಯನ್ನು ಇಂತಿಷ್ಟೇ ಎಂದು ನಿರ್ಧರಿಸುವುದು ಕಷ್ಟ. ಅಧ್ಯಯನದ ಸಂದರ್ಭದಲ್ಲಿ ಅದರ ಆಚೆಗೂ ವ್ಯಾಪಿಸುವುದುಂಟು ಅಂತೆಯೇ ರಾಬರ್ಟ್ ಸಿವೆಲ್ ರ ಚಾರಿತ್ರಿಕ ಬರೆಹಗಳ ಕುರಿತ ಅಧ್ಯಯನವು ತನ್ನದೇ ಆದ ವ್ಯಾಪ್ತಿ ಹಾಗೂ ಮಿತಿಗೆ ಒಳಪಟ್ಟಿದೆ. ಸಿವೆಲ್‌ರು ಬರೆದಿರುವ 'ಎ ಫರ್‌ಗಾಟನ್ ಎಂಫೈರ್' ಕೃತಿಯನ್ನು ಮಾತ್ರ ವಿಶೇಷವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿರುವುದು ಇಲ್ಲಿನ ಅಧ್ಯಯನ ಮಿತಿ. ಈ ಕೃತಿಯನ್ನು ವಸಾಹತುಶಾಹಿ ಚಿಂತನೆಗಳ ನೆಲೆಯಲ್ಲಿ ಸಾಮ್ರಾಜ್ಯಶಾಹಿ ಸಿದ್ಧಾಂತದ ಹಿನ್ನೆಲೆ ಹಾಗೂ ಕೋಮುವಾದಿ ವಿಶ್ಲೇಷಣೆಯ ನೋಟದಿಂದ ಹೇಗೆ ಅನುಸಂಧಾನ ನಡೆಸಬಹುದು ಎಂಬುದನ್ನು ಕುರಿತು ವಿವೇಚಿಸಲಾಗಿದೆ. ಸಿವೆಲ್‌ರು ರಚಿಸಿದ, ಇನ್ನುಳಿದ ಕೃತಿಗಳ ಸೂಕ್ಷ್ಮ ಸಮೀಕ್ಷೆ ನಡೆಸಿರುವುದು ಇಲ್ಲಿ ಗಮನಿಸಬೇಕಾದ ಅಂಶವಾಗಿ ರೂಪು ತಳೆದಿದೆ.

## ೧.೫. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ರಾಬರ್ಟ್ ಸಿವೆಲ್‌ರ ಚಾರಿತ್ರಿಕ ಬರೆಹಗಳ ವಿಶ್ಲೇಷಣೆಯಾಗಿದೆ. ಈ ಹಿನ್ನಲೆಯಲ್ಲಿ ಅಧ್ಯಯನದ ಪ್ರಮುಖ ಅಧ್ಯಾಯಗಳನ್ನು ಸ್ಥೂಲವಾಗಿ ಈ ಕೆಳಕಂಡಂತೆ ವರ್ಗೀಕರಿಸಿಕೊಂಡು ವಿಶ್ಲೇಷಿಸುವುದಾಗಿದೆ.

ಮೊದಲನೇ ಅಧ್ಯಾಯವು ಪ್ರವೇಶ, ಉದ್ದೇಶ, ವಿಧಿ-ವಿಧಾನ, ವ್ಯಾಪ್ತಿ ಹಾಗೂ ಸ್ವರೂಪ ಇವುಗಳ ಕುರಿತ ವಿವರಣೆ ಒಳಗೊಂಡಿದೆ.

ಎರಡನೆಯ ಅಧ್ಯಾಯವು ರಾಬರ್ಟ್ ಸಿವೆಲ್‌ರ ಜೀವನ, ಬ್ರಿಟಿಷ್ ಆಡಳಿತಾಧಿಕಾರಿಯಾಗಿ ಸಲ್ಲಿಸಿದ ಸೇವೆ, ಬಳ್ಳಾರಿ ಜಿಲ್ಲೆಯ ಕಲೆಕ್ಟರ್ ಆಗಿ ತಂದ ಸುಧಾರಣೆಗಳು ಅವರು, ರಚಿಸಿದ ಒಟ್ಟು ೪ ಕೃತಿಗಳನ್ನು ವಿಶ್ಲೇಷಿಸುವುದು, ಅವುಗಳಲ್ಲಿ 'ಇಂಡಿಯಾ ಬಿಫೋರ್ ದಿ ಇಂಗ್ಲೀಷ್', 'ಸ್ಕೆಚ್ ದಿ ಡೈನಾಸ್ಟೀಸ್ ಆಫ್ ಸದರ್ನ್ ಇಂಡಿಯಾ', 'ಅನಲಾಟಿಕಲ್ ಹಿಸ್ಟರಿ ಆಫ್ ಇಂಡಿಯಾ' ಇವುಗಳನ್ನು ಸೂಕ್ಷ್ಮವಾಗಿ ಗ್ರಹಿಸುವುದಾಗಿದೆ.

ಮೂರನೆಯ ಅಧ್ಯಾಯವು 'ಎ ಫರ್‌ಗಾಟನ್ ಎಂಪೈರ್' ಕೃತಿಯ ವಿಶ್ಲೇಷಣೆಯಾಗಿದೆ. ಇಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಗೊಂದಲ. ಮೂಲದ ಕುರಿತ ಭಿನ್ನಾಭಿಪ್ರಾಯ ಹಾಗೂ ಅವನತಿಯನ್ನು ಕುರಿತ ವಿಶ್ಲೇಷಣೆ ಮಾಡುವುದು. ಸಾಮ್ರಾಜ್ಯವನ್ನು ಹರಿಹರ-ಬುಕ್ಕರು ಸ್ಥಾಪಿಸಿದ್ದು, ನಿಖರವಾಗಿ ಎಂದು ಸ್ಥಾಪಿತವಾಯಿತು, ಸಂಗಮರ ಮೂಲ ಕುರುಬ, ಗೊಲ್ಲ, ಬೇಡರೇ ಎಂಬ ಇತ್ಯಾದಿ ವಾದಗಳನ್ನು ಇಲ್ಲಿ ಚರ್ಚಿಸಲಾಗಿದೆ. ಸಾಮ್ರಾಜ್ಯ ಹಾಗೂ ರಾಜಧಾನಿಯ ಅವನತಿಗೆ ರಾಮರಾಯ ಕಾರಣನೇ ಅಥವಾ ಅವನ ನೀತಿಯೇ, ಧರ್ಮವೇ ಎಂಬುದನ್ನು ಸಹ ಚರ್ಚಿಸಿ ಅರ್ಥೈಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ವಿಜಯನಗರದ ಇತಿಹಾಸ ರಚನೆಯಲ್ಲಿ ಸಿವೆಲ್‌ರನ್ನು ನಾವು ನೋಡುವ ದೃಷ್ಟಿಕೋನಗಳನ್ನು ಕುರಿತು ಚರ್ಚಿಸಲಾಗಿದೆ. ಇಲ್ಲಿ ಬ್ರಿಟಿಷ್ ಆಡಳಿತಾಧಿಕಾರಿಯಾಗಿ ಬ್ರಿಟಿಷರ 'ಒಡೆದು ಆಳುವ ನೀತಿ'ಯನ್ನು ಹೇಗೆ ಸಾಧಿಸಿದ್ದಾರೆ. ಕೋಮುವಾದಿಯಾಗಿ, ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿ ಸಿದ್ಧಾಂತಗಳ ನೆಲೆಯಲ್ಲಿ ಹೇಗೆ ಅನುಸಂಧಾನ ನಡೆಸಿದ್ದಾರೆ ಎಂಬುದನ್ನು ಸಹ ತಿಳಿಯುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ಐದರಲ್ಲಿ ಅಧ್ಯಯನದ ಬಗ್ಗೆ ತಳೆದ ನಿಲುವುಗಳು ಹಾಗೂ ಫಲಿತಗಳನ್ನು ಕುರಿತು ಚರ್ಚಿಸಲಾಗಿದೆ.

# ಅಧ್ಯಾಯ ೨

# ರಾಬರ್ಟ್ ಸಿವೆಲ್ ಬದುಕು-ಬರಹ

೨.೧. ರಾಬರ್ಟ್ ಸಿವೆಲ್‌ರ ಜೀವನ ಪರಿಚಯ

೨.೨. ಬಳ್ಳಾರಿ ಜಿಲ್ಲೆಯ ಕಲೆಕ್ಟರ್

೨.೩. ಸಿವೆಲ್‌ರ ಕೃತಿಗಳು

೨.೪. ಆಯ್ದ ಕೃತಿಗಳ ಸೂಕ್ಷ್ಮ ಸಮೀಕ್ಷೆ

೨.೪.೧. ಇಂಡಿಯಾ ಬಿಫೋರ್ ದಿ ಇಂಗ್ಲೀಷ್

೨.೪.೨. ಸ್ಕೆಚ್ ದಿ ಡೈನಾಸ್ಟಿಸ್ ಆಫ್ ಸದರ್ನ್ ಇಂಡಿಯಾ

೨.೪.೩. ಕ್ರೋನಲಾಜಿಕಲ್ಸ್ ಟೇಬಲ್ ಫಾರ್ ಸದರ್ನ್ ಇಂಡಿಯಾ ಫ್ರಮ್ ದಿ ಸಿಕ್ಸ್ತ್ ಸೆಂಚುರಿ ಎ.ಡಿ.

೨.೪.೪. ಅನಲಾಟಿಕಲ್ ಹಿಸ್ಟರಿ ಆಫ್ ಇಂಡಿಯಾ

# ೨

# ರಾಬರ್ಟ್ ಸಿವೆಲ್ ಬದುಕು-ಬರಹ

## ೨.೧. ರಾಬರ್ಟ್ ಸಿವೆಲ್ ಜೀವನ ಪರಿಚಯ

ಕರ್ನಾಟಕದ ಸಾಂಸ್ಕೃತಿಕ ಹಾಗೂ ರಾಜಕೀಯ ಚರಿತ್ರೆಗೆ ಕೊಡುಗೆ ನೀಡಿದ ಮಹನೀಯರಲ್ಲಿ ರಾಬರ್ಟ್ ಸಿವೆಲ್‌ರು ಒಬ್ಬರು. ಇವರು ೧೮೪೫ರಲ್ಲಿ ಜನಿಸಿದರು. ಇಂಗ್ಲೆಂಡಿನ ಪ್ರತಿಷ್ಠಿತ ಪಟ್ಟಣವಾದ 'ರ್‍ಯಾಡ್ಲೆ'ಯ ಸೇಂಟ್ ಪೀಟರ್ ಕಾಲೇಜಿನಲ್ಲಿ ಉನ್ನತ ಶಿಕ್ಷಣವನ್ನು ಪೂರೈಸಿದ್ದಾರೆ. ತನ್ನ ೨೧ನೇ ವಯಸ್ಸಿನಲ್ಲಿ ಭಾರತೀಯ ನಾಗರಿಕ ಸೇವಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ನಾಗರಿಕ ಸೇವೆಗೆ ಪಾದಾರ್ಪಣೆ ಮಾಡಿದರು. ಡಿಸೆಂಬರ್ ೧೯, ೧೮೬೮ರಲ್ಲಿ ಭಾರತಕ್ಕೆ ಪ್ರವೇಶ. ಆರಂಭದಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಕಾರ್ಯ ನಿರ್ವಹಿಸಲು ಸೂಚನೆ. ೧೮೬೯ರಲ್ಲಿ ಉತ್ತರ ಅರ್ಕಾಟ ಜಿಲ್ಲೆಯ ಸಹಾಯಕ ಕಲೆಕ್ಟರ್ ಹಾಗೂ ಮ್ಯಾಜಿಸ್ಟ್ರೇಟ್ ಆಗಿ ನೇಮಕ. ತಮ್ಮ ಹುದ್ದೆಗೆ ಗೌರವ ತಂದುಕೊಟ್ಟ ಇವರನ್ನು ೧೮೭೩ರಲ್ಲಿ ಗೋದಾವರಿ ಜಿಲ್ಲೆಯ ಸಹಾಯಕ ಕಲೆಕ್ಟರಾಗಿ ನೇಮಿಸಲಾಯಿತು. ೧೮೭೭ರ ಅವಧಿಯಲ್ಲಿ 'ಗ್ರೇಟ್ ಬ್ರಿಟನ್ ಆ್ಯಂಡ್ ಐರ್‌ಲ್ಯಾಂಡ್ ಆ್ಯಂಡ್ ಒನ್ ಆಫ್ ದಿ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್'ದ ಸದಸ್ಯರಾಗಿ ಸೇರ್ಪಡೆಯಾಗುತ್ತಾರೆ.[೧]

ಆಡಳಿತದ ಅವಧಿಯಲ್ಲಿ ತಮ್ಮ ಬಿಡುವಿನ ವೇಳೆಯನ್ನು ಸದುಪಯೋಗ ಪಡಿಸಿಕೊಂಡು ಅನೇಕ ಲೇಖನಗಳನ್ನು ರಚಿಸಿದ್ದಾರೆ. ಸಂಸ್ಕೃತಿ, ಚರಿತ್ರೆ, ಜೋತಿಷ್ಯಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಹಲವು ಬರಹಗಳು ಇವರ ಲೇಖನಿಯಿಂದ ಮೂಡಿ ಬಂದಿವೆ. 'ರಿಪೋರ್ಟ್ ಆ್ಯನ್ ದಿ ಅಮರಾವತಿ ಸ್ತೂಪ್ ಆ್ಯಂಡ್ ಎಕ್ಸ್‌ಕವೇಷನ್ ಆ್ಯನ್ ಇಟ್ಸ್‌ಸೈಟ್' ೧೮೮೦ರಲ್ಲಿ ಪ್ರಕಟಿಸಿದರು.[೨] ಭಾರತೀಯರಿಗೆ ಕಾಲಾನುಕ್ರಮಣಿಕೆಯ ಮಹತ್ತ್ವವನ್ನು ತಿಳಿಸಿಕೊಡುವ ಸಲುವಾಗಿ 'ಕ್ರೊನಲಾಜಿಕಲ್ ಟೇಬಲ್ಸ್ ಫಾರ್ ಸೌತ್ ಇಂಡಿಯಾ'ವನ್ನು ೧೮೮೧ರಲ್ಲಿ ಹೊರತಂದರು. ಈ ಕೃತಿಯು ಶಾಲಿವಾಹನ ಶಕ, ಕ್ರಿಸ್ತ ಶಕ, ಸಂವತ್ಸರಾ, ಹಿಜಿರಾ ಶಕ ಮುಂತಾದ ವಿಚಾರಗಳನ್ನು ಒಳಗೊಂಡಿದೆ. ೧೮೮೨-೮೪ರ ಅವಧಿಯಲ್ಲಿ 'ಲಿಸ್ಟ್ ಆಫ್ ಆ್ಯಂಟಿಕ್ವೇರಿಯನ್

ರಿಮೈನ್ಸ್ ಇನ್ ದಿ ಪ್ರೆಸಿಡೆನ್ಸಿ ಆಫ್ ಮದ್ರಾಸ್'ನ್ನು ರಚಿಸಿದರು. ಇದನ್ನು 'ಆರ್ಕಿಯಾಲಾಜಿಕಲ್ ಸರ್ವೆ ಆಫ್ ಸೌತ್ ಇಂಡಿಯಾ'ದವರು ಪ್ರಕಟಿಸಿದ್ದಾರೆ. ಇದು ಎರಡು ಸಂಪುಟಗಳನ್ನು ಒಳಗೊಂಡಿದೆ.

೧೮೮೦ರಲ್ಲಿ ಚಂಗಲ್‌ಪೇಟೆ, ೧೮೮೧ರಲ್ಲಿ ಮಲಬಾರ್‌ಗೆ ಸಹಾಯಕ ಕಲೆಕ್ಟರ್ ಹಾಗೂ ಮ್ಯಾಜಿಸ್ಟ್ರೇಟ್ ಆಗಿ ನೇಮಕವಾಗುವರು. ೧೮೮೪ರಲ್ಲಿ ತಿನ್ನವೆಲ್ಲ ಜಿಲ್ಲೆಗೆ ಉಪ ಆಯುಕ್ತರಾಗಿ ನೇಮಕ. ೧೮೮೮ರಲ್ಲಿ ಹಂಗಾಮಿ ಜಿಲ್ಲಾಧಿಕಾರಿ ಹಾಗೂ ನ್ಯಾಯಾಧೀಶರಾಗಿ ಆಂಧ್ರಪ್ರದೇಶದ ಕೃಷ್ಣ ಜಿಲ್ಲೆ, ದಕ್ಷಿಣ ಹಾಗೂ ಉತ್ತರ ಮಲಬಾರ್ ಗೆ ನೇಮಕವಾಗುತ್ತಾರೆ. ಈ ಮಧ್ಯೆ ೧೮೮೧ರಲ್ಲಿ ಬಳ್ಳಾರಿ ಜಿಲ್ಲೆಗೆ ಹಂಗಾಮಿ ಕಲೆಕ್ಟರಾಗಿ ನೇಮಕ ಮುಂದುವರಿದು ತಮಿಳುನಾಡಿನ ಸೇಲಂ ಜಿಲ್ಲೆಗೆ ೧೮೮೯, ಬಳ್ಳಾರಿಗೆ ೧೮೯೦-೯೧ ರವರೆಗೆ ಕಲೆಕ್ಟರ್ ಹಾಗೂ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಇಲ್ಲಿನ ಚರಿತ್ರೆಯನ್ನು ಕಟ್ಟಿಕೊಡುವ ನೆಪದಲ್ಲಿ ತಮ್ಮ ವಸಾಹತು ಧೋರಣೆಯನ್ನು ಅನುಸರಿಸಿದ್ದಾರೆ. ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ಕಟ್ಟಿಕೊಟ್ಟು ಅದರ ಮರೆಯಲಾರದ ಲೇಖಕರಾದರು.

## ೨.೨. ಬಳ್ಳಾರಿ ಜಿಲ್ಲೆಯ ಕಲೆಕ್ಟರ್

ರಾಬರ್ಟ್ ಸಿವೆಲ್ ಬಳ್ಳಾರಿ ಜಿಲ್ಲೆಯ ಹಂಗಾಮಿ ಕಲೆಕ್ಟರಾಗಿ ನಾಲ್ಕು ಬಾರಿ ನೇಮಕವಾದರು. ಇವರ ಆಡಳಿತದ ಅವಧಿ ೨೩.೮.೧೮೮೪ ರಿಂದ ೧೫.೫.೧೮೯೪ರವರೆಗೆ. ೧೮೮೯ ರಿಂದ ೧೮೯೧ ರವರೆಗೆ[೩] ಬಳ್ಳಾರಿ ಜಿಲ್ಲಾ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸಿದರು. ಪ್ರಾಚ್ಯವಸ್ತುಗಳ ಸಂರಕ್ಷಣೆಯಲ್ಲಿ ಹೆಚ್ಚು ಆಸಕ್ತಿಯಿಂದ ನಿರತರಾಗಿದ್ದ ಇವರು ಹಂಪಿಯ ಜೊತೆ ಅವಿನಾಭಾವ ಸಂಬಂಧ ಹೊಂದಿದ್ದರು.

ಇವರು ಆಡಳಿತಾತ್ಮಕವಾಗಿ ಕೆಲವು ಸುಧಾರಣೆಗಳನ್ನು ಜಾರಿಗೆ ತಂದರು. ವಿಶೇಷವಾಗಿ

೧. ಆಡಳಿತ ಭದ್ರತೆಗಾಗಿ ಗ್ರಾಮಾಧಿಕಾರಿಗಳ ನೇಮಕ.

೨. ಖಜಾನೆಗಳಲ್ಲಿ ಹಣ ಸೋರುವಿಕೆಯನ್ನು ತಡೆಯಲು ತೆರಿಗೆ ಸಂಗ್ರಹಕಾರ ಹಾಗೂ ಮೇಲ್ವಿಚಾರಕರ ನೇಮಕ.

೩. ಕ್ಷಾಮ, ಬರಗಾಲ ಬಂದಾಗ ಬಡರೈತರು ಚೇತರಿಸಿಕೊಳ್ಳಲು ಕಷ್ಟವಾದ ಸಂದರ್ಭದಲ್ಲಿ ಅಸಮರ್ಥ ಕುಟುಂಬದಿಂದ ಮನೆ ತೆರಿಗೆಯನ್ನು ವಿನಾಯತಿಗೊಳಿಸಿದನು.

೪. ಕಠಿಣವಾದ ತೆರಿಗೆಗಳನ್ನು ಸಡಿಲಿಸಿ, ನಿರ್ಲಕ್ಷಿತರಿಗೆ ತೆರಿಗೆ ಮಾಫಿ ಮಾಡಿದನು.

ಸಾಂಸ್ಕೃತಿಕ ಕೊಡುಗೆಗಳೆಂದರೆ

೧. ಹಂಪಿಯ ವಿರೂಪಾಕ್ಷ ಸ್ವಾಮಿ ದೇವಾಲಯದ ದೊಡ್ಡ ಗೋಪುರದ ಜೀರ್ಣೋದ್ಧಾರ.

೨. ವಿಠ್ಠಲ ದೇವಾಲಯದ ಹತ್ತಿರವಿರುವ ಕಲ್ಲಿನ ರಥದ ಮೇಲ್ಭಾಗದಲ್ಲಿದ್ದ ಗೋಪುರವು ಬಿರುಕು ಬಿಟ್ಟಿದ್ದರಿಂದ ಅದನ್ನು ಪಕ್ಕಕ್ಕೆ ಸ್ಥಳಾಂತರಿಸಲಾಯಿತು.

೩. ಮಹಾನವಮಿ ದಿಬ್ಬದ ಹತ್ತಿರ ಪ್ರತ್ಯೇಕವಾಗಿ ಬಿದ್ದಿದ್ದ ಶಿಲ್ಪಪಟ್ಟಿಕೆಗಳನ್ನು ತೆಗೆದು ಕ್ರಮಬದ್ಧವಾಗಿ ಜೋಡಿಸಿದರು.

೧೮೬೮ ರಿಂದ ೧೮೯೪ರವರೆಗೆ ಮದ್ರಾಸ್ ಪ್ರಾಂತ್ಯದ ವಿವಿಧ ಭಾಗಗಳಲ್ಲಿ ಹಲವು ಹುದ್ದೆಗಳನ್ನು ನಿರ್ವಹಿಸಿದ ಇವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಸಿವೆಲ್‌ರು ಕೇವಲ ಆಡಳಿತಗಾರ, ನ್ಯಾಯಾಧೀಶ ಮಾತ್ರ ಆಗಿರಲಿಲ್ಲ. ಬದಲಿಗೆ ಒಬ್ಬ ಶಾಸನತಜ್ಞ, ಜೋತಿಷ್ಯ ಶಾಸ್ತ್ರಜ್ಞ ಹಾಗೂ ಇತಿಹಾಸಕಾರರಾಗಿರುವರು. ನಾಡಿನ ಸಂಸ್ಕೃತಿ, ಚರಿತ್ರೆ, ಭಾರತೀಯರು ಆಚರಿಸುವ ಅಂಶಗಳನ್ನು ಕುರಿತು ವಿಶೇಷ ಕಾಳಜಿ ವಹಿಸಿದ್ದಾರೆ. ಸಿವೆಲ್ ರು ೧೯೨೫ರಲ್ಲಿ ಇಹಲೋಕ ತ್ಯಜಿಸಿದರು. ಅವರು ರಚಿಸಿದ ಕೃತಿಗಳು ಅವರನ್ನು ಅಮರರನ್ನಾಗಿಸಿವೆ.

## ೨.೩. ರಾಬರ್ಟ್ ಸಿವೆಲ್‌ರ ಕೃತಿಗಳು

೧. ಎ ಫರ್‌ಗಾಟನ್ ಎಂಪೈರ್(೧೯೦೦)

೨. ಇಂಡಿಯಾ ಬಿಫೋರ್ ದಿ ಇಂಗ್ಲೀಷ್(೧೮೯೭)

೩. ದಿ ಹಿಸ್ಟಾರಿಕಲ್ ಇನ್ ಸ್ಕ್ರಿಪ್ಷನ್ ಆಫ್ ಸದರ್ನ್ ಇಂಡಿಯಾ ಆ್ಯಂಡ್ ಔಟ್‌ಲೈನ್ ಆಫ್ ಪೊಲಿಟಿಕಲ್ ಹಿಸ್ಟರಿ(೧೯೩೨)

೪. ಸ್ಕೆಚ್ ದಿ ಡೈನಾಸ್ಟಿಸ್ ಆಫ್ ಸದರ್ನ್ ಇಂಡಿಯಾ(೧೮೮೩)

೫. ಸಿದ್ಧಾಂತಾಸ್ ಆ್ಯಂಡ್ ದಿ ಇಂಡಿಯನ್ ಕ್ಯಾಲೆಂಡರ್(೧೯೨೪)

೬. ಲಿಸ್ಟ್ ಆಫ್ ದಿ ಆ್ಯಂಟಿಕ್ವೇರಿಯನ್ ರಿಮೈನ್ಸ್ ಇನ್ ದಿ ಪ್ರೆಸಿಡೆನ್ಸಿ ಆಫ್ ಮದ್ರಾಸ್ - ಸಂಪುಟ I ಮತ್ತು II(೧೮೮೨ ಮತ್ತು ೧೮೮೪)

೭. ಅನಲಾಟಿಕಲ್ ಹಿಸ್ಟರಿ ಆಫ್ ಇಂಡಿಯಾ

೮. ಇಂಡಿಯನ್ ಕ್ರೋನಲಾಜಿ(ಸಂ)(೧೮೯೪)

೯. ಕ್ರೋನಲಾಜಿಕಲ್ ಟೇಬಲ್ಸ್ ಫಾರ್ ಸದರ್ನ್ ಇಂಡಿಯಾ ಫ್ರಮ್ ದಿ ಸಿಕ್ಸ್ತ್ ಸೆಂಚುರಿ ಎ.ಡಿ.(೧೮೮೧)

೧೦. ಎಕ್ಲಿಪ್ಸ್ ಆಫ್ ದಿ ಮೂನ್ ಇನ್ ಇಂಡಿಯಾ(೧೮೯೮)

೧೧. ಇಂಡಿಯನ್ ಕ್ರೋನೋಗ್ರಾಫಿ(೧೯೧೨)

## ೨.೪. ಆಯ್ದ ಕೃತಿಗಳ ಸೂಕ್ಷ್ಮ ಸಮೀಕ್ಷೆ

ಬಿಡುವಿನ ವೇಳೆಯನ್ನು ಸದುಪಯೋಗಪಡಿಸಿಕೊಂಡ ಇವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳು ಒಳಗೊಂಡಿರುವ ವಿಷಯಗಳಾದರೂ ಏನು? ಎಂಬುದರ ಕುರಿತು ಚರ್ಚಿಸುವುದು ಅವಶ್ಯ. ಇವರು ಸ್ಥಳೀಯ ಚರಿತ್ರೆಯನ್ನು ಕುರಿತು ಅನೇಕ ಮಹತ್ವದ ಸಂಗತಿಗಳನ್ನು ಹೊರಗೆಡವಿದ್ದಾರೆ. ಇಂಥ ಕೃತಿಗಳಲ್ಲಿ ಕೆಲವನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅಂಥ ಒಂದು ಕಿರು ಪ್ರಯತ್ನ ಇಲ್ಲಿದೆ.

### ೨.೪.೧ ಇಂಡಿಯಾ ಬಿಫೋರ್ ದಿ ಇಂಗ್ಲೀಷ್

ರಾಬರ್ಟ್ ಸಿವೆಲ್‌ರನ್ನು ಚರಿತ್ರಕಾರನಾಗಿ ಪರಿಗಣಿಸಿದಂತೆ ಇಂಗ್ಲೆಂಡಿನ ಹಾಗೂ ಇಂಗ್ಲೀಷಿನ ವಿಚಾರದಲ್ಲಿ ಅಷ್ಟೇ ಹೊಗಳು ಭಟ್ಟರಾಗಿದ್ದಾರೆ. ರಾಣಿ ಎಲಿಜಬೆತ್‌ಳನ್ನು ಖುಷಿಪಡಿಸುವ ಕೆಲಸಕ್ಕೆ ಇವರನ್ನು ನಿಯೋಚಿಸಿದಂತಿದೆ. ಇವರು ರಚಿಸಿದ ಪ್ರಮುಖ ಕೃತಿಗಳಲ್ಲಿ 'ಇಂಡಿಯಾ ಬಿಫೋರ್ ದಿ ಇಂಗ್ಲೀಷ್' ಒಂದು. ೧೮೯೭ರಲ್ಲಿ ಏಪ್ರಿಲ್ ೮ರಿಂದ ಮೇ ೧೩ರವರೆಗೆ ನಡೆದ 'ಈಸ್ಟ್ ಇಂಡಿಯಾ ಅಸೋಸಿಯೇಷನ್' ಲಂಡನ್ನಿನ ಸಭೆಯಲ್ಲಿ ಮಂಡಿಸಿದ ವಿಶೇಷ ವರದಿಯಾಗಿದೆ. ಈ ಕೃತಿಯ ಬ್ರಿಟಿಷ್ ಸಾಮ್ರಾಜ್ಯಶಾಹಿ ನೀತಿಯನ್ನು ಸ್ಥಿರಪಡಿಸಿದ್ದು, ಬ್ರಿಟಿಷರು ಜಾರಿಗೆ ತಂದ ಸುಧಾರಣೆಗಳನ್ನು ಪಡಿಮೂಡಿಸಿದಂತಿದೆ. ಇದೇ ಅಂಶಗಳನ್ನು ತಮ್ಮ ಇತರೇ ಕೃತಿಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಇದಕ್ಕೆ 'ಎ ಫರ್‌ಗಾಟನ್ ಎಂಪೈರ್' ಕೃತಿಯೂ ಹೊರತಾಗಿಲ್ಲ. ಇವರ ಆಲೋಚನೆ, ಗ್ರಹಿಕೆ ಹೇಗಿದೆಯೆಂದರೆ "ಆಧುನಿಕ ಪಾಶ್ಚಾತ್ಯ ಗ್ರಹಿಕೆಯೊಂದರಿಂದಲೇ 'ಭಾರತೀಯ ಸಮಾಜಗಳ ಭವಿಷ್ಯ' ಎನ್ನುವ ಐರೋಪ್ಯ ಕೇಂದ್ರಿತ ವಿಚಾರಗಳಿಂದ ಈ ಕೃತಿಯು ಹೊರತಾಗಿಲ್ಲ. ಈ ವಿಶೇಷ ವರದಿಯಲ್ಲಿ ಭಾರತೀಯ ಸಮಾಜ, ಪ್ರಾಚೀನ ಮಧ್ಯಕಾಲೀನ ಪರಿಸ್ಥಿತಿಯನ್ನು ತೆಗಳಿ ಬರೆದಿರುವರು. ಆದರೆ ಬ್ರಿಟಿಷರು ಆಳ್ವಿಕೆ ವಹಿಸಿಕೊಂಡ ನಂತರ ಭಾರತವು ಆಧುನಿಕತೆಯನ್ನು ಮೈಗೂಡಿಸಿಕೊಂಡಿದೆ ಎಂಬ ವಾದವನ್ನು ಮುಂದಿಡುತ್ತಾರೆ. ಈ ವಾದಕ್ಕೆ ಸ್ಪಷ್ಟನೆ ನೀಡಲು ಅನೇಕ ಲೋಕೋಪಯೋಗಿ ಕಾರ್ಯಗಳನ್ನು, ಜಾರಿಗೆ ತಂದಿರುವುದನ್ನು ಪ್ರಸ್ತಾಪಿಸುತ್ತಾರೆ. ರೈಲ್ವೆ, ರಸ್ತೆ ನಿರ್ಮಾಣ, ತೆರಿಗೆಗಳ ಸುಧಾರಣೆ, ಭೂ ಕಂದಾಯ, ರೈತರ ಸ್ಥಿತಿಗತಿ, ಶಿಕ್ಷಣ ಮುಂತಾದ ಸುಧಾರಣೆಗಳನ್ನು ಇಲ್ಲಿ ಉದಾಹರಿಸಿದ್ದಾರೆ.

ಇವರು ತಮ್ಮ ವಾದವನ್ನು ಪ್ರಾರಂಭಿಸುವುದು ಹೀಗೆ, ಭಾರತದಲ್ಲಿ ಬ್ರಿಟಿಷ್ ಆಡಳಿತದ ಸಾಫಲ್ಯ ಹಾಗೂ ವೈಫಲ್ಯದ ಕುರಿತು ಈ ಮಧ್ಯೆ ಅನೇಕ ಗೊಂದಲ ಹಾಗೂ ಭಿನ್ನಾಭಿಪ್ರಾಯಗಳಿಗೆ ಎಡೆ ಮಾಡಿದೆ. ಈವರೆಗೂ ಬ್ರಿಟಿಷರು ಸಾಧಿಸಿದ ಪ್ರಗತಿಯು ಭಾರತವನ್ನು ಕೇವಲ ದೇಹ ಹಾಗೂ ಆತ್ಮವನ್ನು ಬಿಟ್ಟು ಉಳಿದುದೆಲ್ಲಾವನ್ನು ಧ್ವಂಸಗೊಳಿಸಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[೪] ಆದರೆ ಈ ವಾದಕ್ಕೆ ಬಲವಾದ ಹಾಗೂ ಐತಿಹಾಸಿಕ ಸತ್ಯವನ್ನು ಒಳಗೊಂಡ ಪ್ರತಿವಾದಗಳನ್ನು ಎಳೆತಂದು ಬ್ರಿಟಿಷರ

ಆಡಳಿತವನ್ನು ನಿರ್ದೋಷಿಯಾಗಿಸುವ ಪ್ರಯತ್ನವನ್ನು ಈ ಕೃತಿಯಲ್ಲಿ ಮಾಡಲಾಗಿದೆ. ಮೊದಲಿಗೆ ಭಾರತೀಯರ ಸ್ಥಿತಿಯನ್ನು ತೆಗಳುವುದು. ಕೊನೆಯಲ್ಲಿ ಬ್ರಿಟಿಷ್‌ರ ಕಾರ್ಯವೈಖರಿಯನ್ನು ಮೆಚ್ಚಿ ಬರೆಯುವುದು. ಬ್ರಿಟಿಷರು ಜಾರಿಗೆ ತಂದ ನೀತಿಗಳ ಹಾಗೂ ಸುಧಾರಣೆಗಳನ್ನು ಈ ಕೃತಿಯು ವಿಶ್ಲೇಷಿಸುವುದು. ಇಲ್ಲಿ ಚರ್ಚಿತವಾಗುವ ಪ್ರಮುಖ ವಿಷಯಗಳೆಂದರೆ ಪ್ರಾಚೀನ ಭಾರತದ ಸಾಮ್ರಾಜ್ಯ, ಅಶೋಕ, ಅಶೋಕನ ನಂತರದ ಭಾರತ, ತೆರಿಗೆ ಪದ್ಧತಿ, ಭೂಕಂದಾಯ, ಜನರ ಸ್ಥಿತಿಗತಿ ಬರ-ಕ್ಷಾಮ ರಸ್ತೆ ಹಾಗೂ ಸಂಪರ್ಕ ಸಾಧನಗಳ ಜೊತೆಗೆ ಬ್ರಿಟಿಷರು ಜಾರಿಗೆ ತಂದ ಸುಧಾರಣೆಗಳಾಗಿವೆ.

ಇವರ ಅಭಿಪ್ರಾಯದಂತೆ ಪ್ರಾಚೀನ ಭಾರತದ ಸಾಮ್ರಾಜ್ಯವು ಒಂದು ಕಟ್ಟುಕಥೆ, ದಂತಕಥೆ ಆಗಿದೆ.[೫] ಇದು ಒಂದು ರಾಷ್ಟ್ರ ಒಬ್ಬ ರಾಜನ ಆಳ್ವಿಕೆಯಲ್ಲಿ ಇರಲಿಲ್ಲ. ಅನೇಕ ಬುಡಕಟ್ಟು ಹಲವು ಜನಾಂಗಗಳಿಂದ ತುಂಬಿದೆ. ಅಸೂಯೆಯಿಂದ ಒಬ್ಬ ಇನ್ನೊಬ್ಬರ ಮೇಲೆ ಯುದ್ಧ ಮಾಡುವುದು ಸಾಮಾನ್ಯವಾಗಿತ್ತು. ಮೊಘಲ್ ಸಾಮ್ರಾಜ್ಯವು ಸಾರ್ವಭೌಮತೆಯನ್ನು ಹೊಂದಿದ್ದರು. ಶಾಂತಿ ಹಾಗೂ ಇಡೀ ಭಾರತವನ್ನು ಏಕಾಚಕ್ರಾಧಿಪತ್ಯಕ್ಕೆ ಒಳಪಡಿಸಲಾಗಿರಲಿಲ್ಲ. ಆದರೆ ೧೯ನೇ ಶತಮಾನದ ಅಂತ್ಯದ ವೇಳೆಗೆ ಇಡೀ ಭಾರತವನ್ನು ಶಾಂತಿ ಹಾಗೂ ಸಾರ್ವಭೌಮತೆಯನ್ನು ಒಂದೇ ಒಕ್ಕೂಟದಡಿಯಲ್ಲಿ ನೋಡಬಹುದು. ಅದು ಬ್ರಿಟಿಷ್ ಸಾಮ್ರಾಜ್ಯವಾಗಿತ್ತು ಎಂಬ ನಿಲುವು ತಳೆದಿರುವರು. ಆದರೆ ಇವರಿಗೆ ಮೌರ್ಯಸಾಮ್ರಾಜ್ಯವು ಇಡೀ ಭಾರತವನ್ನು ಏಕಾಚಕ್ರಾಧಿಪತ್ಯಕ್ಕೆ ಒಳಪಡಿಸಿತ್ತು ಎನ್ನುವುದಕ್ಕೆ ಅಶೋಕನ ಅನೇಕ ಶಾಸನಗಳು ದಕ್ಷಿಣ ಭಾರತದಲ್ಲಿ ದೊರೆತಿರುವುದು ಇದಕ್ಕೆ ಪುಷ್ಟಿಕೊಡುತ್ತವೆ. ಸಿವೆಲ್‌ರು ಇದನ್ನು ಮರೆತಂತಿದೆ.

ರಾಮಾಯಣ, ಮಹಾಭಾರತ ಮಹಾಕಾವ್ಯಗಳಾದರ ಅವುಗಳ ರಚನೆಯಾದ ಕಾಲವನ್ನು ಇಂದಿಗೂ ನಿರ್ಣಯಿಸಲು ಅಸಾಧ್ಯವಾಗಿದೆ ಎಂದಿರುವರು.[೬] ಮುಂದುವರಿದು ಈ ಕೃತಿಯಲ್ಲಿ ದ್ರಾವಿಡರನ್ನು ದಸ್ಯುಗಳೆಂದು, ಟರೇನಿಯನ್ ಟ್ರೈಬ್ಸ್ ಎಂಬ ಕರೆದಿದ್ದಾರೆ. ದ್ರಾವಿಡರನ್ನು ಇಲ್ಲಿ ಹೀನಾಯವಾಗಿ ಚಿತ್ರಿಸಿ, ಇವರನ್ನು ದುಷ್ಟಶಕ್ತಿಗಳು ಪಿಶಾಚಿಗಳು, ಅನಾಗರಿಕರೆಂದು ಇವರಿಗೆ ತಮ್ಮದೇ ಆದ ಸ್ವಯಂ ಆಡಳಿತ ವ್ಯವಸ್ಥೆ ಇರಲಿಲ್ಲ, ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿದ್ದರೆಂದು ಹೀಗಳೆದಿದ್ದಾರೆ.[೭] ಆರ್ಯ ಮತ್ತು ದ್ರಾವಿಡರಿಗೆ ನಡೆದ ಯುದ್ಧವನ್ನು ಬಳಸಿಕೊಂಡು, ಇವರ ನಡುವಿನ ವೈಷಮ್ಯವನ್ನು ಶ್ರೇಷ್ಠ ಹಾಗೂ ಕನಿಷ್ಟ ಎಂಬ ಭಾವನೆಯನ್ನು ಮೂಡಿಸಲು ಪ್ರಯತ್ನಿಸಿರುವರು. ಉತ್ತರ ಹಾಗೂ ದಕ್ಷಿಣ ಭಾರತದ ಮಧ್ಯೆ ಬಿರುಕು ಮೂಡಿಸಲು ಇದನ್ನು ಸಹಾಯಕವಾಗಿ ಬಳಸಿಕೊಂಡಿದ್ದು, ತಮ್ಮ ವಸಾಹತುಶಾಹಿ ನೀತಿಯನ್ನು ತೋರ್ಪಡಿಸಿದ್ದಾರೆ. ಅಶೋಕನ ಏಕಾಚಕ್ರಾಧಿಪತ್ಯವನ್ನು ಪ್ರಶ್ನಿಸಿದ್ದಾರೆ.[೮] ಮೌರ್ಯ ಸಾಮ್ರಾಜ್ಯದ ಸ್ಥಾಪನೆ, ಚಂದ್ರಗುಪ್ತಮೌರ್ಯ, ಬಿಂಬಸಾರ, ಅಶೋಕನು ಬೌದ್ಧಧರ್ಮಕ್ಕೆ ನೀಡಿದ ಪ್ರೋತ್ಸಾಹ, ಕಳಿಂಗ ಯುದ್ಧದ ಪರಿಣಾಮ, ಅಶೋಕ ಶಿಲಾಶಾಸನಗಳು ನೀಡುವ ಮಾಹಿತಿ ಕುರಿತು ವಿಶ್ಲೇಷಿಸಿದ್ದಾರೆ.

ಅಶೋಕನ ಸಾಮ್ರಾಜ್ಯವು ವಿಶಾಲವಾಗಿದ್ದರು ಅದರಲ್ಲಿ ಅನೇಕ ಬುಡಕಟ್ಟುಗಳು, ರಾಜಮನೆತನಗಳು ಹಾಗೂ ಅನೇಕ ರಾಷ್ಟ್ರೀಯತೆಗಳಿದ್ದವು. ಒಂದು ರಾಷ್ಟ್ರ, ಒಂದು ಭಾಷೆ, ಒಂದು ರಾಜಮನೆತನದ ಕಲ್ಪನೆಯಿರಲಿಲ್ಲ ಎಂದಿರುವರು.

ತೆರಿಗೆಯನ್ನು ಕುರಿತು ಚರ್ಚಿಸುವಾಗ ತಮಿಳುನಾಡನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ನಡೆಸಿದ್ದು ಚೋಳ ಮನೆತನದ ಉದಾಹರಣೆ ನೀಡುವರು. ಇವರ ಆಡಳಿತದಲ್ಲಿ ಹಾಗೂ ದಕ್ಷಿಣ ಭಾರತದಲ್ಲಿ ಜಾರಿಯಲ್ಲಿದ್ದ ಅನೇಕ ತೆರಿಗೆಗಳನ್ನು ವಿವರಿಸಿದ್ದಾರೆ. ರೈತರಿಗೆ, ವ್ಯಾಪಾರಿಗಳಿಗೆ ಸಂಬಂಧಿಸಿದ ಒಟ್ಟು ೬೧ ವಿಧದ ತೆರಿಗೆಗಳನ್ನು ವಿಧಿಸುತ್ತಿರುವುದನ್ನು ಉಲ್ಲೇಖಿಸಬಹುದು. ಹುಲ್ಷ್ಟರು ಸಂಗ್ರಹಿಸಿದ ಅನೇಕ ಶಾಸನಗಳಿಂದ ಈ ಮಾಹಿತಿಯನ್ನು ವಿಶ್ಲೇಷಿಸಿದ್ದಾರೆ. ಈ ತೆರಿಗೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದ್ದವು. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ[೧೦] ಹೊಸದಾಗಿ ೨೧ ರೀತಿಯ ತೆರಿಗೆಗಳನ್ನು ಸಾಮಾನ್ಯರ ಮೇಲೆ ಹೇರುತ್ತಿದ್ದರು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಮುಂದುವರಿದು ಬಳ್ಳಾರಿ ಪ್ರಾಂತ್ಯದಲ್ಲಿ ಮದುವೆಗೆ ಸಂಬಂಧಿಸಿದ ೧೩ ರೀತಿಯ ತೆರಿಗೆಗಳನ್ನು ವಿವರಿಸಿ[೧೧], ಭಾರತೀಯ ತೆರಿಗೆ ಪದ್ಧತಿಯನ್ನು ಟೀಕಿಸಿರುವರು. ಆದರೆ ಬ್ರಿಟಿಷರು ತೆರಿಗೆ ವಿಧಿಸುತ್ತಿದ್ದ ರೀತಿ-ನಿಯಮಗಳನ್ನು ವಿಶ್ಲೇಷಣೆ ಮಾಡಿದ್ದಾರೆ. ಕೃಷಿ ಯೋಗ್ಯ ಭೂಮಿಯ ಮೇಲೆ ೧/೪ ಮತ್ತು ೧/೫ ಹಾಗೂ ಕೃಷಿ ಯೋಗ್ಯವಲ್ಲದ ಭೂಮಿಯ ಮೇಲೆ ೧/೬ನೇ ಭಾಗದಷ್ಟು ತೆರಿಗೆ ವಿಧಿಸುತ್ತಿದ್ದರು.[೧೨] ಬ್ರಿಟಿಷರ ತೆರಿಗೆಗಳು ಜನಪರವಾಗಿದ್ದ ವೆಂದು, ಕಷ್ಟದ ಸಮಯದಲ್ಲಿ ಕ್ಷಾಮ-ಬರಗಾಲದ ಸಂದರ್ಭದಲ್ಲಿ ತೆರಿಗೆಗಳನ್ನು ಸಡಲಿಸುತ್ತಿರುವುದನ್ನು ತೋರಿಸಿಕೊಟ್ಟಿದ್ದಾರೆ.

ಬ್ರಿಟಿಷರ ಸಾಧನೆಗಳನ್ನು ಪರಿಚಯಿಸಲು ಮರೆಯಲಾರದ್ದೆಂದರೆ ರೈಲು. ಈ ಇಲಾಖೆಯು ೧೮೯೭ರ ವೇಳೆಗಾಗಲೇ ೧೦೦೦ ಮೈಲಿ ಉದ್ದದ ರೈಲು ಮಾರ್ಗವನ್ನು ಹೊಂದಿತ್ತು.[೧೩] ದೇಶದ ವಾಣಿಜ್ಯ, ವ್ಯಾಪಾರ ಹಾಗೂ ಸಂಪರ್ಕ ಸಾಧಿಸಲು ಪ್ರಮುಖ ಕಾರಣವೆಂದು ತಿಳಿದು ಇದರ ನಿರ್ಮಾಣಕ್ಕೆ ಪ್ರೋತ್ಸಾಹ ತೋರಿದರು. ಬ್ರಿಟಿಷರು ಜಾರಿಗೆ ತಂದ ಸುಧಾರಣೆಗಳಿಂದ ಆಧುನಿಕ ಭಾರತ (ಮಾಡರ್ನ್ ಹಿಂದೂ) ನಿರ್ಮಾಣವಾಗಿದ್ದು, ಒಬ್ಬ(ಆಧುನಿಕ) ಭಾರತೀಯ ಇದನ್ನು ಗ್ರಹಿಸಲು ಅಸಾಧ್ಯ ಎಂದಿರುವರು.[೧೪]

### ೨.೪.೨. ಸ್ಕೆಚ್ ದಿ ಡೈನಾಸ್ಟಿಸ್ ಆಫ್ ಸದರ್ನ್ ಇಂಡಿಯಾ : (ದಕ್ಷಿಣ ಭಾರತೀಯ ರಾಜಮನೆತನಗಳ ರೂಪುರೇಷ)

ರಾಬರ್ಟ್ ಸಿವೆಲ್ ರಚಿಸಿದ ಮಹತ್ತ್ವದ ಕೃತಿಗಳಲ್ಲಿ ಒಂದು. ಇದರ ಮುಖ್ಯ ಉದ್ದೇಶವು ಇಡೀ ದಕ್ಷಿಣ ಭಾರತ ಹಾಗೂ ಉತ್ತರ ಭಾರತವನ್ನು ಒಳಗೊಂಡಂತೆ ಯಾವ-ಯಾವ, ರಾಜ-ಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದನ್ನು ವಿವರಿಸುವುದಾಗಿದೆ. ಉತ್ತರದಲ್ಲಿ ಮೌರ್ಯರು ಪ್ರಬಲರಾಗಿದ್ದಾಗ

ಅವರ ಮೇರೆಗಳು ದಕ್ಷಿಣದವರೆಗೆ ವಿಸ್ತರಿಸಲ್ಪಟ್ಟಿದ್ದವು. ಇದನ್ನು ಮೌರ್ಯರ ಅನೇಕ ಶಾಸನಗಳು ಋಜುವಾತು ಪಡಿಸಿವೆ. ಇವರ ಹಲವು ಶಾಸನಗಳು ಚಿತ್ರದುರ್ಗ, ಮಸ್ಕಿ, ಸನ್ನತಿ ಮುಂತಾದ ಸ್ಥಳಗಳಲ್ಲಿ ದೊರೆತಿರುವುದು ಪುಷ್ಟಿದಾಯಕವಾಗಿವೆ. ಮೌರ್ಯರ ಅವನತಿಯ ನಂತರ ದಕ್ಷಿಣದ ಆಂಧ್ರ ಪ್ರದೇಶದಲ್ಲಿ ಶಾತವಾಹನರು ಆಳ್ವಿಕೆ ನಡೆಸಿದರು. ಇವರು ತಮ್ಮನ್ನು ಆಂಧ್ರ ಭೃತ್ಯರೆಂದು ಕರೆದುಕೊಂಡಿದ್ದಾರೆ. ಇದೇ ಸಮಯಕ್ಕೆ ದಕ್ಷಿಣದಲ್ಲಿ ಅನೇಕ ರಾಜಮನೆತನಗಳು ಏಳ್ಗೆಗೆ ಬಂದವು. ಕ್ರಿ.ಪೂ.೩೨೫-೧೮೮ರ ಮಧ್ಯೆ ಪಾಂಡ್ಯರು ಮತ್ತು ಚೇರರು ಅಸ್ತಿತ್ವಕ್ಕೆ ಬಂದರೆಂದು ಮೆಗಾಸ್ತನೀಸನು ಉಲ್ಲೇಖಿಸುತ್ತಾನೆ. ಇದನ್ನು ಅಶೋಕನ ಕ್ರಿ.ಪೂ.೨೫೦ರ ಶಾಸನವು ಉಲ್ಲೇಖಿಸುವುದು. ಚೇರರು ವಿಶಾಲವಾದ ಅರಣ್ಯಗಳಲ್ಲಿ ವಾಸಿಸುತ್ತಿದ್ದು, ಪುರಾಣಗಳಲ್ಲಿ ಉಲ್ಲೇಖಿಸಿರುವ ದಂಡಾಕಾರಣ್ಯದಂತೆ ಅವರ ಸಾಮ್ರಾಜ್ಯವು ಬುಡಕಟ್ಟಿನಂತಿತ್ತು ಎಂದು ಪ್ರಸ್ತಾಪಿಸುತ್ತಾನೆ. ಈಗ ಅದು ಆಧುನಿಕತೆಯನ್ನು ಮೈಗೂಡಿಸಿಕೊಂಡಿದೆ. ಬೌದ್ಧ ದಂತಕಥೆಯ ಪ್ರಕಾರ ಇದೇ ವೇಳೆಗೆ ಕಳಿಂಗ ರಾಜ್ಯವು ಬೆಳವಣಿಗೆಯತ್ತ ಹೆಜ್ಜೆ ಹಾಕಿತ್ತು. ಈ ಸಮಯದಲ್ಲಿ ಚೋಳ ರಾಜ್ಯವು ಪೂರ್ವ ಕರಾವಳಿಯ ಮೇಲೆ ಹಿಡಿತ ಸಾಧಿಸಿ ನೆರೆಹೊರೆಯವರ ಮೇಲೆ ಪ್ರಭಾವ ಬೀರಿದ್ದರು. ಬಾದಾಮಿ ಚಾಲುಕ್ಯರು ಅಧಿಕಾರಕ್ಕೆ ಬರುವವರೆಗೂ ದಕ್ಷಿಣ ಭಾರತದಲ್ಲಿ ತಮ್ಮ ನೆಲೆಯನ್ನು ಗಟ್ಟಿಗೊಳಿಸಿಕೊಂಡಿದ್ದರು. ಇದು ಮೌರ್ಯರ ಅವನತಿಯ ನಂತರದ ದಕ್ಷಿಣ ಭಾರತದ ಪರಿಸ್ಥಿತಿಯಾಗಿದೆ.[೧೫]

ಉತ್ತರ ಭಾರತದಲ್ಲಿ ಮೌರ್ಯರ ಪತನಾನಂತರ ಶುಂಗರು(ಕ್ರಿ.ಪೂ.೧೮೮-೭೬), ಇವರ ನಂತರ ಕಣ್ವ ಮನೆತನ (ಕ್ರಿ.ಪೂ.೭೬-೩೧), ಇವರ ನಂತರವೇ, ದಕ್ಷಿಣದಲ್ಲಿ ಶಾತವಾಹನರು ಕ್ರಿ.ಪೂ.೩೧ ರಿಂದ ಕ್ರಿ.ಶ.೪೩೬ರವರೆಗೆ ಸ್ವತಂತ್ರವಾಗಿ ಆಳ್ವಿಕೆ ನಡೆಸಿದರೆಂದು ಅಭಿಪ್ರಾಯಪಟ್ಟಿದ್ದಾರೆ. ಇವರು ಬೌದ್ಧ ಧರ್ಮದ ಅನುಯಾಯಿಗಳಾಗಿದ್ದು, ಅಮರಾವತಿ ಸ್ತೂಪದ ನಿರ್ಮಾತೃರು. ಸಮಕಾಲೀನದಲ್ಲಿ ದಕ್ಷಿಣದ ಪಶ್ಚಿಮ ಭಾಗದಲ್ಲಿ ಚಾಲುಕ್ಯರ ಸಾರ್ವಭೌಮತೆಯನ್ನು ನೋಡಬಹುದು. ಅನೇಕ ಬುಡಕಟ್ಟು ಮನೆತನಗಳನ್ನು ಉಲ್ಲೇಖಿಸಿದ್ದಾರೆ. ಅವು ನಳರು, ಸೇಂದ್ರಕರು, ಮಾತಂಗರು, ಆಳುಪರು ಈ ಸಮಯದಲ್ಲಿ ಏಳ್ಗೆಗೆ ಬಂದವರು. ಬಾದಾಮಿ ಚಾಲುಕ್ಯರ ಶಾಸನವು[೧೬] ಉಲ್ಲೇಖಿಸುವಂತೆ ಲಾಟರು, ಮಾಳ್ವರು, ಗೂರ್ಜರರು ಬುಡಕಟ್ಟುಗಳಿಗೆ ಸೇರಿದವರೆಂದು ಪ್ರಸ್ತಾಪಿಸಲಾಗಿದೆ.

ಕರ್ನಾಟಕದಲ್ಲಿ ಕದಂಬರು ತಮ್ಮ ರಾಜ್ಯವನ್ನು ವಿಸ್ತರಿಸುವ ತವಕದಲ್ಲಿ ಪಲ್ಲವರ ಮೇಲೆ ದಂಡೆತ್ತಿ ಹೋಗಿ ಅವರ ಪ್ರದೇಶಗಳನ್ನು ವಶಪಡಿಸಿಕೊಂಡರು.[೧೭] ಇವರು ಆಗ್ನೇಯ ಭಾಗದಿಂದ ಉತ್ತರದ ಮೈಸೂರಿನವರೆಗೆ ತಮ್ಮ ವ್ಯಾಪ್ತಿಯನ್ನು ಹೊಂದಿತ್ತೆಂದು ಎನ್ನಲಾಗಿದೆ. ಈ ಅವಧಿಯಲ್ಲಿ ಗಂಗರು, ಕದಂಬರು ನಂತರ ಅಧಿಕಾರ ಸ್ಥಾಪಿಸಿಕೊಂಡರು. ಬಾದಾಮಿ ಚಾಲುಕ್ಯರು ತಮ್ಮ ಸಾಮ್ರಾಜ್ಯವನ್ನು ಉತ್ತರದ ನರ್ಮದಾ ನದಿ ತೀರದವರೆಗೆ ವಿಸ್ತರಿಸಿಕೊಂಡು ಆಳ್ವಿಕೆ ನಡೆಸಿ ಪಲ್ಲವರೊಂದಿಗೆ ಅನೇಕ ಮಹತ್ತ್ವದ ಯುದ್ಧಗಳಲ್ಲಿ ತೊಡಗಿರುವುದನ್ನು ವಿಶ್ಲೇಷಿಸಿದ್ದಾರೆ. ಬಾದಾಮಿ ಚಾಲುಕ್ಯರ ನಂತರ ಆ

ಪ್ರದೇಶವನ್ನು ಆಳ್ವಿಕೆ ನಡೆಸಿದವರು ರಾಷ್ಟ್ರಕೂಟರು. ಇವರು ಮೂಲದ ಕುರಿತು ಅನೇಕ ವಾದಗಳು ಮೈತಳೆದಿವೆ. ಇವರು ಆರ್ಯ ಕ್ಷತ್ರಿಯರೇ, ರಜಪೂತ ಜನಾಂಗವೇ, ಉತ್ತರದಿಂದ ವಲಸೆ ಬಂದ ಆರ್ಯ ಜನಾಂಗವೇ ಎಂಬ ಅಭಿಪ್ರಾಯಗಳಿವೆ. ಇವರು ಎರಡು ಶತಮಾನಗಳ ಕಾಲ ಆಳ್ವಿಕೆ ನಡೆಸಿದ ನಂತರ ಕಲ್ಯಾಣದ ಚಾಲುಕ್ಯರು ಅಧಿಕಾರಕ್ಕೆ ಬಂದು ೧೨೫೩ರವರೆಗೆ ಆಳ್ವಿಕೆ ನಡೆಸಿದರು. ಇದೇ ಅವಧಿಯಲ್ಲಿ ಶಿಲಾಹಾರರು, ಸಿಂಧರು ಪ್ರಾಮುಖ್ಯತೆಯನ್ನು ಪಡೆದರು.

ದೇವಗಿರಿಯ ಯಾದವರು[೧೮] ೧೨೨೦ರ ಸಮಯಕ್ಕೆ ಪ್ರಬಲ ರಾಜಮನೆತನವಾಗಿತ್ತು. ಈ ಸಂದರ್ಭದಲ್ಲಿ ದಕ್ಷಿಣದ ಭಾರತದ ಎರಡು ಪ್ರಮುಖ ರಾಜಮನೆತನಗಳಾದ ಹೊಯ್ಸಳ ಬಲ್ಲಾಳರ[೧೯], ವಾರಂಗಲ್ಲಿನ ಕಾಕತೀಯರು ಪ್ರಬಲರಾಗಿ ಸಾಮ್ರಾಜ್ಯವನ್ನೂ ವಿಸ್ತರಿಸಿದರು. ಕ್ರಿ.ಶ.೧೨ನೇ ಶತಮಾನದ ವೇಳೆಗೆ ಕಲಚುರಿಗಳು ಕರ್ನಾಟಕವನ್ನು ಆಳ್ವಿಕೆ ನಡೆಸಿದ್ದಾರೆ. ನಂತರ ಕರ್ನಾಟಕದ ಅಸ್ತಿತ್ವವನ್ನು ಉಳಿಸಿಕೊಂಡು ಬಂದವರೆಂದರೆ ವಿಜಯನಗರದ ಅರಸರು. ಆಗ ಉತ್ತರ ಭಾರತದಲ್ಲಿ ದೆಹಲಿ ಸುಲ್ತಾನರ ಆಳ್ವಿಕೆಯಿತ್ತು. ದಕ್ಷಿಣ ಭಾರತದ ಸಂಪತ್ತಿನ ಮೇಲೆ ಇವರ ದೃಷ್ಟಿ ಬೀರಿತ್ತು. ಕ್ರಿ.ಶ.೧೩೧೦ ಹಾಗೂ ಕ್ರಿ.ಶ.೧೩೨೩ ದಾಳಿಗಳು ಹೊಯ್ಸಳರ ಸಾಮ್ರಾಜ್ಯವನ್ನು ಅವನತಿಯತ್ತ ಹೊರಳಿಸಿದವು. ವಿಜಯನಗರ ಸಾಮ್ರಾಜ್ಯವು ಬರಿದಾಗಿದ್ದ ಕರ್ನಾಟಕದ ರಾಜಕೀಯ ಶೂನ್ಯವನ್ನು ತುಂಬಿ ಎರಡೂವರೆ ಶತಮಾನಗಳವರೆಗೆ ಪ್ರಬಲವಾಗಿತ್ತು. ಜೊತೆಗೆ ಸಮಕಾಲೀನ ಬಹಮನಿ ಸುಲ್ತಾನರು ಹಾಗೂ ಶಾಹಿ ಅರಸರು ವಿಜಯನಗರದ ಅರಸರಿಗೆ ಪ್ರತಿಸ್ಪರ್ಧಿಗಳಾಗಿ ಬಿಂಬಿಸಿದ್ದಾರೆ. ವಿಜಯನಗರ ಸಾಮ್ರಾಜ್ಯವು ಏಳ್ಗೆಗೆ ಬಂದ ನಂತರ ದಕ್ಷಿಣ ಭಾರತದಲ್ಲಿ ಆದ ರಾಜಕೀಯ ಬದಲಾವಣೆ ಹಾಗೂ ಅದರ ಅವನತಿಯ ನಂತರ ಆದ ಬದಲಾವಣೆಯ ಕುರಿತು ದೀರ್ಘವಾಗಿ ಚರ್ಚಿಸಿದ್ದಾರೆ.[೨೦] ತಮಿಳುನಾಡು, ಕೇರಳ, ಆಂಧ್ರದ ರೆಡ್ಡಿಗಳು, ಮೈಸೂರು ಸಂಸ್ಥಾನ, ಕೆಳದಿ ನಾಯಕರು, ಚಿತ್ರದುರ್ಗದ ನಾಯಕರು, ಯಲಹಂಕ ನಾಡಪ್ರಭುಗಳು ಹೇಗೆ ಸ್ವತಂತ್ರರಾದರೆಂಬುದನ್ನು ವಿಶ್ಲೇಷಿಸಿದ್ದಾರೆ. ಬ್ರಿಟಿಷರು ೧೬೩೯ರಲ್ಲಿ ಮದ್ರಾಸ್ ನಲ್ಲಿ ನೆಲೆಸಿದರು. ಅಲ್ಲಿಂದ ಇವರ ವಸಾಹತುಶಾಹಿ ನೀತಿಯು ಮುಂದುವರೆಯಿತು. ಇದು ೧೭೯೯ ಟಿಪ್ಪು ಸುಲ್ತಾನನ ಮರಣದ ನಂತರ ಇಡೀ ದಕ್ಷಿಣ ಭಾರತವೇ ಅವರ ಆಳ್ವಿಕೆಗೆ ಒಳಪಟ್ಟಿತ್ತು.[೨೧] ಇದರಿಂದ ಸ್ಥಳೀಯ ಸಂಸ್ಥಾನಗಳು ಹೊರಗೆ ಉಳಿದಿದ್ದವು. ಉದಾ: ಜಮಖಂಡಿ, ಸಂಡೂರು, ಮೈಸೂರು ಹೀಗೆ ರಾಜಪ್ರಭುತ್ವದ ಆಳ್ವಿಕೆಗೆ ತಾತ್ಕಾಲಿಕವಾಗ ಅಂತ್ಯ ಹಾಡಲಾಯಿತು. ಅಲ್ಲಿ ಬ್ರಿಟಿಷರು ತಮ್ಮ ಸಾರ್ವಭೌಮತೆಯನ್ನು ಸ್ಥಾಪಿಸಲು ಹವಣಿಸಿ ಯಶಸ್ವಿಯಾದರು.

ಹೀಗೆ ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸಿದ ರಾಜಮನೆತನಗಳ ವಂಶಾವಳಿಯನ್ನು ಅಕಾರಾದಿಯಾಗಿ, ಇಸ್ವಿಗಳ ಸಮೇತ ವಿವರಣೆ ನೀಡಿದ್ದು, ಇತಿಹಾಸಕಾರರಾಗಿ ಸಿವೆಲ್‌ರು ತಮ್ಮ ವಿದ್ವತ್ ಪ್ರೌಢಿಮೆಯನ್ನು ಮೆರೆದಿದ್ದಾರೆ.

### ೨.೪.೩. ಕ್ರೋನಲಾಜಿಕಲ್ ಟೇಬಲ್ಸ್ ಫಾರ್ ಸದರ್ನ್ ಇಂಡಿಯಾ ಫ್ರಮ್ ದಿ ಸಿಕ್ಸ್ತ್ ಸೆಂಚುರಿ ಎ.ಡಿ

ಈ ಕೃತಿಯು ೧೮೮೯ರಲ್ಲಿ ಮದ್ರಾಸ್‌ನಲ್ಲಿ ಪ್ರಕಟವಾಯಿತು. ಇದನ್ನು ರಚಿಸಲು ಪ್ರೇರಣೆ ನೀಡಿದ್ದು ಎರಡು ಅಂಶಗಳು. ಒಂದು ಜನರು ತಮ್ಮ ನೆನಪುಗಳಿಂದ ದಿನಾಂಕ, ತಿಥಿ, ವರ್ಷ, ಸಂವತ್ಸರಗಳನ್ನು ಲೆಕ್ಕಾಚಾರಪೂರ್ವಕವಾಗಿ ಹೇಳುವುದು. ಎರಡು ಜನರು ಇವುಗಳ ಬಗ್ಗೆ ಎಲ್ಲಿ ತಪ್ಪು ನುಡಿವರು ಎಂಬ ಭಯ ಹಾಗೂ ಕುತೂಹಲ. ಈ ಎರಡು ಅಂಶಗಳು ಇವರನ್ನು ಕಾಡಿದ್ದವು. ಅವರ ಈ ಕೃತಿಯ ರಚನೆಗೆ ಮುಖ್ಯವಾದ ಆಕರಗಳೆಂದರೆ ಶಾಸನಗಳು ಹಾಗೂ ದಾಖಲಾತಿಯ ಸಂಗ್ರಹಣೆಗಳು. ಇವುಗಳನ್ನು ಕಾಲಾನುಕ್ರಮಣಿಕೆ ಗುರುತಿಸುವಿಕೆಗೆ ಬಳಸಿಕೊಳ್ಳಲಾಯಿತು. ಭಾರತೀಯರಿಗೆ ಸಹಾಯಕವಾಗಲೆಂದೇ, ಈ ಪಟ್ಟಿಯನ್ನು ತಯಾರಿಸಿರುವುದು ಆಶ್ಚರ್ಯ.

ಭಾರತೀಯರ ಲೆಕ್ಕಾಚಾರದಂತೆ ನೂತನ ವರ್ಷ ಆರಂಭವಾಗುವುದು ಮಾರ್ಚ್ ತಿಂಗಳಲ್ಲಿ. ಕ್ರಿಸ್ತಶಕಯು ಜನವರಿಯಿಂದ ಪ್ರಾರಂಭವಾಗಿ ಪ್ರತಿ ನಾಲ್ಕು ತಿಂಗಳಿಗೊಮ್ಮೆ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಇದರನ್ವಯದಂತೆ ಇಡೀ ವರ್ಷವು ನಡೆಯುವುದು. ತಮಿಳರ ಕೊಲ್ಲಮ್ ಶಕ ಆರಂಭವಾಗುವುದು. ಸೆಪ್ಟೆಂಬರ್ ತಿಂಗಳಲ್ಲಿ, ಮಾರ್ಚ್ ತಿಂಗಳವರೆಗೆ ಅರ್ಧ ಹಾಗೂ ಮಾರ್ಚ್ ನಿಂದ ಸೆಪ್ಟೆಂಬರ್ ವರೆಗೆ ಅರ್ಧ ಯಥಾ ಪ್ರಕಾರವಾಗಿ ನಡೆಯುವುದು. ಈ ಕೃತಿಯು ಕ್ರಿಸ್ತಶಕ ೬ನೇ ಶತಮಾನದಿಂದ ಆರಂಭವಾಗಿ ೧೯ನೇ ಶತಮಾನದ ಆದಿ ಭಾಗದವರೆಗೆ ಕಾಲಾನುಕ್ರಮಣಿಕೆಯನ್ನು ಜೋಡಿಸಲಾಗಿದೆ. ಕಲಿಯುಗವು ೫೦೦೧, ಸರ್ವರಿ ಸಂವತ್ಸರ, ಕೊಲ್ಲಮ್ ಶಕಯು ೧೦೭೬-೭೭, ಕ್ರಿಸ್ತಶಕ ೧೯೦೦-೦೧, ಹಿಜಿರಾ ಶಕ ಮೇ ೧೩೧೮, ಶಾಲಿವಾಹನ ಶಕ ೧೮೨೨ ಆಗಿ ಮುಕ್ತಾಯವಾಗುವುದು.

ಭಾರತೀಯರಿಗೆ ಕಾಲಾನುಕ್ರಮಣಿಕೆಯನ್ನು ತಿಳಿಸುವಲ್ಲಿ ಈ ಕೃತಿಯು ಮಹತ್ತ್ವ ಪಡೆದಿದೆ. ಕಲಿಯುಗ, ಕ್ರಿಸ್ತಶಕ, ಶಕವರ್ಷ, ಕೊಲ್ಲಮ್ ಅಥವಾ ಅಂಡುಶಕ, ಹಿಜಿರಾ ಶಕ ಇವುಗಳನ್ನು ಬಳಕೆ ಮಾಡಿರುವ ವಿಧಾನವನ್ನು ತಿಳಿಸಿರುವರು. ಅವುಗಳ ಬಳಕೆಗೆ ಇರುವ ಆಧಾರಗಳು, ಅವುಗಳನ್ನು ಎಷ್ಟು ತಿಂಗಳಿಗೊಮ್ಮೆ ವಿಭಜಿಸಿರುವರು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ದಕ್ಷಿಣ ಭಾರತಕ್ಕೆ ಸಂಬಂಧಿಸಿದಂತೆ ಶಾಲಿವಾಹನ ಶಕ ವರ್ಷ ೫೦೦, ವಿಳಂಬಿ ಸಂವತ್ಸರ, ೩೬೭೯ ಕಲಿಯುಗ, ಇಲ್ಲಿ ಕೊಲ್ಲಮ್ ಶಕಯು ಆರಂಭವಾಗುವುದಿಲ್ಲ. ಶಾಲಿವಾಹನ ಶಕಯ ೫೪೪ ಆಗಿದ್ದಾಗ ಹಿಜಿರಾ ಶಕ ಪ್ರಾರಂಭವಾಗುವುದು. ಆಗ ೩೭೨೩ ಕಲಿಯುಗ ಚಿತ್ರಭಾನು ಸಂವತ್ಸರ, ಕ್ರಿಸ್ತಶಕವು ೬೨೨-೨೩ ಆಗಿರುತ್ತದೆ. ಕೊಲ್ಲಮ್ ಶಕವು ಶಾಲಿವಾಹನ ಶಕಯು ೭೪೬, ಕಲಿಯುಗ ೩೯೨೫, ಕ್ರೋಧಿ ಸಂವತ್ಸರ, ಕ್ರಿಸ್ತಶಕ ೮೨೪ ಆಗಿದ್ದು, ಹಿಜಿರಾ ಶಕ ಆರಂಭವಾಗಿ ೨೦೨ ವರ್ಷಗಳ ನಂತರ ಪ್ರಾರಂಭವಾಗುವುದು. ಕೊಲ್ಲಮ್ ಅಥವಾ ಅಂಡು ಶಕಯು ವಿಶೇಷವಾಗಿ ತಮಿಳುನಾಡಿನ ಟ್ರಿವಾಂಕೂರು ಪ್ರಾಂತ್ಯದಲ್ಲಿ ಬಳಸುತ್ತಿದ್ದರು. ಅದು ಈಗಲೂ ಪ್ರಚಲಿತದಲ್ಲಿದೆ.

ಈ ತೆರನಾಗಿ ಭಾರತೀಯರಿಗೆ ಕಾಲದ ಮಹತ್ತ್ವ, ವಿವಿಧ ಪ್ರಾಂತ್ಯದಲ್ಲಿ ಆಚರಣೆಯಲ್ಲಿರುವ ಶಕ ವರ್ಷಗಳನ್ನು ಕುರಿತು ಚರ್ಚಿಸಿದೆ. ಶಕ ವರ್ಷಗಳ ಬಗ್ಗೆ ಮಾಹಿತಿ ನೀಡುವ ಪುಸ್ತಕ ಇದಾಗಿದೆ.

### ೨.೪.೪. ಅನಲಾಟಿಕಲ್ ಹಿಸ್ಟರ್ ಆಫ್ ಇಂಡಿಯಾ

ಈ ಹೊತ್ತಿಗೆ ಭಾರತದ ಪ್ರಾಚೀನ ಚರಿತ್ರೆಯಿಂದ ಭಾರತವು ಬ್ರಿಟಿಷರ ನೇರ ಆಳ್ವಿಕೆಗೆ ಒಳಪಡುವ ತನಕ ಹೊಂದಿರುವ ವಸ್ತು ವಿಷಯವಾಗಿದೆ. ಈ ಪುಸ್ತಕವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾರೆ. ಆ ನಾಲ್ಕು ಭಾಗಗಳೆಂದರೆ

೧. ಭಾರತದ ಪ್ರಾಚೀನ ಚರಿತ್ರೆಯಿಂದ ಬಾಬರ್ ಮೊದಲನೇ ಪಾಣಿಪತ್ ಕದನವನ್ನು ಜಯಿಸುವವರೆಗೆ

೨. ಮೊಘಲ್ ಸಾಮ್ರಾಜ್ಯದ ಚರಿತ್ರೆ

೩. ಈಸ್ಟ್ ಇಂಡಿಯಾ ಕಂಪನಿಯ ಸ್ಥಾಪನೆಯಿಂದ ಮರಾಠರ ಅವನತಿಯವರೆಗೆ

೪. ಸಂಪೂರ್ಣವಾಗಿ ಬ್ರಿಟಿಷ್ ಕಂಪನಿಯ ಆಡಳಿತವು ಹೇಗೆ ಇಂಗ್ಲೆಂಡಿನ ನೇರ ಆಳ್ವಿಕೆಗೆ ಗುರಿಯಾಗುವ ತನಕ. ಅಧ್ಯಯನ ನಡೆಸಿದ್ದು ಈ ಕುರಿತು ವಿಶ್ಲೇಷಿಸಿದ್ದಾರೆ.

ಮೊದಲನೇ ಭಾಗವು ವೇದಗಳಿಂದ ಆರಂಭವಾಗಿ ಕ್ರಿ.ಶ.೧೫೨೬ರವರೆಗೆ, ಬಾಬರ್ ಮೊದಲನೇ ಪಾಣಿಪತ್ ಕದನದಲ್ಲಿ ಜಯಿಸುವ ತನಕ. ಈ ಭಾಗದಲ್ಲಿ ಹೆಚ್ಚಾಗಿ ಮುಸ್ಲಿಂರ ಚರಿತ್ರೆಯನ್ನು ನೋಡಬಹುದು. ಭಾರತದ ಚರಿತ್ರೆಯ ವಿಶ್ಲೇಷಣೆ ಅಂತ ಕರೆದರೂ ಉತ್ತರದ ಕುಶಾನರು, ಗುಪ್ತರು, ವರ್ಧನರು ದಕ್ಷಿಣದ ಅನೇಕ ರಾಜಮನೆತನಗಳ ಇತಿಹಾಸವನ್ನು ಗಣನೆಗೆ ತೆಗೆದುಕೊಳ್ಳದಿರುವುದನ್ನೂ ಗಮನಿಸಿದರೆ ಭಾರತವು ಆರಂಭದಿಂದ ೧೫೨೬ರವರೆಗೆ ಅನಾಗರಿಕ ಹಂತದಲ್ಲಿತ್ತು ಎನ್ನುವುದನ್ನು ಬ್ರಿಟಿಷರು ತಮ್ಮ ನೀತಿಯನ್ನು ಪ್ರಕಟಪಡಿಸಿದ್ದಾರೆ. ಹೊಯ್ಸಳ ಬಲ್ಲಾಳರ ಹೆಸರನ್ನು ಹೊರತುಪಡಿಸಿದರೆ, ಕರ್ನಾಟಕ ಚರಿತ್ರೆಗೆ ಸಂಬಂಧಿಸಿದಂತೆ ಕದಂಬರಾದಿಯಾಗಿ, ವಿಜಯನಗರ ಸಾಮ್ರಾಜ್ಯದ ಅವನತಿಯವರಗಿನ ಕರ್ನಾಟಕದ ಯಾವೊಂದು ರಾಜಮನೆತನದ ಉಲ್ಲೇಖವು ಕಂಡುಬರುವುದಿಲ್ಲ. ಉಳಿದಂತೆ ಉತ್ತರ ಭಾರತದ ಪ್ರಸಿದ್ಧ ರಾಜಮನೆತನದ ಉಲ್ಲೇಖವು ಹಾಗೂ ಪ್ರಸಿದ್ಧ ನಗರಗಳಿಗೆ ಅಂದಿನ ರಾಜರು ಹೊಂದಿದ್ದ ಸಂಬಂಧವನ್ನು ಕಲ್ಪಿಸಿರುವುದನ್ನು ನೋಡಬಹುದು. ಈ ಭಾಗದಲ್ಲಿ ವೇದಗಳು, ರಾಮಾಯಣ, ಮಹಾಭಾರತದ ವಿವರಣೆಯನ್ನು ನೀಡಿರುವರು. ಇಲ್ಲಿ ದ್ರಾವಿಡ ಕಲ್ಪನೆಯು ಮೈ ತಳೆದಿದೆ.

ಎರಡನೇ ಭಾಗಕ್ಕೆ ಕೊಟ್ಟ ಹೆಸರು 'ದಿ ಮೊಘಲ್ ಎಂಪೈರ್ ಇನ್ ಇಂಡಿಯಾ ೧೫೨೬-೧೭೬೧'. ಇದು ಸಂಪೂರ್ಣವಾಗಿ ಮೊಘಲರ ದಿಗ್ವಿಜಯ, ಆಡಳಿತ ಕುರಿತದ್ದು ಹಾಗೂ ಸಮಕಾಲೀನರ ಬಗ್ಗೆ ತಿಳಿಸಿಕೊಡುವರು. ಬಾಬರ್ ಜೊತೆ ದಖ್ಖನ್‌ದ(ಅರಸು ಮನೆತನಗಳಿಂದ) ಶಾಹಿ ಸುಲ್ತಾನರಾದ ಬಿಜಾಪುರ,

ಗೋಲ್ಕೊಂಡ, ಬೀದರ್, ಅಹಮ್ಮದ್‌ನಗರ ಜೊತೆಗಿನ ಸಂಘರ್ಷವನ್ನು ವಿವರಿಸಿದ್ದಾರೆ. ದಕ್ಷಿಣ ಭಾರತದ ವಿಶೇಷವಾಗಿ ಬಿಜಾಪುರವನ್ನು ಹೊರತುಪಡಿಸಿ, ಕರ್ನಾಟಕದ ಯಾವ ರಾಜಮನೆತನಗಳ ಉಲ್ಲೇಖವನ್ನು ಮಾಡದಿರುವುದು ದುರಂತ. ಶಿವಾಜಿಯ ಕುರಿತು, ಶಿವಾಜಿಯು ೧೬೭೪ರಲ್ಲಿ ರಾಜ ಎಂದು ಗುರುತಿಸಿಕೊಳ್ಳುತ್ತಾನೆ ಎಂದಿರುವರು. ಇಲ್ಲಿ ಬಾಬರ್‌ನ ಸಮಕಾಲೀನ ದೊರೆಯಾದ ಕೃಷ್ಣದೇವರಾಯನ ಉಲ್ಲೇಖವನ್ನು ಸಹ ಕಾಣುವುದಿಲ್ಲ.

೧೫ನೇ ಶತಮಾನದ ಅಂತ್ಯದ ವೇಳೆಗೆ ಭಾರತಕ್ಕೆ ಸಮುದ್ರಮಾರ್ಗದ ಅನ್ವೇಷಣೆಯಾಯಿತು. ಇದರ ಲಾಭ ಪಡೆದ ಯುರೋಪಿಯನ್ನರು ಭಾರತಕ್ಕೆ ವ್ಯಾಪಾರದ ಸಲುವಾಗಿ ಆಗಮಿಸಿದರು. ಇವರಲ್ಲಿ ಬ್ರಿಟಿಷರು ಪ್ರಮುಖರಾಗಿದ್ದಾರೆ. ೧೬೦೦ ಡಿಸೆಂಬರ್ ೩೦ ರಂದು 'ಲಂಡನ್ ಈಸ್ಟ್ ಇಂಡಿಯಾ' ಕಂಪನಿಯನ್ನು ಸ್ಥಾಪಿಸಿಕೊಂಡು ವ್ಯಾಪಾರ ಪ್ರಾರಂಬಿಸಿ ಅನೇಕ ಕೋಠಿಗಳನ್ನು ನಿರ್ಮಿಸಿಕೊಂಡರು. ಮುಂದುವರಿದು ಹೊಸ-ಹೊಸ ಪ್ರದೇಶಗಳ ಮೇಲೆ ಹಿಡಿತ ಸಾಧಿಸಿ, ಅವುಗಳನ್ನು ವಸಾಹತುಗಳನ್ನಾಗಿಸಿದರು. ಅವುಗಳಲ್ಲಿ ಮೀರತ್ , ಬಾಂಬೆ, ಕಲ್ಕತ್ತಾ ಪ್ರಮುಖವಾಗಿವೆ. ಈ ಕಂಪನಿಯ ಹೆಸರು ೧೬೯೮ರಲ್ಲಿ "ದಿ ಮಾರ್ಚೆಟ್ಸ್ ಅಡ್ವೆಂಚರ್ಸ್" ಎಂದು ೧೭೦೮ರಲ್ಲಿ "ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿ" ಎಂದು ಬದಲಾಯಿತು. ಇಲ್ಲಿ ಕಂಪನಿಯ ಆಡಳಿತವು ಉತ್ತಮವಾಗಿತ್ತು. ೧೭೪೦ರಿಂದ ಕರ್ನಾಟಕ ಯುದ್ಧಗಳು, ೧೭೬೭ರಿಂದ ಆಂಗ್ಲೋ-ಮೈಸೂರು ಯುದ್ಧಗಳು, ಪ್ಲಾಸಿ ಕದನ, ಬಕ್ಸಾರ್ ಕದನಗಳು ಇವರಿಗೆ ಹಲವು ಪ್ರದೇಶಗಳ ಮೇಲೆ ಹಿಡಿತ ಸಾಧಿಸಲು ನೆರವು ನೀಡಿದವು. ಕ್ಲೈವ್, ವಾರ್ನ್ ಹೆಸ್ಟಿಂಗ್, ಕಾರ್ನ್ ವಾಲಿಸ್, ಗವರ್ನರ್ ಜನರಲ್ ಸರ್ ಜಾನ್ ಶೋರ್ ಇವರು ಕಂಪನಿಯ ಬೆಳವಣಿಗೆಗೆ ಹೇಗೆ ಸಹಾಯಕರಾದರು ಎಂಬುದನ್ನು ಚಿತ್ರಿಸಿದ್ದಾರೆ. ಲಾರ್ಡ್ ವೆಲ್ಲೆಸ್ಲಿ ಜಾರಿಗೆ ತಂದ ನೀತಿಗಳು ಹೇಗೆ ಸ್ಥಳೀಯ ಅರಸರು ಇದರಲ್ಲಿ ಸಿಲುಕಿದರು ಎಂಬುದನ್ನು ವಿಶ್ಲೇಷಿಸಿದ್ದಾರೆ. ಇವರ ಆಳ್ವಿಕೆಯನ್ನು ಕಾಲಾನುಕ್ರಮದಲ್ಲಿ ಬರೆದಿರುವರು.

ನಾಲ್ಕನೇ ಭಾಗವು ಲಾರ್ಡ್ ಆರ್ಮ್‌ಸ್ಟ್ರಾಂಗ್‌ರಿಂದ (೧೮೨೩-೨೮) ಆರಂಭ ಪಡೆಯುವುದು. ಬರ್ಮಿಯರೊಡನೆ ಸಂಭವಿಸಿದ ಯುದ್ಧ, ವಿಲಿಯಂ ಬೆಂಟಿಕರ ನೀತಿಗಳು, ಸರ್ ಚಾರ್ಲ್ಸ್ ಮೇಟ್ಕಾಪ್ ಲಾರ್ಡ್ ಆಕ್ಲೆಂಡರು ಜಾರಿಗೆ ತಂದ ಸುಧಾರಣೆಗಳನ್ನು ತಿಳಿಸಿರುವರು. ಮುಂದುವರಿದು ಲಾರ್ಡ್ ಎಲ್ಲಿನ್ ಬ್ರೌಚ್, ಲಾರ್ಡ್ ಹಾರ್ಡಿಂಜ್, ಡಾಲ್ ಹೌಸಿ, ಕ್ಯಾನಿಂಗ್ ಇವರ ನೀತಿಗಳನ್ನು ವಿಶ್ಲೇಷಣೆಗೆ ಒಳಪಡಿಸ ಲಾಗಿದೆ. ಸಿಪಾಯಿ ದಂಗೆಯು ಆರಂಭವಾಗಲು ಕಾರಣ, ದಂಗೆಯ ಪರಿಣಾಮ, ಈಸ್ಟ್ ಇಂಡಿಯಾ ಕಂಪನಿಯ ನಿಷೇಧ ಮಾಡಿದ್ದು, ೧೮೫೮ರಲ್ಲಿ ಈಸ್ಟ್ ಇಂಡಿಯಾ ಕಂಪನಿಯಿಂದ ಆಡಳಿತವನ್ನು ನೇರವಾಗಿ ಬ್ರಿಟಿಷ್ ಸರ್ಕಾರವೇ ವಹಿಸಿಕೊಳ್ಳುವ ತನಕ ವಿಶ್ಲೇಷಿಸಲಾಗಿದೆ.

ಇದು ಭಾರತದ ಚರಿತ್ರೆಯ ರೂಪುರೇಷು ಆಗಿದೆ. ಆರಂಭದಿಂದ ೧೮೫೮ರರವರೆಗೆ ನಡೆದ ಪ್ರಮುಖ ಘಟನೆಗಳನ್ನು ವಿಶ್ಲೇಷಿಸಿದ್ದಾರೆ. ಇಲ್ಲೂ ಸಹ ತಮ್ಮ ವಸಾಹತುಶಾಹಿ ನೀತಿಗೆ ನೀರೆರೆದು ಬೆಳೆಸಿರುವರು. ಇಡೀ ಎರಡನೇ ಭಾಗವನ್ನು ಮೊಘಲ್ ಎಂಪೈರ್ ಎಂದು ತಲೆಬರಹ ನೀಡಿದ, ಇವರು ದಕ್ಷಿಣ ಭಾರತದಲ್ಲಿ ಅಷ್ಟೇ ಪ್ರಮುಖ ಅರಸು ಮನೆತನಗಳನ್ನೂ ಮರೆತಿದ್ದಾರೆ. ವಿಜಯನಗರ ಸಾಮ್ರಾಜ್ಯ ಶಾಹಿಸುಲ್ತಾನರು, ಮರಾಠರು, ಮೈಸೂರಿನ ಒಡೆಯರು, ಜಿಂಜಿ, ಮಧುರೆಯ ನಾಯಕರು ಮುಂತಾದ ಬಲಿಷ್ಠ ಅರಸು ಮನೆತನಗಳನ್ನು ಅಸಡ್ಡೆ ಮಾಡಿರುವುದನ್ನು ನೋಡಬಹುದು. ಹಿಂದೂ-ಮುಸ್ಲಿಂರ ಮಧ್ಯೆ ಕೋಮುಭಾವನೆಯನ್ನು ಬಿತ್ತಿ ಆ ಪರಂಪರೆಯನ್ನು ಮುಂದುವರಿಸಿದ್ದಾರೆ. ಬ್ರಿಟಿಷರು ಭಾರತದ ಚರಿತ್ರೆಯನ್ನು ೩ ಭಾಗಗಳಾಗಿ ವಿಭಜಿಸಿರುವುದು ರೂಢಿಗತವಾದುದು. ಆದರೆ ಇವರು ನಾಲ್ಕು ಭಾಗಗಳಾಗಿ ವಿಭಜಿಸಿರುವುದು ಗಮನೀಯ. ಇದರಲ್ಲಿ ಬ್ರಿಟಿಷರ ರೀತಿ-ನೀತಿಗಳು, ಅವರ ಕಂಪನಿಯ ಆಡಳಿತವು ಹೇಗೆ ಬದಲಾಯಿತು ಎಂಬುದನ್ನು ಚರ್ಚಿಸಿರುವುದು ಉಲ್ಲೇಖನೀಯ.

**ಟಿಪ್ಪಣಿಗಳು**

೧. ದಿ ಜರ್ನಲ್ ಆಫ್ ದಿ ರಾಯಲ್ ಏಶಿಯಾಟಿಕ್ ಸೊಸೈಟಿ ಆಫ್ ಗ್ರೇಟ್ ಬ್ರಿಟನ್ ಆ್ಯಂಡ್ ಐರ್‌ಲ್ಯಾಂಡ್, ಫೆಬ್ರವರಿ ೧೯೨೬, ಪು.೧೬೬

೨. ಅದೇ, ಪು.೧೬೬

೩. ವಿರೂಪಾಕ್ಷಿ ಪೂಜಾರಹಳ್ಳಿ, ವಸಾಹತುಕಾಲೀನ ಬಳ್ಳಾರಿ ಜಿಲ್ಲೆ, ಪು.೧೮೯

೪. ರಾಬರ್ಟ್ ಸಿವೆಲ್, ಇಂಡಿಯಾ ಬಿಫೋರ್ ದಿ ಇಂಗ್ಲೀಷ್, ಪು.೧

೫. ಅದೇ, ಪು.೭

೬. ಅದೇ, ಪು.೮

೭. ಅದೇ, ಪು.೮

೮. ಅದೇ, ಪು.೧೦

೯. ಅದೇ, ಪು.೧೯-೨೦ ಇದನ್ನು ಕೊಯಂಬತ್ತೂರು ಜಿಲ್ಲೆಯ ಕಲೆಕ್ಟರಾಗಿದ್ದ ಮೇಜರ್ ಮ್ಯಾಕ್ ಲಿಯೋಡ್‌ರು ಪ್ರಸ್ತಾಪಿಸಿದ್ದಾರೆ.

೧೦. ಅದೇ, ಪು.೧೮

೧೧. ಅದೇ, ಪು.೨೧-೨೨

೧೨. ಅದೇ, ಪು.೨೩

೧೩. ಅದೇ, ಪು.೩೫

೧೪. ಅದೇ, ಪು.೪೬

೧೫. ರಾಬರ್ಟ್ ಸಿವೆಲ್, ಸ್ಕೆಚ್ ದಿ ಡೈನಾಸ್ಟಿಸ್ ಆಫ್ ಸದರ್ನ್ ಇಂಡಿಯಾ, ಪು.೧

೧೬. ಅದೇ, ಪು.೧

೧೭. ಅದೇ, ಪು.೨

೧೮. ಅದೇ, ಪು.೧೧೪-೧೧೫

೧೯. ಅದೇ, ಪು.೩೬-೩೭

೨೦. ಅದೇ, ಪು.೧೦೩-೧೧೩

೨೧. ಅದೇ, ಪು.೪

# ಅಧ್ಯಾಯ ೩

## ಎ ಫರ್‌ಗಾಟನ್ ಎಂಪೈರ್ ಕೃತಿಯ ವಿಶ್ಲೇಷಣೆ

೩

# ಎ ಫರ್‌ಗಾಟನ್ ಎಂಪೈರ್ ಕೃತಿಯ ವಿಶ್ಲೇಷಣೆ

## ೩.೧. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ವಿಶ್ಲೇಷಣೆ

ಮಧ್ಯಕಾಲೀನ ಭಾರತದಲ್ಲಿ ಜರುಗಿದ ಅನೇಕ ಘಟನೆಗಳು ಐತಿಹಾಸಿಕ ಮಹತ್ತ್ವ ಪಡೆದಿವೆ. ಅವು ಸಾಮ್ರಾಜ್ಯದ ಸ್ಥಾಪನೆ, ಕದನ, ಸಾಮ್ರಾಜ್ಯದ ಅವನತಿ ಹಾಗೂ ಸಾಂಸ್ಕೃತಿಕ ಚರಿತ್ರೆಗೆ ನೀಡಿದ ಕೊಡುಗೆಯಾಗಬಹುದು. ಇಂತಹ ಘಟನೆಗೆ ಜ್ವಲಂತ ಸಾಕ್ಷಿಯಾಗಿ ನಿಂತಿರುವುದು ವಿಜಯನಗರ ಸಾಮ್ರಾಜ್ಯ. ದಕ್ಷಿಣ ಭಾರತದಲ್ಲಿ ಏಳ್ಗೆಗೆ ಬಂದು ಕರ್ನಾಟಕ ಹಾಗೂ ರಾಷ್ಟ್ರಕ್ಕೆ ತನ್ನದೇ ಆದ ಕೊಡುಗೆ ನೀಡಿದೆ. ತನ್ನ ಸಾಂಸ್ಕೃತಿಕ ಕೊಡುಗೆಯಿಂದ ವಿಶ್ವವನ್ನೇ ತನ್ನತ್ತ ಸೆಳೆದ ರಾಜ ಮನೆತನಗಳಲ್ಲಿ ಒಂದು. ಇದನ್ನು ದಕ್ಷಿಣ ಭಾರತದಲ್ಲಿ ಹಿಂದೂ ಸಾರ್ವಭೌಮತೆಯನ್ನು ಹೊಂದಿದ ಕೊನೆಯ ರಾಜಮನೆತನ ಎಂದು ಬಿ.ಎಲ್.ರೈಸರು ಕರೆದಿರುವರು. ವಿಜಯನಗರ ಸಾಮ್ರಾಜ್ಯ ಕುರಿತು ಚರ್ಚಿಸುವಾಗ ಅದರ ಸ್ಥಾಪನೆಯ ಹಿನ್ನಲೆ, ಸ್ಥಾಪನೆಗೆ ಕಾರಣ ಕರ್ತೃಗಳು ಆ ಪ್ರದೇಶದಲ್ಲಿದ್ದ ರಾಜಕೀಯ ಪರಿಸ್ಥಿತಿ ಏನಾಗಿತ್ತು ಎಂಬುದನ್ನು ತಿಳಿಯುವುದು ಸಮಂಜಸವೆನಿಸುತ್ತದೆ. ಒಂದು ರಾಜಮನೆತನವು ತಾನೇ ತಾನಾಗಿ ಹುಟ್ಟಿಕೊಳ್ಳುವುದಿಲ್ಲ. ಅದಕ್ಕೆ ಒಂದು ಘಟನೆ, ಆಕಸ್ಮಿಕ ಅಥವಾ ಯಾರಾದರೂ ಪ್ರೇರಣೆ ನೀಡುವ ಮೂಲಕ ಸಾಮ್ರಾಜ್ಯದ ಹುಟ್ಟಿಗೆ ಕಾರಣವಾಗುವುದು. ಅದೇ ರೀತಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯು ಹೆಚ್ಚಾಗಿ ಧಾರ್ಮಿಕ ಮಹತ್ತ್ವ ಪಡೆದಿದೆ. ಇದಕ್ಕೆ ಕಾರಣ ವಿದ್ಯಾರಣ್ಯ ಅಥವಾ ಮಾಧವಾಚಾರ್ಯರು.

ವಿಜಯನಗರ ಸಾಮ್ರಾಜ್ಯದ ಉಗಮ, ಸ್ಥಾಪನೆಯನ್ನು ಕುರಿತು ಅವಲೋಕಿಸುವಾಗ ಚರಿತ್ರೆಕಾರರು ಹೆಚ್ಚಾಗಿ ಮತಧರ್ಮದ ಹಿನ್ನೆಲೆ ನೀಡುವರು. ಈ ಸಾಮ್ರಾಜ್ಯ ಹಲವು ವಿಷಯಗಳಿಗೆ ಇಂದಿಗೂ ಗೊಂದಲದ ಗೂಡಾಗಿ ಪರಿಣಮಿಸಿದೆ. ಅವೆಂದರೆ ಒಂದು ವಿಜಯನಗರ ಸಾಮ್ರಾಜ್ಯವು ನಿರ್ದಿಷ್ಟವಾಗಿ ಎಂದು ಅಸ್ತಿತ್ವ ಪಡೆಯಿತು. ಎರಡು ಆರಂಭದ ಸಂಗಮ ಅರಸರು ಯಾವ ಮೂಲಕ್ಕೆ ಸೇರಿದವರು

ಎಂಬುದರ ಕುರಿತದ್ದು. ಇವುಗಳು ಇಂದಿಗೂ ಜಿಜ್ಞಾಸೆಯಾಗಿ ಉಳಿದುಕೊಂಡಿವೆ. ಇದನ್ನು ಕುರಿತು ಸುದೀರ್ಘವಾಗಿ ಚರ್ಚೆ, ವಾದಗಳು ನಡೆಯುತ್ತಾ ಬಂದಿವೆ. ವಿದ್ವಾಂಸರ ವಾದಗಳು ತಮ್ಮ ಮೂಗಿನ ನೇರಕ್ಕೆ ಇರುತ್ತವೆ. ಹಂಪಿ ಅಥವಾ ವಿಜಯನಗರ ಚರಿತ್ರೆಯನ್ನು ಮೊದಲಿಗೆ ನಾವು ಮೆಕೆಂಜಿಯವರ ಕೈಫಿಯತ್ತುಗಳಲ್ಲಿ ಕಾಣಬಹುದು. ನಂತರ ಮಾರ್ಕ್‌ವಿಲ್ಕ್ಸ್, ಬಿ.ಎಲ್.ರೈಸ್, ವೆಂಕಟರಂಗೋಕಟ್ಟಿಯವರು ಸಿವೆಲ್‌ರಿಗಿಂತ ಪೂರ್ವದಲ್ಲಿ ಈ ಸಾಮ್ರಾಜ್ಯದ ಚರಿತ್ರೆಯನ್ನು ಪ್ರಸ್ತಾಪಿಸಿದ್ದಾರೆ. ಇವರಲ್ಲಿ ಕೇವಲ ರಾಜರ ಯುದ್ಧಗಳು, ಹಂಪಿಯ ವೈಭವ ಹಾಗೂ ಕೃಷ್ಣದೇವರಾಯನ ವರ್ಣನೆ ಕುರಿತು ಬರೆದದ್ದು. ಈ ಚರಿತ್ರೆಯನ್ನು ಹಿಂದೂಗಳ ವಿರುದ್ಧ ಮುಸ್ಲಿಂರನ್ನು ಎತ್ತಿಕಟ್ಟಲು ಬಳಸಿಕೊಂಡರು. ಅದೇ ತೆರನಾಗಿ ಸಿವೆಲ್‌ರ ನಂತರ ಬಂದವರು ಇದನ್ನೇ ಮುಂದುವರಿಸಿದರು. ಬಿ.ಸೂರ್ಯನಾರಾಯಣರಾವ್, ಎನ್. ವೆಂಕಟರಮಣಯ್ಯ, ಪಿ.ಬಿ.ದೇಸಾಯಿ, ಬಿ.ಎ.ಸಾಲೆತ್ತೊರೆ, ಸೂರ್ಯನಾಥ ಕಾಮತ್ ಮುಂತಾದ ಪ್ರಮುಖರು ಈ ಪರಂಪರೆಯನ್ನು ಮುಂದುವರಿಸಿದ್ದಾರೆ.

ವಿಜಯನಗರ ಸಾಮ್ರಾಜ್ಯದ ಮೂಲ ಚರ್ಚಾಸ್ಪದ ವಿಷಯವಾಗಿದೆ. ಕನ್ನಡ, ತೆಲುಗು, ಕುರುಬ, ಯಾದವ ಮೂಲಗಳು ವಿವಾದಕ್ಕೆ ಕಾರಣವಾಗಿರುವುದು ಸಾಮಾನ್ಯ. ಇವು ಇಂದಿಗೂ ಪೆಡಂಭೂತವಾಗಿ ಕಾಡುತ್ತಿವೆ. ಸಾಮಾಜ್ಯದ ಸ್ಥಾಪನೆಯಲ್ಲಿರದ ಗೊಂದಲ ಈಗ ಸೃಷ್ಟಿಯಾಗಿದೆ. ಕಾರಣ ಭಾಷಾವಾರು ಪ್ರಾಂತ್ಯಗಳಾಗಿ ವಿಭಜಿಸುವಾಗ 'ಗಡಿ' ಹಾಗೂ 'ಭಾಷೆ'ಯು ಸಮಸ್ಯೆಗೆ ಸಿಲುಕಿತು. ಕರ್ನಾಟಕದ ಗಡಿ ನಿರ್ಧರಿಸುವಲ್ಲಿ ಆದ ಏಡರು ತೊಡರುಗಳು ಬಳ್ಳಾರಿ ಜಿಲ್ಲೆಯಲ್ಲಿ ತೆಲುಗು ಮಾತನಾಡುವ ಜನರೇ ಹೆಚ್ಚಿರುವ ಕಾರಣದಿಂದ ಈ ಗೊಂದಲ ಇನ್ನೂ ಅಧಿಕವಾಯಿತು. ೧೯೩೬ ರಿಂದ ಈ ವಾದಗಳು ಹೆಚ್ಚು ಮಹತ್ತ್ವ ಪಡೆದಿವೆ. ಈ ವಾದಗಳಿಂದ ಇಂದಿಗೂ ಹೊರಬರಲು ಸಾಧ್ಯವಾಗುತ್ತಿಲ್ಲ, ಪ್ರಾಂತೀಯ ಅಭಿಮಾನ ಇದಕ್ಕೆ ಕಾರಣ ಎನ್ನಲಾಗಿದೆ.

೧೯೩೬ರ ಡಿಸೆಂಬರ್ ತಿಂಗಳಲ್ಲಿ ವಿಜಯನಗರ ಸಾಮ್ರಾಜ್ಯ ಸಂಸ್ಥಾಪನೆಯ ಕುರಿತು ಮಹತ್ತ್ವದ ಬೆಳವಣಿಗೆಯನ್ನು ಕಂಡಿತು. ಹಂಪಿಯಲ್ಲಿ ವಿಜಯನಗರ ಸಾಮ್ರಾಜ್ಯ ಸಂಸ್ಥಾಪನೆಯ ೬೦೦ನೇ ವರ್ಷಾಚರಣೆಯ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಇಲ್ಲಿ ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ಪುನಃ ರಚಿಸುವ ಕಾರ್ಯಕ್ಕೆ ಕೈ ಹಾಕಿದರು. ಈ ಮಹೋತ್ಸವಕ್ಕೆ ಕರ್ನಾಟಕ, ಆಂಧ್ರ ಪ್ರದೇಶ, ತಮಿಳುನಾಡು ಮಹಾರಾಷ್ಟ್ರ, ಬಂಗಾಳ, ಸಂಯುಕ್ತ ಪ್ರಾಂತ್ಯದಿಂದಲೂ ಆಗಮಿಸಿದ್ದರು. ಇದರಲ್ಲಿ ನಾಡಿನ ವಿದ್ವಾಂಸರು, ಕವಿಗಳು, ಇತಿಹಾಸಕಾರರು, ಶಾಸನತಜ್ಞರು ಭಾಗವಹಿಸಿದ್ದು ಗಮನಾರ್ಹ. ಅವರಲ್ಲಿ ಆಲೂರ ವೆಂಕಟರಾಯರು, ಫಾದರ್ ಹೆರಾಸ್, ಬಿ.ಎ.ಸಾಲೆತ್ತೊರೆ, ಪಿ.ಬಿ.ದೇಸಾಯಿ, ಎನ್. ವೆಂಕಟರಮಣಯ್ಯ ಎಸ್.ಕೆ.ಅಯ್ಯಂಗಾರ್, ಕೆ.ಎ.ನೀಲಕಂಠಶಾಸ್ತ್ರಿ ಪ್ರಮುಖರು ಹಾಗೂ ಅಗ್ರಗಣ್ಯರಾಗಿದ್ದಾರೆ. ಇವರು ಇಲ್ಲಿ ತಮ್ಮದೇ ಆದ ಪ್ರಬಂಧಗಳನ್ನು ಮಂಡಿಸಿದ್ದು ವಿಶೇಷ. ದೇಸಾಯಿ ಹಾಗೂ ಸಾಲೆತ್ತೊರೆಯವರು

ಕರ್ನಾಟಕ, ಕನ್ನಡ, ಕುರುಬ ಮೂಲವೆಂದು ತಮ್ಮ ಪ್ರಬಂಧದಲ್ಲಿ ವಿಶ್ಲೇಷಿಸಿ ಮಂಡಿಸಿದರು. ಈ ವಾದಕ್ಕೆ ವ್ಯತಿರಿಕ್ತವಾಗಿ ಎನ್.ವೆಂಕಟರಮಣಯ್ಯ ತೆಲುಗು, ವಾರಂಗಲ್ ಮೂಲ ಎಂದು ಪ್ರತಿಪಾದಿಸಿದರು.

ರಾಬರ್ಟ್ ಸಿವೆಲ್‌ಗೂ ಪೂರ್ವದಲ್ಲಿ ವಿಜಯನಗರ ಸಾಮ್ರಾಜ್ಯದ ಮೂಲ ಕುರಿತು ಅನೇಕ ಭಾರತೀಯ ವಿದ್ವಾಂಸರು ಹಾಗೂ ಬ್ರಿಟಿಷ್ ಅಧಿಕಾರಿಗಳು ಚರ್ಚಿಸಿದ್ದಾರೆ. ಅವರ ಹೇಳಿಕೆಗಳನ್ನು ಪರಿಶೀಲಿಸಿ ಮೂಲದ ಬಗ್ಗೆ ಇರುವ ಭಿನ್ನಾಭಿಪ್ರಾಯ ಗಮನಿಸುವುದು ಸೂಕ್ತ. ಸಿವೆಲ್‌ರು ತನ್ನ ಕೃತಿಯನ್ನು ಬರೆಯುವುದಕ್ಕೆ ಪೂರ್ವದಲ್ಲಿ ವಿದೇಶಿ ವಿದ್ವಾಂಸರು, ಈ ಸಾಮ್ರಾಜ್ಯದ ಸ್ಥಾಪನೆಯ ಮೂಲ, ಅದರ ಹಿನ್ನೆಲೆ ಸಂಗಮ ವಂಶಸ್ಥರು ಎಲ್ಲಿಂದ ಬಂದವರು ಎಂಬ ವಿಚಾರವನ್ನು ತಮ್ಮ ಕೃತಿಗಳಲ್ಲಿ ಪ್ರಸ್ತಾಪಿಸಿದ್ದಾರೆ. ಅವರಲ್ಲಿ ಮಾರ್ಕ್‌ವಿಲ್ಕ್ಸ್ ಮೊದಲಿಗರು. ವಿಲ್ಕ್ಸ್‌ರು ತಮ್ಮ ಕೃತಿಯಲ್ಲಿ ವಿಜಯನಗರದ ಸಂಗಮ ವಂಶಜರ ಮೂಲವನ್ನು ಕುರಿತು ಈ ರೀತಿ ಪ್ರಸ್ತಾಪಿಸಿದ್ದಾರೆ. ಸಂಗಮ(ವಂಶಸ್ಥರು) ಸಹೋದರರು ವಾರಂಗಲ್‌ನ ಭಂಡಾರದಲ್ಲಿ ಅಧಿಕಾರಿಗಳಾಗಿದ್ದರೆಂದೂ, ವಾರಂಗಲ್ ಪತನಾನಂತರ ಕಂಪ್ಲಿಯ ಸನಿಹದಲ್ಲಿ ಬಂದು ನೆಲೆಸಿದರು. ವಾರಂಗಲ್‌ನಿಂದ ತಂದ ಹಣದಿಂದ ಒಂದು ಹೊಸ ರಾಜಮನೆತನವನ್ನು ಸ್ಥಾಪಿಸಿದರು.[೨] ಇದರ ರಾಜಧಾನಿಯನ್ನು ವಿದ್ಯಾನಗರ ಎಂದು ಕರೆದರು. ಮುಂದೆ ಆ ರಾಜಮನೆತನವೇ ವಿಜಯನಗರ ಸಾಮ್ರಾಜ್ಯವಾಯಿತು, ಅದರ ಸ್ಥಾಪಕರು ಹರಿಹರ ಬುಕ್ಕರೆಂದು ಹೆಸರು ಪಡೆದರು.

ಬಿ.ಎಲ್.ರೈಸರು ತಮ್ಮ ಕೃತಿಯಲ್ಲಿ ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರು ಹೊಯ್ಸಳರ ಮಾಂಡಲೀಕರಾಗಿದ್ದರು. ವಾರಂಗಲ್ ಹಾಗೂ ದ್ವಾರಸಮುದ್ರದ ಪತನ ನಂತರ ಇದರ ಲಾಭ ಪಡೆದು ಹೊಸ ಸಾಮ್ರಾಜ್ಯದ ಸ್ಥಾಪನೆಗೆ ನಾಂದಿ ಹಾಡಿದರು. ರೈಸ್ ಹೇಳುವ ಪ್ರಕಾರ ಯಾದವ ವಂಶ ಇವರ ಮೂಲ ಎಂದಿದ್ದಾರೆ.[೩] ಇವರ ಗ್ರಹಿಕೆಯು ಸಹ ವಿವಾದಕ್ಕೆ ಎಡೆಮಾಡಿಕೊಟ್ಟಿದೆ.

ಕನ್ನಡದ ಮತ್ತೊಬ್ಬ ಪ್ರಮುಖ ವಿದ್ವಾಂಸರು ವೆಂಕಟರಂಗೋಕಟ್ಟಿ-ಇವರು ಬ್ರಿಟಿಷರ ಆಡಳಿತದಲ್ಲಿ ಅಧಿಕಾರಿಯಾಗಿದ್ದವರು. ೧೮೯೩ರಲ್ಲಿ ಪ್ರಕಟವಾದ 'ಗೆಜೆಟಿಯರ್ ಮುಂಬೈ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು' ಎಂಬುದನ್ನು ಭಾಷಾಂತರಿಸಿದರು. ಅದರಲ್ಲಿ ವಿಜಯನಗರ ಸಾಮ್ರಾಜ್ಯದ ಮೂಲವನ್ನು ಕುರಿತು ಈ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ವಾರಂಗಲ್ಲಿನ ಕಾಕತೀಯ ಅರಸರ ಬಳಿ ಬೊಕ್ಕಸದಲ್ಲಿ ಕಾವಲುಗಾರರಾಗಿದ್ದ, ದಂಡಾಳುಗಳಿಬ್ಬರು. ಸಾಕಷ್ಟು ಹಣ ವಿದ್ಯಾರಣ್ಯರ ಬಳಿಗೆ ತಂದರೆಂದು, ಇವರ ಹಣದ ಹೊರ್ತು ಮಾಧವಾಚಾರ್ಯರು ಇವರಿಗೆ ಅಪರಿಮಿತ ದ್ರವ್ಯವನ್ನು ಸಂಪಾದಿಸಿಕೊಟ್ಟು, ವಿಜಯನಗರವನ್ನು ಕಟ್ಟಿಸಿದರು.[೪] ವಿಜಯನಗರದ ಅರಸರು ತೆಲುಗು ಮೂಲದವರೆಂದು. ಇವರೇ ಹೊಸ ಪಟ್ಟಣ ಒಂದನ್ನು ಕಟ್ಟಿಸಿ ಅದಕ್ಕೆ ವಿಜಯನಗರವೆಂದು ಹೆಸರಿಟ್ಟರು. ಇವರು ಕ್ರಿ.ಶ.೧೩೩೬ರಲ್ಲಿ ಸಾಮ್ರಾಜ್ಯವು

ಸ್ಥಾಪಿತವಾಯಿತೆಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಇವರ ಅಭಿಪ್ರಾಯವು ಸಹ ವಿವಾದವನ್ನು ಸೃಷ್ಟಿಸಿದೆ. ಹೊಸ ಪಟ್ಟಣವನ್ನು ವೀರಬಲ್ಲಾಳನು ಸ್ಥಾಪಿಸಿದನೆಂದು ಅಭಿಪ್ರಾಯಪಡಲಾಗಿದೆ. ಹಾಗೂ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ವರ್ಷವನ್ನು ನಿಖರವಾಗಿ ಗುರುತಿಸಲು ಆಗದು. ಆದರೆ ಇವರು ಕ್ರಿ.ಶ.೧೩೩೬ರಲ್ಲಿ ಸ್ಥಾಪಿಸಲಾಯಿತು ಎಂದಿದ್ದಾರೆ.

ರಾಬರ್ಟ್ ಸಿವೆಲ್ ವಿಜಯನಗರ ಸಾಮ್ರಾಜ್ಯದ ಚರಿತ್ರೆಯ ಆದ್ಯ ನಿರ್ಮಾತೃ. ಆವರು ಮೂಲವನ್ನು ಕುರಿತು ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮಹಾನ್ ರಾಜ್ಯದ ಹುಟ್ಟಿನ ಬಗೆಗೆ ಪರಿಗಣಿಸಲು ಮತ್ತು ನಮಗೆ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳಲು ಕತೆಗಳ ಹಾಗೂ ವಾಡಿಕೆಗಳ ಕಂತೆಯೇ ಲಭ್ಯವಿದೆ. ಅವುಗಳಲ್ಲಿ ಆಯ್ದ ಕೆಲವನ್ನು ಈ ಮುಂದಿನಂತೆ ಚರ್ಚಿಸೋಣ.

ಒಂದು : ಉತ್ತರ ಭಾರತದಲ್ಲಿ ಹಿಡಿತ ಸಾಧಿಸಿದ ಮೇಲೆ ದೆಹಲಿಯ ಸುಲ್ತಾನರು ದಕ್ಷಿಣದತ್ತ ನೋಟ ಬೀರಿದರು. ದಕ್ಷಿಣದ ಕಡೆ ತಮ್ಮ ಪ್ರಭುತ್ವ ಸ್ಥಾಪಿಸಲು ಮುಂದಾಗಿ ದಾಳಿ ನಡೆಸಿದ್ದಾರೆ. ಅಲ್ಲಾವುದ್ದೀನ್ ಖಿಲ್ಜಿಯು ದಕ್ಷಿಣದ ದೇವಗಿರಿಯ ಮೇಲೆ ದಾಳಿ ಮಾಡಿ ಈ ಕ್ರಿಯೆಗೆ ನಾಂದಿ ಹಾಡಿದನು. ಇದನ್ನು ಮಹಮ್ಮದ್ ಬಿನ್ ತೊಘಲಕನು ಮುಂದುವರಿಸಿದ. ಇವನು ದಕ್ಷಿಣದ ವಾರಂಗಲ್, ದೇವಗಿರಿ, ದ್ವಾರಸಮುದ್ರಗಳ ಮೇಲೆ ದಾಳಿ ಮಾಡಿ ಅವುಗಳನ್ನು ವಶಪಡಿಸಿಕೊಂಡನು. ೧೩೨೭ರಲ್ಲಿ ವಾರಂಗಲ್ ನ್ನು ವಶಪಡಿಸಿಕೊಂಡು ಅದನ್ನು ನಾಶಪಡಿಸಿದ. ವಾರಂಗಲ್ ರಾಜನ ಸೇವೆಯಲ್ಲಿದ್ದ ಹರಿಹರ ಬುಕ್ಕ ಎಂಬ ಸಂಗಮ ಸಹೋದರರು ಅಲ್ಲಿಂದ ಒಂದು ಚಿಕ್ಕ ಅಶ್ವದಳದೊಂದಿಗೆ ಪಾರಾಗಿ ಆನೆಗೊಂದಿಗೆ ಬಂದರು. ಅವರ ಜೊತೆಯಲ್ಲಿ ವಿದ್ಯಾರಣ್ಯರು ಸಹ ಇದ್ದು, ನಂತರ ಇವರ ಆಶೀರ್ವಾದದಿಂದ ಈ ಪ್ರದೇಶದ ದೊರೆಗಳಾಗಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು.[೫]

ಎರಡು : ಬುಕ್ಕ ಮತ್ತು ಹರಿಹರರು ಸಹೋದರರು. ಇವರು ವಾರಂಗಲ್ಲಿನ ಮಹಮ್ಮದೀಯ ಮಂಡಲಾಧಿಪತಿಯ ಸೇವೆಯಲ್ಲಿದ್ದವರು. ಕ್ರಿ.ಶ.೧೩೧೦ರಲ್ಲಿ ಮಲ್ಲಿಕಾಫರ್‌ನ ನೇತೃತ್ವದಲ್ಲಿ ಹೊಯ್ಸಳ ಬಲ್ಲಾಳರ ವಿರುದ್ಧ ಕಳುಹಿಸಲಾದ ದಂಡೆಯಾತ್ರೆಯಲ್ಲಿ ಇವರು ಭಾಗವಹಿಸಿದ್ದರು. ಆದರೆ ಇವರಿದ್ದ ಸೈನ್ಯದ ದಳವು ಸೋತಿತು. ದ್ವಾರಸಮುದ್ರ ಮಲ್ಲಿಕಾಫರ್‌ನ ವಶವಾಯಿತು. ಇವರು ಅಲ್ಲಿಂದ ತಪ್ಪಿಸಿಕೊಂಡು ಆನೆಗೊಂದಿಗೆ ಬಂದರು. ಅಲ್ಲಿಯೇ ಇದ್ದ ಮಾಧವರ ದರ್ಶನ ಪಡೆದರು. ಅವರ ನೆರವಿನಿಂದ ರಾಜ್ಯ ಮತ್ತು ರಾಜಧಾನಿಯನ್ನು ಸಂಸ್ಥಾಪಿಸಿದರು.[೬]

ಮೂರು : ಮಾಧವ ಎಂಬ ಸಂನ್ಯಾಸಿಯು ಗುಪ್ತನಿಧಿಯನ್ನು ಶೋಧಿಸಿದ್ದು, ಆ ನಿಧಿಯಿಂದ ನಗರವನ್ನು ಸ್ಥಾಪಿಸಿ ತಾವೇ ಆಳ್ವಿಕೆ ನಡೆಸಿದರು. ತನ್ನ ಮರಣದ ನಂತರ ಅದನ್ನು ಒಂದು ಕುರುಬ ಮನೆತನಕ್ಕೆ ಬಿಟ್ಟುಕೊಟ್ಟರೆಂದು ಅವರೇ ಪ್ರಥಮ ಕ್ರಮಬದ್ಧ ರಾಜಮನೆತನವನ್ನು ಸ್ಥಾಪಿಸಿದರೆಂದು, ಇದು ಮುಂದೇ ವಿಜಯನಗರ ಸಾಮ್ರಾಜ್ಯವಾಯಿತು[೭] ಎಂದು ಅಭಿಪ್ರಾಯಪಟ್ಟಿದ್ದಾರೆ.

ನಾಲ್ಕು : ಮಾಧವ ಎಂಬ ಸಂನ್ಯಾಸಿಯು ಅರಣ್ಯದಲ್ಲಿ ತಪಸ್ಸನ್ನು ಆಚರಿಸುತ್ತಿದ್ದರು. ಬುಕ್ಕನೆಂಬ ಬಡಕುರುಬನು ಪ್ರತಿದಿನ ತಂದುಕೊಡುತ್ತಿದ್ದ ಊಟವೇ ಇವರಿಗೆ ಆಧಾರವಾಗಿತ್ತು. ಒಂದು ದಿನ ಆ ಕುರುಬನಿಗೆ ನೀನು ಇಡೀ "ಹಿಂದೂಸ್ತಾನದ ರಾಜ ಹಾಗೂ ಸಾಮ್ರಾಟನಾಗುವಿ" ಎಂದು ಆಶೀರ್ವಾದಿಸಿದರು. ಅವನು ಅಂದಿನಿಂದ ಉಳಿದ ಕುರುಬರಿಗೆ ನಾಯಕನಂತಿದ್ದನು. ತನ್ನ ನೆರೆಹೊರೆಯವರನ್ನು ಗೆದ್ದು ತನ್ನನ್ನು ಅವರ ಪ್ರಭು, ಬೊಕಾರಾವ್ ಎಂದು ಕರೆದುಕೊಂಡ. ದಿಲ್ಲಿಯ ರಾಜನ ವಿರುದ್ಧ ಗೆದ್ದು, ಬುಕ್ಕನು ನಗರವೊಂದನ್ನು ಸ್ಥಾಪಿಸಿ ಅದನ್ನು ವಿಜಯನಗರ ಎಂದು ಕರೆದ. ಇದೇ ಮುಂದೆ ವಿಜಯನಗರವಾಯಿತು. ಇದನ್ನು ಸಿವೆಲ್‌ರು ಕೌಟೋರ ವೃತ್ತಾಂತದಿಂದ ಆಯ್ದುಕೊಂಡಿದ್ದಾರೆ.[೮]

ಐದು : ಬುಕ್ಕ ಮತ್ತು ಹರಿಹರ ಹೊಯ್ಸಳ ದೊರೆ ಮುಮ್ಮಡಿ ವೀರಬಲ್ಲಾಳನ ಮಾಂಡಲೀಕರಾಗಿದ್ದರು. ಮಲ್ಲಿಕಾಫರನು ಹೊಯ್ಸಳರ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿಕೊಂಡನು. ಇದರಿಂದ ಸ್ವತಂತ್ರರಾದ ಬುಕ್ಕ ಮತ್ತು ಹರಿಹರ ಸಹೋದರರು ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಮಾಡಿದರು.[೯]

ಆರು : ರಷ್ಯಾದ ಪ್ರವಾಸಿ ನಿಕಟಿನ್ ವಿಜಯನಗರದ ಆರಂಭದ ಅರಸರು ಬನವಾಸಿಯ ಕದಂಬ ರಾಜಮನೆತನಕ್ಕೆ ಸೇರಿದವರಾಗಿದ್ದರೆಂದು[೧೦] ಅಭಿಪ್ರಾಯ ಪಟ್ಟಿದ್ದಾರೆ.

ರಾಬರ್ಟ್ ಸಿವೆಲ್‌ರು ಈ ಮೇಲಿನ ಎಲ್ಲಾ ವಾದಗಳನ್ನು ಪರಿಶೀಲಿಸಿ(ಗಮನಿಸಿ) ತಮ್ಮದೇ ಆದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇವರು ವಿದೇಶಿ ಬರವಣಿಗೆ ಹಾಗೂ ಶಾಸನಗಳ ಸಹಾಯದಿಂದ ವಿಶ್ಲೇಷಿಸಿರುವರು. ಬುಕ್ಕ ಮತ್ತು ಹರಿಹರರು ಸಹೋದರರಾಗಿದ್ದರು. ವಾರಂಗಲ್ಲಿನ ರಾಜನ ಆಸ್ಥಾನದಲ್ಲಿ ಸೇವೆಯಲ್ಲಿದ್ದರು. ೧೩೨೩ರಲ್ಲಿ ಮಹಮ್ಮದೀಯರ ದಾಳಿಯಿಂದಾಗಿ ವಾರಂಗಲ್ ಪತನವಾಯಿತು. ವಾರಂಗಲ್‌ನಿಂದ ಬಂದ ಇವರು ಆನೆಗೊಂದಿಯ ಅರಸರಲ್ಲಿ ಸೇವೆಗೆ ಸೇರಿದರು. ಇಲ್ಲಿ ಅಮಾತ್ಯ ಹಾಗೂ ಭಂಡಾರಿಗಳಾಗಿದ್ದರು. ಇದೇ ಸಮಯಕ್ಕೆ ಆನೆಗೊಂದಿಯ ಅರಸ ದಿಲ್ಲಿಯ ಸುಲ್ತಾನನ ಸಹೋದರಳಿಯನಾದ ಬಹಾವುದ್ದೀನ್‌ಗೆ ಆಶ್ರಯ ನೀಡಿದ್ದನು. ಇದರಿಂದ ಕ್ರೋಧಗೊಂಡ ಸುಲ್ತಾನ್ ಆನೆಗೊಂದಿಗೆ ಮುತ್ತಿಗೆ ಹಾಕಿ ವಶಪಡಿಸಿಕೊಂಡು ಅಲ್ಲಿ ಮಲ್ಲಿಕ್ ಎಂಬುವನನ್ನು ಪ್ರಾಂತ್ಯಾಧಿಕಾರಿಯನ್ನಾಗಿ ನೇಮಿಸಿ ವಾಪಸ್ಸಾದನು. ಆದರೆ ಸ್ಥಳೀಯ ಜನತೆ ಮಲ್ಲಿಕ್ ನನ್ನು ವಿರೋಧಿಸಿ ದಂಗೆ ಎದ್ದರು. ಇದಕ್ಕಾಗಿ ಮಲ್ಲಿಕ್‌ನು ರಾಜ್ಯವನ್ನು ಹಿಂದೂಗಳಿಗೆ ಹಿಂತಿರುಗಿಸಿಕೊಟ್ಟ. ಇದೇ ಸಮಯದಲ್ಲಿ ಅಮಾತ್ಯ ಹಾಗೂ ಭಂಡಾರಿಗಳಾಗಿದ್ದ ಈ ಇಬ್ಬರು ಸಹೋದರರನ್ನು ಅನುಕ್ರಮವಾಗಿ ರಾಜ ಮತ್ತು ಅಮಾತ್ಯ ಪದವಿಗೇರಿಸಿದ. ಇವರೇ ಹರಿಹರ-ಬುಕ್ಕರು. ಇವರು ಸ್ಥಾಪಿಸಿದ ಸಾಮ್ರಾಜ್ಯವೇ ವಿಜಯನಗರ ಸಾಮ್ರಾಜ್ಯವಾಗಿದೆ.[೧೧]

ರಾಬರ್ಟ್ ಸಿವೆಲ್‌ರ ವಾದಗಳನ್ನು ಪರಾಮರ್ಶಿಸಿದಾಗ ಗೋಚರಿಸುವ ಪ್ರಮುಖ ಅಂಶಗಳು ಚರ್ಚೆಗೆ ಆಸ್ಪದ ಮಾಡಿಕೊಡುತ್ತವೆ. ಇವರ ಮೂರನೇ ವಾದವು ಅನೇಕ ವಾದಗಳಗೆ ಎಡೆಮಾಡಿಕೊಟ್ಟಿದೆ. ಇಲ್ಲಿ ಮಾಧವ ಎಂಬ ಸಂನ್ಯಾಸಿಯ ಒಂದು ಸಾಮ್ರಾಜ್ಯವನ್ನು ಸ್ಥಾಪಿಸಿದನೆಂತಲೂ, ಅವನ ಮರಣದ ನಂತರ ಅದನ್ನು ಒಬ್ಬ ಕುರುಬ ಮನೆತನಕ್ಕೆ ಬಿಟ್ಟುಕೊಟ್ಟರೆಂತಲೂ(ನೀಡಿದ) ಇದೆ. ಹಾಗಾದರೆ ಈ ಮಾಧವ ಹಾಗೂ ವಿದ್ಯಾರಣ್ಯರು ಬೇರೆ-ಬೇರೆಯೇ, ಇವರು ಸ್ಥಾಪಿಸಿದ ಸಾಮ್ರಾಜ್ಯ ಯಾವುದು. ಮೊದಲೆರೆಡು ವಾದಗಳಲ್ಲಿ ವಿದ್ಯಾರಣ್ಯರ ಆಶೀರ್ವಾದದಿಂದ ಸಾಮ್ರಾಜ್ಯ ಸ್ಥಾಪಿಸಿದರು ಎಂದಾದ ಮೇಲೆ, ಇವರು ಬೇರೆ ಇರಬೇಕು ಹಾಗೂ ಮಾಧವ ಎಂಬ ಸಂನ್ಯಾಸಿಯು ಬೇರೆಯೇ? ಎಂಬ ಪ್ರಶ್ನೆಗಳು ಮೂಡುವುದು ಸಹಜ. ಇವರ ನಾಲ್ಕನೇ ವಾದವು ಹಿಂದೂಸ್ತಾನದ ಕಲ್ಪನೆಯನ್ನು ಹೊಂದಿದೆ. ಹಿಂದೂಸ್ತಾನದ ಕಲ್ಪನೆಯು ರಾಷ್ಟ್ರೀಯವಾದ ಇತಿಹಾಸಕಾರರ ಕೂಸಾಗಿದೆ. ಹಿಂದೂಸ್ತಾನದ ಕಲ್ಪನೆಯು ಬ್ರಿಟಿಷರ 'ಒಡೆದು ಆಳುವ ನೀತಿ'ಗೆ ನೀರೆರೆದು ಬೆಳೆಸಿದ್ದಾರೆ. ಅಲ್ಲದೆ ಒಬ್ಬ ಸಾಮಾನ್ಯ ಮನುಷ್ಯನು ಸಾಮ್ರಾಟ ಆಗುವ ಅವಕಾಶವಿತ್ತೆ? ಎಂಬ ಪ್ರಶ್ನೆ ಮೂಡುವುದು. ಸಹಜವಾಗಿ ಕ್ಷತ್ರೀಯರಿಗೆ ಮಾತ್ರ ಸೀಮಿತವಾದ ಈ ಪದವಿ ಸಾಮಾನ್ಯರಿಗೆ ದೊರಕುತಿತ್ತೇ. ಮುಂದುವರಿದು ಇದೇ ವಾದದಲ್ಲಿ ಒಂದು ಹೊಸನಗರವನ್ನು ಸ್ಥಾಪಿಸಿದನೆಂದು, ಅದು ಯಾವ ನಗರ, ಹಂಪಿಯೇ? ಆನೆಗೊಂದಿಯಲ್ಲಿ ಹೊಸ ಪಟ್ಟಣ ನಿರ್ಮಾಣವೇ ಅಥವಾ ಮುಮ್ಮಡಿ ಬಲ್ಲಾಳನು ಸ್ಥಾಪಿಸಿದ ಹೊಸಪಟ್ಟಣವನ್ನು ಹೆಸರಿಸಲಾಗಿದೆಯೇ ಎಂಬುದು ಚರ್ಚೆಗೆ ಎಡೆ ಮಾಡಿಕೊಟ್ಟಿದೆ.

ರಾಬರ್ಟ್ ಸಿವೆಲ್‌ರ ವಾದಗಳಿಂದ ಗೋಚರಿಸುವ ಪ್ರಮುಖ ಸಂಗತಿಗಳೆಂದರೆ ಒಂದು "ಆರಂಭದ ಸಂಗಮ ವಂಶಸ್ಥರು ವಾರಂಗಲ್‌ನಿಂದ ಬಂದವರೆಂದು." ಎರಡು ಸಂಗಮ ವಂಶಸ್ಥರು ಕುರುಬ ಜಾತಿಗೆ ಸೇರಿದವರು. ಮೂರು ವಿಜಯನಗರ ಸಾಮ್ರಾಜ್ಯಕ್ಕಿಂತ ಪೂರ್ವದಲ್ಲಿ ಆನೆಗೊಂದಿಯಲ್ಲಿ ಒಂದು ರಾಜಮನೆತನವಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ. ಇವುಗಳಲ್ಲಿ ಮೇಲಿನ ಎರಡು ಅಂಶಗಳು ವಿವಾದಕ್ಕೆ ಕಾರಣವಾಗಿವೆ. ಕೊನೆಯ ಅಂಶವು ಮಾತ್ರ ಸಮಂಜಸವಾಗಿದೆ. ಇದಕ್ಕೆ ಪೂರಕವಾಗಿ ಅನೇಕ ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರಲ್ಲಿ ಬಿ.ಸೂರ್ಯನಾರಾಯಣರಾವ್, ಎನ್ .ವೆಂಕಟರಮಣಯ್ಯ, ಬಿ.ಎ.ಸಾಲೆತ್ತೊರೆ, ಪಿ.ಬಿ.ದೇಸಾಯಿ, ಸೂರ್ಯನಾಥ ಕಾಮತ್, ಬಿ.ಷೇಕ್ ಅಲಿ ಪ್ರಮುಖರು ಹಾಗೂ ಅಗ್ರಗಣ್ಯರು.

ರಾಬರ್ಟ್ ಸಿವೆಲ್‌ರ ನಂತರ ಅವರನ್ನು ಅನುಸರಿಸಿ ಅನೇಕ ವಿದ್ವಾಂಸರು ವಿಜಯನಗರದ ಚರಿತ್ರೆಯನ್ನು ರಚಿಸಿದ್ದಾರೆ. ಅವರಲ್ಲಿ ಬಿ.ಸೂರ್ಯನಾರಾಯಣರಾವ್ ಒಬ್ಬರು. 'ಎ ಹಿಸ್ಟರಿ ಆಫ್ ವಿಜಯನಗರ : ದಿ ನೆವರ್ ಟು ಬಿ ಫರ್‌ಗಾಟನ್ ಎಂಪೈರ್' ಇವರ ಮಹತ್ತ್ವದ ಕೃತಿಯಾಗಿದೆ. ಇದು ೧೯೦೫ರಲ್ಲಿ ಪ್ರಕಟವಾಯಿತು. ಸಿವೆಲ್ ರು "ಮರೆತು ಹೋದ ಸಾಮ್ರಾಜ್ಯ" ಎಂದು ಕರೆದರೆ ಇವರು

'ಮರೆಯಲಾರದ ಮಹಾಸಾಮ್ರಾಜ್ಯ' ಎಂದಿರುವರು. ಇವರು ಸಾಮ್ರಾಜ್ಯದ ಸ್ಥಾಪನೆಯ ಗೊಂದಲ ಕುರಿತು ಹಲವು ಪ್ರಸ್ತಾಪಗಳನ್ನು ಮುಂದಿಡುತ್ತಾರೆ. ಅವುಗಳಲ್ಲಿ ಒಂದು ಇದಾಗಿದೆ.

ಕ್ರಿ.ಶ.೧೨೩೦ರಲ್ಲಿ ದೆಹಲಿ ಸುಲ್ತಾನರು ವಿಜಯನಗರದ ಮೇಲೆ ದಂಡೆತ್ತಿ ಬಂದರು. ಆಗ ವಿಜಯನಗರದ ರಾಜಧಾನಿ ಆನೆಗೊಂದಿಯಾಗಿತ್ತು. ಆನೆಗೊಂದಿ ರಾಜನು ತನ್ನ ೫೦,೦೦೦ ಸಾವಿರ ಸೈನಿಕರಲ್ಲಿ ಆಯ್ದ ೫೦೦೦ ಸೈನಿಕರೊಂದಿಗೆ ಆನೆಗೊಂದಿಯನ್ನು ತೊರೆದು ಕ್ಮೈನ್ಮಠ ಕೋಟೆಗೆ ಹೋದನು. ದೆಹಲಿ ಸುಲ್ತಾನರು ಸುಮಾರು ೧೨ ವರ್ಷಗಳ ಕಾಲ ಮುತ್ತಿಗೆ ಹಾಕಿದರು. ಕೊನೆಯಲ್ಲಿ ಆನೆಗೊಂದಿ ಅರಸನು. ಅಂತಿಮ ಯುದ್ಧಕ್ಕೆ ಹೊರಟಾಗ ದೊಡ್ಡ ಅಗ್ನಿಕುಂಡವನ್ನು ಏರ್ಪಡಿಸಿದನು. ಅದರಲ್ಲಿ ರಾಣಿಯರು ಶ್ರೀಮಂತ ಮನೆತನದ ಸ್ತ್ರೀಯರು ಅಗ್ನಿ ಪ್ರವೇಶ ಮಾಡಿದರು. ನಂತರ ನಡೆದ ಯುದ್ಧದಲ್ಲಿ ದೆಹಲಿ ಸುಲ್ತಾನರು ಆನೆಗೊಂದಿ ಅರಸನನ್ನು ಸೋಲಿಸಿ ಕೋಟೆಯನ್ನು ವಶಪಡಿಸಿಕೊಂಡು, ಕೋಟೆಯನ್ನು ಪ್ರವೇಶಿಸಿದಾಗ ಸುಲ್ತಾನರಿಗೆ ಕೇವಲ ಆರು ಮಂದಿ ಮಾತ್ರ ಸೆರೆ ಸಿಕ್ಕರು. ಇವರು ಪ್ರಧಾನಮಂತ್ರಿ, ಖಜಾಂಚಿ ಮತ್ತು ಶಾಖಾಧಿಕಾರಿಗಳಾಗಿದ್ದರು. ಇವರನ್ನು ದೆಹಲಿಗೆ ಕರೆದೊಯ್ಯಲಾಯಿತು.

ದೆಹಲಿ ಸುಲ್ತಾನನು ಎರಡು ವರ್ಷ ಕೋಟೆಯಲ್ಲಿದ್ದು ಕೊಲೆ, ಸುಲಿಗೆ, ದರೋಡೆಯಂತಹ ವಿಧ್ವಂಸಕಾರಿ ಕೃತ್ಯದಲ್ಲಿ ತೊಡಗಿದ್ದನು. ನಂತರ ತನ್ನ ನಂಬಿಕಸ್ಥನಾದ ಎನ್ನಿ ಕಿಲ್ಲಿಮೂರ್‌ನಿಗೆ ಒಪ್ಪಿಸಿ ದೆಹಲಿಗೆ ಹಿಂತಿರುಗಿದನು. ದೆಹಲಿ ಸುಲ್ತಾನನು ಹಿಂತಿರುಗಿದ್ದನ್ನು ಕಂಡು ತಲೆಮರೆಸಿಕೊಂಡಿದ್ದ ಸ್ಥಳೀಯ ಜನತೆ, ಸುಲ್ತಾನನ ಪ್ರತಿನಿಧಿ ಮೂರ್‌ನಿಗೆ ಕಿರುಕುಳ ಕೊಡಲು ಪ್ರಾರಂಭಿಸಿದರು. ಇದನ್ನು ಮೂರ್‌ನು ದೆಹಲಿಗೆ ಸುದ್ದಿ ತಲುಪಿಸಿದನು. ದೆಹಲಿ ಸುಲ್ತಾನರು ಯುದ್ಧದಲ್ಲಿ ಬಲಿಯಾದ ಸೈನಿಕರ ಪ್ರಾಣ, ಪರಿಶ್ರಮ ಮತ್ತು ವ್ಯಯವಾಗುವ ಹಣ ಪೋಲಾಗಬಾರದೆಂದು ತೀರ್ಮಾನಿಸಿದ. ಇವರು ಅದಕ್ಕಾಗಿ ಸೆರೆಸಿಕ್ಕ ಆರು ಮಂದಿಯ ಸಭೆಯ ಕರೆದು ವಿಚಾರಿಸಿದನು. ಅದರಲ್ಲಿ ಆನೆಗೊಂದಿ ಅರಸರಿಗೆ ರಕ್ತ ಸಂಬಂಧಿಗಳಾದ ಒಬ್ಬನನ್ನು ಆ ರಾಜ್ಯದ ಪ್ರತಿನಿಧಿಯಾಗಿ ಪಟ್ಟಕಟ್ಟಿ, ಕಪ್ಪಕಾಣಿಕೆ ನೀಡುವಂತೆ ಪ್ರಮಾಣ ಮಾಡಿಸಿಕೊಂಡನು. ನಂತರ ಆತನನ್ನು ಆನೆಗೊಂದಿಗೆ ರಾಜಮರ್ಯಾದೆಗಳೊಂದಿಗೆ ಕಳುಹಿಸಿಕೊಟ್ಟ. ಆತನೇ ಮಂತ್ರಿಯಾಗಿದ್ದ ದೇವರಾಯ. ದೇವರಾಯ ರಾಜಧಾನಿಗೆ ಬಂದಾಗ ಭವ್ಯ ಸ್ವಾಗತ ದೊರೆಯಿತು. ಅನ್ಯರ ಆಳ್ವಿಕೆಯಿಂದ ಬೇಸತ್ತಿದ್ದ ಜನತೆ, ಪ್ರತಿಷ್ಠಿತರು, ಶ್ರೀಮಂತರು ಮತ್ತು ಜನಸಾಮಾನ್ಯರು ಇವರ ಆಳ್ವಿಕೆಯನ್ನು ಬಹುಬೇಗ ಒಪ್ಪಿಕೊಂಡರು.

ಹೀಗೆ ಅರಸನಾದ ದೇವರಾಯ ಒಮ್ಮೆ ಬೇಟೆಗೆಂದು ಹಂಪಿ ಪ್ರದೇಶಕ್ಕೆ ಬಂದಿದ್ದನು. ಅಲ್ಲಿ ವಿಚಿತ್ರವಾದ ರೀತಿಯಲ್ಲಿ ಮೊಲವು ಅರಸನ ಬೇಟೆನಾಯಿಗಳನ್ನು ಅಟ್ಟಿಸಿಕೊಂಡು ಹೋಗುವುದನ್ನು ನೋಡಿದ. ಈ ದೃಶ್ಯವು ಅರಸನನ್ನು ಚಕಿತಗೊಳಿಸಿತು. ಈ ಘಟನೆಯನ್ನು ಯೋಚಿಸುತ್ತಾ ಹಿಂತಿರುಗುತ್ತಿದ್ದಾಗ ಮಾಧವಾಚಾರ್ಯ ಎಂಬ ಮುನಿಗಳನ್ನು ಕಂಡನು.

ಅಲ್ಲಿ ತನ್ನ ಪೂರ್ವಪರ ವಿಚಾರಗಳನ್ನು ತಿಳಿಸಿ ತಾನು ಕಂಡ ದೃಶ್ಯವನ್ನು ಅವರಿಗೆ ವಿವರಿಸಿದನು. ಆಗ ಮುನಿಗಳು ಆ ಪ್ರದೇಶದಲ್ಲಿ ಕೋಟೆ ಮತ್ತು ಅರಮನೆಗಳನ್ನು ನಿರ್ಮಿಸಲು ಸೂಚಿಸಿ ಮುಂದಿನ ರಾಜ್ಯದ ಬಗೆಗೆ ಭವಿಷ್ಯ ನುಡಿದರು. ನಂತರ ದೇವರಾಯ ಆ ಪ್ರದೇಶದಲ್ಲಿಯೇ ನಗರವನ್ನು ನಿರ್ಮಿಸಿ ಅದಕ್ಕೆ 'ವಿದ್ಯಾಜಾನು' ಎಂದು ಕರೆದನು. ಅಲ್ಲಿ ದೇವರಾಯ ೭ ವರ್ಷಗಳ ಕಾಲ ಆಳ್ವಿಕೆ ನಡೆಸಿದನು. ಈತನ ನಂತರ ಬುಕ್ಕರಾಯ ಅಧಿಕಾರಕ್ಕೆ ಬಂದನೆಂದು ವಿವರಿಸಿದ್ದಾರೆ.[೧೮]

ಕನ್ನಡ ನಾಡಿನ ಇತಿಹಾಸಕಾರರಾದ ಸೂರ್ಯನಾಥ ಕಾಮತರು ತಮ್ಮ 'ವಿಜಯನಗರ ಸಾಮ್ರಾಜ್ಯ' ಕೃತಿಯಲ್ಲಿ ಸ್ಥಾಪನೆಯ ಕುರಿತು ಈ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ಹರಿಹರ ಮತ್ತು ಅವರ ಸಹೋದರರು ಹೊಯ್ಸಳರ ಸೇನಾನಿಗಳಾಗಿದ್ದರು. ದೆಹಲಿ ಸುಲ್ತಾನರ ದಾಳಿಯಿಂದಾಗಿ ದ್ವಾರ ಸಮುದ್ರದ ಹೊಯ್ಸಳ ಸಾಮ್ರಾಜ್ಯವು ಅವನತಿಯತ್ತ ಸಾಗಿತು. ಇದರ ಲಾಭ ಪಡೆದು ಈ ಸಹೋದರರು ವಿಜಯನಗರ ಸಾಮ್ರಾಜ್ಯ ನಿರ್ಮಿಸಿದರೆಂದು ಅಭಿಪ್ರಾಯಪಟ್ಟಿದ್ದಾರೆ.[೧೯]

ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆಯನ್ನು ಕುರಿತು ಅಧ್ಯಯನ ಮಾಡಿದ ಹಾಗೂ ಸಂಶೋಧಕರಾದ ಸಿ.ಟಿ.ಎಂ.ಕೊಟ್ರಯ್ಯ ಇವರು ಸ್ಥಾಪನೆಯನ್ನು ಕುರಿತು ಈ ತೆರನಾಗಿ ಅಭಿಪ್ರಾಯ ಪಟ್ಟಿದ್ದಾರೆ. ಕ್ರಿ.ಶ.೧೩೧೦ ಹಾಗೂ ೧೩೨೩ರಲ್ಲಿ ನಡೆದ ದಾಳಿಗಳು ಇಡೀ ದಕ್ಷಿಣ ಭಾರತದ ರಾಜ್ಯಗಳಿಗೆ ಅಘಾತವನ್ನು ನೀಡಿದವು. ಈ ದಾಳಿಗಳು ರಾಜ್ಯದ ವಿಸ್ತರಣೆಗೆ ಮಾತ್ರ ಸೀಮಿತವಾಗಿರಲಿಲ್ಲ. ಬದಲಿಗೆ ಒಂದು ಹೊಸ ರಾಜ್ಯದ ಉಗಮಕ್ಕೆ ಕಾರಣವಾದವು. ಇವರ ಪ್ರಕಾರ ಸಂಗಮ ವಂಶಜರು ಯಾವುದೇ ರಾಜವಂಶಕ್ಕೆ ಸೇರಿರದೇ ಸಾಮಾನ್ಯ ಜನತೆಯಂತಿದ್ದರು. ಉತ್ತರದ ವಿದೇಶಿಯರ ದಾಳಿಯನ್ನು ತಡೆಯುವ ಸಲುವಾಗಿ ಸಂಗಮನ ಹಿರಿಯ ಪುತ್ರ ಹರಿಹರನು ಬಂಡೆದ್ದು ಸ್ವತಂತ್ರ ಸಾರಿದನು. ಹಂಪೆಯಲ್ಲಿ ಆದಿಶಂಕರರಿಂದ ವಿದ್ಯಾರಣ್ಯ ಮುನಿಗಳವರೆಗೆ ಶೈವರ ಪ್ರಾಬಲ್ಯವಿತ್ತು. ವಿದ್ಯಾರಣ್ಯರು ಇದಕ್ಕೆ ಪ್ರೋತ್ಸಾಹ ನೀಡಿದರು ಹಾಗೂ ರಾಜಧಾನಿ ನಿರ್ಮಿಸಲು ಮುಂದಾದರು.[೨೦]

ರಾಘುವೇಂದ್ರರಾವ್ ವಿ. ತಮ್ಮ 'ವಿಜಯನಗರ' ಕೃತಿಯಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಗೊಂದಲ ಕುರಿತು ಈ ರೀತಿ ವಿಶ್ಲೇಷಿಸಿದ್ದಾರೆ. ದೆಹಲಿ ಸುಲ್ತಾನರು ದಕ್ಷಿಣದ ಮೇಲೆ ದಂಡೆತ್ತಿ ಬಂದು ವಾರಂಗಲ್, ದೇವಗಿರಿ, ದ್ವಾರಸಮುದ್ರ ಇವುಗಳನ್ನು ಅವನತಿಯತ್ತ ಸಾಗುವಂತೆ ಮಾಡಿದರು. ಈ ಎಲ್ಲಾ ಅರಸು ಮನೆತನಗಳ ಅರಸರು ಒಟ್ಟಿಗೆ ಸೇರಿ ಸುಲ್ತಾನರ ದಕ್ಷಿಣದ ದಂಡೆಯಾತ್ರೆಗೆ ತಡೆಯೊಡ್ಡುವ ನಿರ್ಧಾರಕ್ಕೆ ಬರಲಾಯಿತು. ದಕ್ಷಿಣದ ಎಲ್ಲಾ ರಾಜ್ಯಗಳು ಒಂದೆಡೆ ಸೇರುವುದು ಹಾಗೂ ಅದರ ನಾಯಕತ್ವವನ್ನು ಮುಮ್ಮಡಿ ವೀರಬಲ್ಲಾಳನಿಗೆ ವಹಿಸಲಾಯಿತು. ಇದಕ್ಕೆ ಬಲ್ಲಾಳನ ಮಹಾ ಮಂಡಳೇಶ್ವರರು ಹಾಗೂ ಕಂಪಿಲಿಯ ರಾಜಮನೆತನದವರೂ ಆದ ಸಂಗಮ ಪುತ್ರರು ಕಂಕಣಬದ್ಧರಾಗಿ ನಿಂತರು. ಇದಕ್ಕಾಗಿ ಇವರು ಆಗ ತಾನೇ ಸ್ಥಾಪಿತವಾದ ಹೊಸ ಪಟ್ಟಣ ಅಥವಾ ವೀರವಿರೂಪಾಕ್ಷಪುರ

ಎಂಬ ಆಯಕಟ್ಟಿನ ಪ್ರದೇಶವನ್ನು ಆಯ್ದುಕೊಂಡರು. ವಿದ್ಯಾರಣ್ಯ ಮುನಿಗಳ ಪ್ರೇರಣೆಯಿಂದ ಅದಕ್ಕೆ ವಿದ್ಯಾನಗರ ಎಂದು ನಾಮಕರಣ ಮಾಡಲಾಯಿತು. ಇದರ ರಕ್ಷಣೆಯ ಹೊಣೆಯನ್ನು ಹರಿಹರನು ವಹಿಸಿಕೊಂಡನು. ಇದೇ ಮುಂದೆ ವಿಜಯನಗರ ಸಾಮ್ರಾಜ್ಯವಾಯಿತು.[೨೧]

ಮೇಲಿನ ಎಲ್ಲಾ ವಾದಗಳನ್ನು ಗಮನಿಸಿದಾಗ ಪ್ರಮುಖವಾಗಿ ಗೋಚರಿಸುವ ವಿಷಯಗಳೆಂದರೆ ವಿಜಯನಗರ ಸಾಮ್ರಾಜ್ಯದ ಸ್ಥಾಪಕರು ವಾರಂಗಲ್ಲಿನಿಂದ ಬಂದವರು, ಹೊಯ್ಸಳರ ಮಾಂಡಲೀಕರಾಗಿದ್ದರು ಎಂಬ ಸಂಗತಿಗಳೇ ಮುಖ್ಯವಾದವು. ಇವರ ವಾದಗಳಿಗೆ ವಿಪುಲವಾದ ಮಾಹಿತಿಯನ್ನು ನೀಡಿದ್ದಾರೆ. ವಾರಂಗಲ್ಲಿನ ಮೂಲವನ್ನು ವೆಂಕಟರಮಣಯ್ಯನವರು ಎತ್ತಿಹಿಡಿದಿರುವರು. ಇವರು ಸಂಗಮ ಪುತ್ರರು ವಾರಂಗಲ್ಲಿನ ಪ್ರತಾಪರುದ್ರನ ಬಳಿ ಸೇವೆಯಲ್ಲಿದ್ದವರೆಂದು, ಆ ಸಾಮ್ರಾಜ್ಯ ಪತನಾನಂತರ ಆನೆಗೊಂದಿಗೆ ಬಂದು ಸಾಮ್ರಾಜ್ಯ ಸ್ಥಾಪಿಸಿದರೆಂಬ ಉಲ್ಲೇಖವನ್ನು ನೋಡಬಹುದು. ಆದರೆ ಸಮಕಾಲೀನ ಯಾವ ಶಾಸನದಲ್ಲಿ, ಸಾಹಿತ್ಯಿಕ ಕೃತಿಯಲ್ಲಿ ಆಧಾರವಿಲ್ಲದಿರುವುದನ್ನು ವಸುಂಧರಾ ಫಿಲಿಯೋಜಾರು ತಮ್ಮ "ವಿಜಯನಗರ ಸಾಮ್ರಾಜ್ಯ ಸ್ಥಾಪನೆ" ಕೃತಿಯಲ್ಲಿ ವ್ಯಕ್ತಪಡಿಸಿ, ಅವರ ದಾಖಲೆಗಳು ನಂಬಲಾರ್ಹವಲ್ಲ ಎಂದಿದ್ದಾರೆ.

ಸೂರ್ಯನಾಥ ಕಾಮತ್‌ರು ತಮ್ಮ 'ಕರ್ನಾಟಕ ಸ್ಟೇಟ್ ಗೆಜೆಟಿಯರ್ ಭಾಗ-I'ರಲ್ಲಿ ಹರಿಹರ-ಬುಕ್ಕರು ಮುಮ್ಮಡಿ ಬಲ್ಲಾಳನ ಸಾಮಂತರಾಗಿದ್ದು, ಕಂಪಿಲಿಯು ಹೊಯ್ಸಳ ಸಾಮ್ರಾಜ್ಯದ ಒಂದು ಭಾಗವಾಗಿತ್ತು ಮತ್ತು ಈ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದರೆಂದು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ ಹರಿಹರನ ಮಗಳನ್ನು ಸೋಮೆಯ ದಂಡನಾಯಕನ ಮಗನಾದ ಬಲ್ಲಪ್ಪ ದಂಡನಾಯಕನು ಮದುವೆಯಾಗಿದ್ದನು. ಮುಮ್ಮಡಿ ಬಲ್ಲಾಳನಿಗೆ ಬಲ್ಲಪ್ಪ ದಂಡನಾಯಕ ಸಂಬಂಧಿಯಾಗಿದ್ದನು ಎಂದು ತಮ್ಮ ವಾದಗಳಿಗೆ ಆಧಾರಗಳನ್ನು ನೀಡುತ್ತಾರೆ.

ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾದ್ದದೇ ಮುಸ್ಲಿಮರ ದಾಳಿಯನ್ನು ತಡೆಗಟ್ಟಲು ಮತ್ತು ಮುಸ್ಲಿಮರಿಂದ ಯಾವುದೇ ತೊಂದರೆಯಾಗದಂತೆ ಹಿಂದೂಗಳನ್ನು ಕಾಪಾಡುವ ಸಲುವಾಗಿಯೇ ಈ ಸಾಮ್ರಾಜ್ಯ ಹುಟ್ಟಿಕೊಂಡಿತು ಎಂಬ ಅಭಿಪ್ರಾಯವಿದೆ. ಹಿಂದೂ ಧರ್ಮದ ಪುನರುತ್ಥಾನಗೊಳಿಸುವ ಸಲುವಾಗಿ ಈ ಸಾಮ್ರಾಜ್ಯವು ಉದಯವಾಯಿತು ಎನ್ನುವ ಅನೇಕ ವಾದಗಳಿವೆ(ಮಾತು). ಆದರೆ ಇದಕ್ಕೆ ವ್ಯತಿರಿಕ್ತವಾದ ಹಲವು ಹೇಳಿಕೆಗಳನ್ನು ನಾವು ಉದ್ಧರಿಸಬಹುದು.

ಕೆ.ಎನ್.ಚಿಟ್ನಿಸ್ ತಮ್ಮ 'ಮಿಡಿವಲ್ ಇಂಡಿಯನ್ ಹಿಸ್ಟರಿ' ಕೃತಿಯಲ್ಲಿ ವಿಜಯನಗರ ಸಾಮ್ರಾಜ್ಯದ ಉಗಮದ ಬಗ್ಗೆ, ಅದರ ಬಗ್ಗೆ ಇರುವ ವಿವಾದಗಳತ್ತ ಕಣ್ಣು ಹಾಯಿಸಿರುವರು. ಖಿಲ್ಜಿ, ಕಾಫರ್, ತೊಘಲಕರು ದಕ್ಷಿಣ ಭಾರತದ ದಾಳಿಗಳ ಪ್ರಭಾವವನ್ನು ವಿಚಾರ ಮಾಡಿ ಹೀಗೆ ಬರೆಯುತ್ತಾರೆ. ಈ

ಸಂಧಿಕಾಲದಲ್ಲಿ ಹಿಂದೂ ಧರ್ಮ, ಸಮಾಜ, ಸಂಸ್ಕೃತಿಗಳಿಗೆ ದಕ್ಷಿಣದಲ್ಲಿ ಆಪತ್ತು ಒದಗಿದಾಗ ವಿಜಯನಗರ ಸಾಮ್ರಾಜ್ಯವು ತಲೆಯೆತ್ತಿತ್ತು. ಹಿಂದೂ ಧರ್ಮದ ರಕ್ಷಕ ತಡೆಗೋಡೆಯಾಗಿ ನಿಂತಿತು. ಆದರೆ ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾದ ಮೇಲೆ ಕೇವಲ ಹಿಂದೂ ಧರ್ಮವನ್ನೇ ಪೋಷಿಸಲಿಲ್ಲ ಬದಲಿಗೆ ಜೈನರು, ಕ್ರೈಸ್ತರು, ಮುಸ್ಲಿಂ ಸಮುದಾಯಗಳನ್ನು ಪೋಷಿಸಿತ್ತು. ದೆಹಲಿ ಸುಲ್ತಾನರ ದಾಳಿಗಳು ವಿಸ್ತರಿಸಿದಕ್ಕೆ ಪ್ರೇರಣೆ ರಾಜಕೀಯ, ಆರ್ಥಿಕ ಕಾರಣಗಳೇ ಹೊರತು ಧರ್ಮವಲ್ಲ ಎಂಬುದು ಸ್ಪಷ್ಟವಾಗುತ್ತದೆ.

## ೩.೨. ಮೂಲದ ಕುರಿತ ವಿಶ್ಲೇಷಣೆ

೧೯೩೬ರಲ್ಲಿ ಹಂಪೆಯಲ್ಲಿ ವಿಜಯನಗರ ಸಾಮ್ರಾಜ್ಯ ಸಂಸ್ಥಾಪನೆಯ ೬೦೦ನೇ ವರ್ಷಾಚರಣೆಯ ಮಹೋತ್ಸವ ನಡೆಯಿತು. ಇದರ ಅಂಗವಾಗಿ ನಡೆದ ಪ್ರಬಂಧ ಮಂಡನೆಯಲ್ಲಿ ನಾಡಿನ ಪ್ರಮುಖ ವಿದ್ವಾಂಸರು ಭಾಗವಹಿಸಿದ್ದರು. ಇವರ ಪ್ರಬಂಧಗಳಲ್ಲಿ ತೆಲುಗು ಕನ್ನಡ, ಕುರುಬ ಮೂಲಗಳು ತಲೆಯೆತ್ತಿದ್ದವು. ಕನ್ನಡ ಅಥವಾ ಹೊಯ್ಸಳರ ಮೂಲವನ್ನು ನೋಡುವಾಗ ವಿಜಯನಗರದ ಆರಂಭದ ಅರಸರು ಹೊಯ್ಸಳರ ಸಾಮಂತರೆಂದು, ಕಂಪಿಲಿಯ ಅರಸರು ಮಹಾಮಂಡಳೇಶ್ವರರೆಂದು, ಹೊಯ್ಸಳರ ಮಾಂಡಲೀಕರಾಗಿದ್ದರೆಂದು ವಾದಿಸುವರು. ಅಂತೆಯೇ ತೆಲುಗು ಮೂಲವನ್ನು ಕೆದಕುವಾಗ ವಿಜಯನಗರದ ಆರಂಭದ ಅರಸರು ವಾರಂಗಲ್ಲಿನ ಕಾಕತೀಯ ಪ್ರತಾಪರುದ್ರದೇವ ಅರಸರ ಬಳಿ ಸೇವೆ ಸಲ್ಲಿಸುತ್ತಿದ್ದರು. ದೆಹಲಿ ಸುಲ್ತಾನರ ದಾಳಿಯಿಂದಾಗಿ ವಾರಂಗಲ್ಲಿನಿಂದ ಇವರು ಕಂಪಿಲಿಯ ಅರಸರ ಬಳಿ ಸೇವೆಗೆ ಸೇರಿ ಸೇವೆ ಸಲ್ಲಿಸುತ್ತಿದ್ದರು. ಕಾಲಾಂತರದಲ್ಲಿ ಇವರೇ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕಾರಣರಾದರೆಂದು ವಾದಿಸುವರು. ಕನ್ನಡ ಮೂಲದಲ್ಲಿ ಕುರುಬ, ಯಾದವ, ಬೇಡ ಜಾತಿಗೆ ಸೇರಿದವರೆಂಬ ವಾದಗಳು ಇಂದು ಮೈತಳೆದಿವೆ.

### ತೆಲುಗು ಮೂಲ

ಇದು ಇಂದಿಗೂ ಚರ್ಚಾಸ್ಪದ ವಿಷಯವಾಗಿದೆ. ಇದನ್ನು ಮೊದಲಿಗೆ ಸಿವೆಲ್‌ರ ಆದಿಯಾಗಿ ಬಿ.ಸೂರ್ಯನಾರಾಯಣ ರಾವ್, ಎನ್.ವೆಂಕಟರಮಣಯ್ಯ, ನೀಲಕಂಠಶಾಸ್ತ್ರಿ ಪ್ರಾರಂಭಿಸಿ, ಪ್ರೋತ್ಸಾಹಿಸಿದರು. ಎನ್.ವೆಂಕಟರಮಣಯ್ಯ ತಮ್ಮ 'ವಿಜಯನಗರ ಹೊರಿಜನ್ ಆಫ್ ದಿ ಸಿಟಿ ಆ್ಯಂಡ್ ಎಂಪೈರ್' ಕೃತಿಯಲ್ಲಿ ವಿಜಯನಗರದ ಸಂಗಮ ಅರಸರು ಯಾವ ಮೂಲದವರು, ವಿಜಯನಗರದ ರಾಜಧಾನಿ ಯಾವಾಗ ನಿರ್ಮಾಣವಾಯಿತು ಎಂಬುದನ್ನು ವಿವರಿಸಿದ್ದಾರೆ. ವಾರಂಗಲ್ಲಿನ ಕಾಕತೀಯ ವಂಶದ ಅರಸ ಪ್ರತಾಪರುದ್ರದೇವ ಈ ಅರಸನ ಬಳಿಯಲ್ಲಿ ಹರಿಹರ ಬುಕ್ಕರು ಸೇವೆ ಸಲ್ಲಿಸುತ್ತಿದ್ದರು. ವಾರಂಗಲ್ ದೆಹಲಿ ಸುಲ್ತಾನರ ವಶವಾದ ನಂತರ ಹಂಪೆಯ ಪ್ರದೇಶದಲ್ಲಿ ನೆಲೆಸಿದ ಇವರು ಕಂಪಿಲಿಯ ರಾಮನಾಥನ

ಆಸ್ಥಾನದ ಸೇವೆಯಲ್ಲಿ ನಿರತರಾದರು. ಮುಂದೆ ಕಂಪಿಲಿಯೂ ದಿಲ್ಲಿ ಸುಲ್ತಾನರ ವಶವಾಯಿತು. ಹರಿಹರ ಬುಕ್ಕರನ್ನು ದಿಲ್ಲಿಗೆ ಕರೆದೊಯ್ದರು. ಅಲ್ಲಿ ಸ್ವಾಮಿ ನಿಷ್ಠೆ ತೋರಿದ್ದರಿಂದ ತೃಪ್ತಿಗೊಂಡ ಸುಲ್ತಾನ ಅರಾಜಕತೆಗೆ ಒಳಗಾಗಿದ್ದ ಕರ್ಣಾಟ ದೇಶವನ್ನು ಆಳ್ವಿಕೆ ಮಾಡಲು ಪ್ರಾಂತ್ಯಾಧಿಕಾರಿಗಳಾಗಿ ಇವರನ್ನು ಕಂಪಿಲಿಗೆ ಕಳುಹಿಸಲಾಯಿತು. ಕಂಪಿಲಿಯಲ್ಲಿರುವಾಗ ವಿದ್ಯಾರಣ್ಯರ ದರ್ಶನ ಪಡೆದು ಇವರ ಹರಕೆಯಿಂದಾಗಿ ಸುಲ್ತಾನರ ಅಧಿಪತ್ಯ ಕಿತ್ತೊಗೆದು ಆ ಭಾಗದಲ್ಲಿ ತಮ್ಮ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದರು. ಅದು ಮುಂದೆ ವಿಜಯನಗರ ಸಾಮ್ರಾಜ್ಯ[೨೨] ಎಂದು ಹೆಸರಾಯಿತು.

ಇವರು ಈ ವಾದಕ್ಕೆ ಬಳಸಿಕೊಂಡಿರುವ ಆಕರಗಳೆಂದರೆ ೧ ಕಾವ್ಯಗಳು ೨ ಮುಸ್ಲಿಂರ ಲೇಖನಗಳು ೩ ಕೈಫಿಯತ್ತು ಹಾಗೂ ಸ್ಥಳೀಯ ವೃತ್ತಾಂತಗಳು ಪ್ರಮುಖವಾಗಿವೆ. ಕಾವ್ಯದ ಆಧಾರಗಳನ್ನು ನೀಡುವಾಗ ಕುಮಾರ ರಾಮನ ಸಾಂಗತ್ಯ, ಕುಮಾರ ರಾಮನ ಕತೆಗಳನ್ನು ವಿವರಿಸುವರು ಇವು ರಚನೆಯಾದ ಕಾಲ ೧೬ನೇ ಶತಮಾನ. ವಿದ್ಯಾರಣ್ಯ ವೃತ್ತಾಂತ ಹಾಗೂ ಕಾಲಜ್ಞಾನ ಇವು ಸಂಸ್ಕೃತ ಗ್ರಂಥಗಳಾಗಿವೆ. ಇವುಗಳನ್ನು ೧೮ನೇ ಶತಮಾನದಲ್ಲಿ ರಚಿಸಲಾಗಿದೆ. ಅಲ್ಲದೆ ಇವು ಸಮಕಾಲೀನ ಮಾಹಿತಿಯನ್ನು ನೀಡುವಲ್ಲಿ ವಿಫಲವಾಗಿವೆ. ಮುಸ್ಲಿಮ್ ಇತಿಹಾಸಕಾರರು ತಮ್ಮ ಸುಲ್ತಾನರ ವೈಭವವನ್ನು ಕಟ್ಟಿಕೊಡುವ ನೆಪದಲ್ಲಿ ವಿರೋಧಿಗಳನ್ನು ಹೀಗೆಳೆದು ಬರೆದಿದ್ದಾರೆ. ಫೆರಿಸ್ತಾನಲ್ಲಿ ಈ ಭಾವ ಎದ್ದು ಕಾಣುತ್ತದೆ. ಕೈಫಿಯತ್ತುಗಳು ಹಾಗೂ ಸ್ಥಳೀಯ ವೃತ್ತಾಂತಗಳ ಪಾಡು ಸಹ ಇದೇ ಆಗಿದೆ. ಆದರೆ ಇವರು ಒದಗಿಸುವ ಆಧಾರಗಳು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾದ ನಂತರ ರಚನೆಗೊಂಡಂತಹವು ಹಾಗೂ ಇತಿಹಾಸ ರಚನೆಗೆ ನಂಬಲಾರ್ಹವಾದವುಗಳಲ್ಲ.[೨೩]

## ಕನ್ನಡ ಮೂಲ

ತೆಲುಗು ಮೂಲಕ್ಕೆ ವಿರುದ್ಧವಾಗಿ ಕನ್ನಡ ನಾಡಿನ ಪ್ರಖ್ಯಾತ ವಿದ್ವಾಂಸರು, ಸಂಶೋಧಕರು ತಮ್ಮ ಸಂಶೋಧನೆಯ ಮೂಲಕ ಕಂಡುಕೊಂಡ ಫಲಿತಗಳಿಂದ ಕನ್ನಡ ಮೂಲವನ್ನು ಪ್ರತಿಪಾದಿಸಿರುವರು. ಇವರು ಸಮಕಾಲೀನ ಆಧಾರಗಳನ್ನು ಬಳಸಿಕೊಂಡು ವಿಪುಲ ಮಾಹಿತಿ ಸಂಗ್ರಹಿಸಿ ತಮ್ಮ ವಾದಗಳಿಗೆ ಸಾಕ್ಷಿಗಳನ್ನು ಒದಗಿಸಿದ್ದಾರೆ.

ಕನ್ನಡ ವಾದವನ್ನು ಪ್ರಬಲವಾಗಿ ಪ್ರತಿಪಾದಿಸುವರಲ್ಲಿ ಪಿ.ಬಿ.ದೇಸಾಯಿ, ಬಿ.ಎ.ಸಾಲೆತ್ತೊರೆ ಆಲೂರ ವೆಂಕಟರಾಯರು, ಫಾದರ್ ಹೆರಾಸ್, ಎಸ್.ಕೆ.ಅಯ್ಯಂಗಾರ್, ಎಸ್.ಶ್ರೀಕಂಠಯ್ಯ ಪ್ರಮುಖರು. ಹೊಯ್ಸಳ ಮುಮ್ಮಡಿ ಬಲ್ಲಾಳನ ಸಹೋದರಳಿಯನಾದ ಬಲ್ಲಪ್ಪ ದಂಡನಾಯಕನು ವಿಜಯನಗರ ಸಾಮ್ರಾಜ್ಯದ ಸ್ಥಾಪಕ ಹರಿಹರನ ಮಗಳನ್ನು ವರಿಸಿದ್ದನು. ಇದರಿಂದ ಸಂಗಮ ವಂಶಸ್ಥರು ಹೊಯ್ಸಳರ ಆಸ್ಥಾನದ ಜೊತೆಗೆ ಸಂಬಂಧವನ್ನು ಹೊಂದಿದ್ದರೆಂಬುದು ಸ್ಪಷ್ಟವಾಗುತ್ತದೆ. ಇದನ್ನು ಫಾದರ್ ಹೆರಾಸ್

ತೋರಿಸಿಕೊಟ್ಟಿದ್ದಾರೆ. ಅಲ್ಲದೆ ಹರಿಹರನ ಅಳಿಯ ಬಲ್ಲಪ್ಪದಂಡನಾಯಕನು ಶೃಂಗೇರಿ ಉತ್ಸವದಲ್ಲಿ ಭಾಗವಹಿಸಿದ್ದನೆಂದು ಎಸ್.ಶ್ರೀಕಂಠಯ್ಯನವರು ಉಲ್ಲೇಖಿಸಿದ್ದಾರೆ.[೨೪]

ಸಾಲೆತ್ತೊರೆಯವರು ತೆಲುಗು ಕವಿಗಳಾದ ವಲ್ಲಭಚಾರ್ಯ ಮತ್ತು ಶ್ರೀನಾಥರು ಸಂಗಮ ಅರಸರನ್ನು 'ಕರ್ನಾಟಕ ಕ್ಷಿತಿನಾಥ' ಎಂದು ಕರೆದಿರುವ ವಿಚಾರವನ್ನು ಉಲ್ಲೇಖಿಸಿದ್ದಾರೆ. ಮುಂದುವರಿದು ಇಮ್ಮಡಿ ಹರಿಹರನನ್ನು ಒಂದು ಶಾಸನದಲ್ಲಿ 'ಆಂಧ್ರರಾಜ ಮದಗಜಗಳಿಗೆ ಸಿಂಹಪ್ರಾಯ'ನೆಂದು ಕರೆದಿದೆ. ಇದು ಸಂಗಮ ವಂಶಸ್ಥರ ತೆಲುಗು ವಿರೋಧಿ ನೀತಿಯನ್ನು ಪ್ರತಿಬಿಂಬಿಸಿವುದು. ಅಲ್ಲದೆ ಇವರು ತಮ್ಮ ಹೆಸರಿನಲ್ಲಿ ಬಳಸುವ ರಾಯ[೨೫] ಎಂಬ ಪದಗಳು ಅಚ್ಚ ಕನ್ನಡವಾಗಿವೆ. ಇದು ವಿಜಯನಗರ ಅರಸರ ಕನ್ನಡ ಪ್ರೀತಿಯನ್ನು ತೋರಿಸುತ್ತದೆ.

ಸೂರ್ಯನಾಥ ಕಾಮತ್‌ರು ತಮ್ಮ 'ವಿಜಯನಗರ ಸಾಮ್ರಾಜ್ಯ' ಕೃತಿಯಲ್ಲಿ ಕನ್ನಡ ಮೂಲವನ್ನು ಎತ್ತಿ ಹಿಡಿದಿರುವರು. ವಿಜಯನಗರದ ಅರಸರು "ಶ್ರೀವಿರೂಪಾಕ್ಷ" ಎಂಬುದಾಗಿ ತಮ್ಮ ಸಂಸ್ಕೃತ ಶಾಸನಗಳಲ್ಲಿ ಕನ್ನಡ ಲಿಪಿಯಲ್ಲಿ ಸಹಿ ಹಾಕಿದ್ದಾರೆ. ಕೃಷ್ಣದೇವರಾಯನು ತನ್ನ ಆಮುಕ್ತ ಮೌಲ್ಯದ ತೆಲುಗು ಕೃತಿಯಲ್ಲಿ ತನ್ನನ್ನು 'ಕನ್ನಡದ ರಾಯ' ಎಂದು ಕರೆದುಕೊಂಡಿದ್ದಾನೆ. ಅಲ್ಲಾಸಾನಿ ಪೆದ್ದನ್ನನು ತನ್ನ 'ಮನುಚರಿತಂ' ಕೃತಿಯಲ್ಲಿ ಕೃಷ್ಣದೇವರಾಯನನ್ನು 'ಕನ್ನಡ ರಾಜ್ಯರಮಾರಮಣ' ಎಂದು ಕರೆದಿದ್ದಾನೆ.[೨೬]

ಜಾನಪದ ಹಾಗೂ ಮೌಖಿಕ ಆಕರಗಳಲ್ಲಿ ಪ್ರಚಲಿತವಿರುವ ಮಹತ್ತ್ವದ ಸಂಗತಿ ಎಂದರೆ ಕಂಪಿಲದ ರಾಜ ಕಂಪಿಲರಾಯನ ಮಗ ಕುಮಾರರಾಮನ ವೀರಪ್ರತಾಪಗಳನ್ನು ಕುರಿತ ಲಾವಣಿಗಳು, ಸಾಂಗತ್ಯಗಳು ಕನ್ನಡ ಭಾಷೆಯಲ್ಲಿ ಲಭ್ಯವಿವೆ. ದೆಹಲಿಯ ಸುಲ್ತಾನರ ವಿರುದ್ಧ ಹೋರಾಡಿದ ನಾಯಕನು ಕನ್ನಡಿಗನಾಗಿದ್ದನೆಂದು ಹಾಗೂ ರಾಮನ ಅವತಾರವೆಂದು ಹೊಗಳುವರು. ನೈಜವಾಗಿ ಕುಮಾರರಾಮನು ವೀರನು, ಧೀರನೂ, ಪರಾಕ್ರಮಿಯೂ ಆಗಿದ್ದನೆಂದು ತಿಳಿಯಬಹುದು. ದೆಹಲಿ ಸುಲ್ತಾನರ ವಿರುದ್ಧ ಹೋರಾಡುವಾಗ ಮಡಿದನು. ನಂತರ ಈ ಪ್ರದೇಶವನ್ನು ಸಂಗಮ ಪುತ್ರರು ಆಳ್ವಿಕೆ ನಡೆಸಿದರೆಂದು ಇವರು ಕುರುಬರು ಹಾಗೂ ಕನ್ನಡಿಗರಾಗಿದ್ದರೆಂದು ನಂಬಲಾರ್ಹವಾದುದಾಗಿದೆ.

ಆಂಧ್ರಪ್ರದೇಶದ ಇತಿಹಾಸಕಾರ ಕೆ. ಸತ್ಯನಾರಾಯಣ್ ಅವರು ವಿಜಯನಗರದ ಸ್ಥಾಪಕರು ಕರ್ನಾಟಕದವರು, ಅನೇಕ ದಾನ ಶಾಸನಗಳು ಅವರನ್ನು 'ಕರ್ನಾಟಕದ ಅರಸ'ರೆಂದು ಮತ್ತು ಅವರ ಅಧೀನ ಸಾಮಂತ ರಾಜರನ್ನು ಕರ್ನಾಟಕದ ಪ್ರಭುಗಳೆಂದು ಹೇಳುತ್ತವೆ. ವಿಜಯನಗರದ ಅರಸರು ಶಾಸನಗಳ ಕೊನೆಯಲ್ಲಿ ವಿರೂಪಾಕ್ಷನ ಹೆಸರಿನಲ್ಲಿ ಕನ್ನಡ ಲಿಪಿಯಲ್ಲಿ ಸಹಿ ಹಾಕಿರುವುದು ಸ್ಪಷ್ಟವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.[೨೭]

## ಕುರುಬ ಮೂಲ

ಕುರುಬ ಮೂಲ ಇಂದಿಗೂ ವಾದ-ವಿವಾದಗಳಿಂದ ಕೂಡಿದೆ. ಸಂಗಮ ವಂಶಸ್ಥರು ಯಾದವರೆಂದು, ಬೇಡ ಬುಡಕಟ್ಟಿನವರು ಎಂದೂ ಕರೆಯಲಾಗುತ್ತಿದೆ. ಇವುಗಳ ಕುರಿತು ಹಲವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಸಂಗಮ ವಂಶಸ್ಥರು ಕುರುಬ ಜನಾಂಗಕ್ಕೆ ಸೇರಿದವರೆಂದು ರಾಬರ್ಟ್ ಸಿವೆಲ್‌ರು ಹೇಳಿದ್ದಾರೆ.[೩೮]

೧೮ನೇ ಶತಮಾನದಲ್ಲಿ ರಚಿತವಾದ ಕೆಳದಿ ನೃಪವಿಜಯ ಕಾವ್ಯದಲ್ಲಿ ಹಕ್ಕ-ಬುಕ್ಕರು ಕುರುಬ ಕನ್ಯೆಯರನ್ನು ಮದುವೆಯಾಗಿದ್ದರು ಎಂಬ ಉಲ್ಲೇಖ ಬರುತ್ತದೆ. ಅಂತೆಯೇ ವಿದ್ಯಾರಣ್ಯದ ಕಾಲಜ್ಞಾನದಲ್ಲಿ ಹಕ್ಕ-ಬುಕ್ಕರಿಗೆ ಕುರುಬರ ಕುಲಗುರು ರೇವಣಸಿದ್ಧರ ದರ್ಶನವಾಯಿತೆಂಬ ಉಲ್ಲೇಖವಿದೆ. ಕುರುಬ ಮೂಲವು ಇಂದಿಗೂ ಚರ್ಚಿತವಾಗುತ್ತಿರುವ ವಿಷಯವಾಗಿದೆ.[೩೯]

## ಯಾದವ/ಗೊಲ್ಲ ಮೂಲ

ವಿಜಯನಗರ ಸಾಮ್ರಾಜ್ಯದ ಸ್ಥಾಪಕ ಅರಸರು ಯಾದವರು ಎಂಬ ಅಭಿಪ್ರಾಯವುಂಟು. 'ಕೈಫಿಯತ್ತು ಕಂಡ ಮೈಸೂರು ರಾಜಕೀಯ ಚರಿತ್ರೆ'ಯಲ್ಲಿ ಇವರ ಉಲ್ಲೇಖ ಕಾಣಬಹುದು. ಕಮಲಾಪುರದ ಕೈಫಿಯತ್ತು ತಾಲೂಕು ಕಂಪಲಿ ಕೈಫಿಯತ್ತುಗಳಲ್ಲಿ ಸಂಗಮ ವಂಶಸ್ಥರು ಯಾದವ ಮನೆತನಕ್ಕೆ ಸೇರಿದರೆಂಬುದನ್ನು ಸ್ಪಷ್ಟಪಡಿಸುತ್ತದೆ.[೪೦] ಇದಕ್ಕೆ ಆಧಾರವಿರುವುದು ಕೈಫಿಯತ್ತುಗಳಲ್ಲಿ ಮಾತ್ರ ಈ ವಾದಕ್ಕೆ ಯಾವುದೇ ಲಿಖಿತ ದಾಖಲೆಗಳು, ಶಾಸನಾಧಾರಗಳು ಇಲ್ಲದಿರುವುದನ್ನು ನೋಡಿದರೆ ಇದು ಕೇವಲ ಕಲ್ಪಿತವಾದುದೆಂದು ಹೇಳಬಹುದು. ಆದರೆ ಈ ವಾದವನ್ನು ಬಿ.ಎಲ್.ರೈಸ್[೪೧] ಆಲೂರ ವೆಂಕಟರಾಯರು[೪೨], ವೆಂಕಟರಂಗೋಕಟ್ಟೆ[೪೩] ಹಾಗೂ ಗಳಗನಾಥರು[೪೪] ಒಪ್ಪಿಕೊಂಡಿರುವುದನ್ನು ಇವರ ಉಲ್ಲೇಖಗಳಿಂದ ತಿಳಿಯಲಾಗಿದೆ.

ಮೇಲಿನ ಎಲ್ಲಾ ವಾದ-ಚರ್ಚೆಗಳನ್ನು ಪರಿಶೀಲಿಸಿದಾಗ ರಾಬರ್ಟ್ ಸಿವೆಲ್ ಹಾಗೂ ವಿದ್ವಾಂಸರು ಮಂಡಿಸಿದ ವಿಷಯಗಳಿಂದ ಪ್ರಮುಖವಾಗಿ ಗೋಚರಿಸುವ ಸಂಗತಿಗಳೆಂದರೆ, ಒಂದು ವಿಜಯನಗರದ ಆರಂಭದ ಅರಸರು ಹೊಯ್ಸಳರ ಮಾಂಡಲೀಕರಾಗಿದ್ದರು ಹಾಗೂ ಹೊಯ್ಸಳರ ಅವನತಿಯ ನಂತರ ಇವರು ಹಂಪಿಯ ಪ್ರದೇಶದ ಮೇಲೆ ಹಿಡಿತ ಸಾಧಿಸಿದರು. ಇಲ್ಲೇ ಒಂದು ರಾಜಧಾನಿಯನ್ನು ನಿರ್ಮಿಸಿಕೊಂಡು ಆಳ್ವಿಕೆ ನಡೆಸಿದರು ಎಂದು ಹೇಳಬಹುದು. ಆದರೆ ಇವರ ಮೂಲವನ್ನು ನಿರ್ದಿಷ್ಟವಾಗಿ ಹಾಗೂ ನಿಖರವಾಗಿ ಹೇಳುವುದು ಕಷ್ಟ. ಆದರೂ ಕುರುಬ ಮೂಲವು ಹೆಚ್ಚು ಸರಿಹೊಂದುವುದು. ರಾಬರ್ಟ್ ಸಿವೆಲ್‌ರ ಈ ವಾದವನ್ನು ಹೆಚ್ಚು ಒತ್ತು ನೀಡಿ ಹೇಳಿದ್ದಾರೆ. ಆದರೆ ಇವರು ಹೊಯ್ಸಳರ ಮಾಂಡಲೀಕರಾಗಿದ್ದರೆಂಬುದನ್ನು ಒಪ್ಪುವುದಿಲ್ಲ.

ರಾಬರ್ಟ್ ಸಿವೆಲ್‌ರ ಈ ಕೃತಿಯು ವಸಾಹತುಶಾಹಿ ರೀತಿಯ ಧೋರಣೆಯನ್ನು ಪ್ರಚುರಪಡಿಸುವ ಸಲುವಾಗಿಯೇ ರಚಿತವಾಗಿದೆ. ಸಾಮಾನ್ಯವಾಗಿ ಸಾಮ್ರಾಜ್ಯದ ಉಗಮದ ಹಿಂದೆ ಹಲವು ಋಷಿ-ಮುನಿಗಳ ಪ್ರಭಾವ ಇರುವುದು ಸಹಜ, ಇದು ಹೊಸತೇನಲ್ಲ. ಕದಂಬ ಸಾಮ್ರಾಜ್ಯದ ಆದಿಯಾಗಿ ಗಂಗರು, ಹೊಯ್ಸಳರ ಸಾಮ್ರಾಜ್ಯ ಸ್ಥಾಪನೆಗೆ ಜೈನಮುನಿಗಳ ಬೆಂಬಲ ದೊರೆಯಿತು. ಅದರಂತೆಯೇ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ವಿದ್ಯಾರಣ್ಯರ ನೆರವು ದೊರೆತ್ತಿತ್ತು. ಅಂದು ಒಂದು ಸಾಮ್ರಾಜ್ಯವನ್ನು ಸ್ಥಾಪಿಸುವುದು ಅಷ್ಟು ಸುಲಭದ ವಿಷಯವಾಗಿರಲಿಲ್ಲ. ಆರ್ಥಿಕ ಹಾಗೂ ಜನಶಕ್ತಿಯನ್ನು ಬಳಸಿಕೊಳ್ಳಲು ರಾಜಕೀಯ ನಾಯಕರು ಧರ್ಮಗುರುಗಳನ್ನು ಆಶ್ರಯಿಸುವುದು ಅವಶ್ಯಕವಾಗಿತ್ತು. ಅದೇ ರೀತಿ ನಾಯಕನನ್ನು ಅವಲಂಬಿಸುವುದು ಧರ್ಮಗುರುಗಳಿಗೆ ಅವಶ್ಯ ಮತ್ತು ಅನಿವಾರ್ಯವಾಗಿತ್ತು. ಗುರು ಪರಂಪರೆ ಒಂದೇ ಸಾಮ್ರಾಜ್ಯದ ಸ್ಥಾಪನೆಗೆ ಕಾರಣವಾಗಲಾರದು. ಈ ನೆಲೆಯಲ್ಲಿ ನೋಡಿದಾಗ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಹಿಂದೆ ವಿದ್ಯಾರಣ್ಯರಂತೆ ಸಂಗಮ ಪುತ್ರರ ಶ್ರಮವಿದೆ ಎಂಬ ಅರಿವು ಮೂಡುವುದು.

ವಿಜಯನಗರದ ಮೂಲವು ಇಂದಿಗೂ ಚರ್ಚಿತವಾಗುವ ಸಂಗತಿ ಸಿವೆಲ್‌ರು ಕುರುಬ ಮೂಲ ಹಾಗೂ ವಾರಂಗಲ್ಲಿನಿಂದ ಬಂದವರೆಂದು ಅಭಿಪ್ರಾಯಪಟ್ಟಿದ್ದಾರೆ. ಬ್ರಿಟೀಷ್ ಅಧಿಕಾರಿಗಳಲ್ಲೇ ದ್ವಂದ್ವವಿದೆ. ರೈಸ್‌ರು ಹೊಯ್ಸಳರ ಮಾಂಡಲೀಕರಾಗಿದ್ದರೆಂದು, ಮಾರ್ಕ್‌ವಿಲ್ಕ್‌ರು ವಾರಂಗಲ್ ನಿಂದ ಬಂದವರೆಂದು ಅಭಿಪ್ರಾಯ ಪಟ್ಟಿದ್ದಾರೆ. ಇವರ ಹೇಳಿಕೆಗಳಲ್ಲಿ ಸಹ ದ್ವಂದ್ವವಿದ್ದು ತಮ್ಮ 'ಒಡೆದು ಆಳುವ' ನೀತಿಯನ್ನು ಪ್ರತಿಪಾದಿಸಿದ್ದಾರೆ. ರೈಸ್‌ರು ತಮ್ಮ ವಾದಗಳಿಗೆ ಶಾಸನಗಳ ಮೊರೆ ಹೋಗಿರುವರು. ಮುಂದುವರಿದು ಹಂಪಿಯ ಪ್ರದೇಶದಲ್ಲಿ ಸಂಗಮ ಪುತ್ರರ ಪ್ರಭಾವ ಅತೀಯಾಗಿದ್ದು ತಮಗೆ ಮುಳುವಾಗಬಹುದೆಂದು ಅರಿತ, ಮುಮ್ಮಡಿ ಬಲ್ಲಾಳನು ಈ ಪ್ರದೇಶದ ಮೇಲೆ ಹಿಡಿತ ಸಾಧಿಸಿದನು. ಇದು ಕಂಪಿಲಿಯ ರಾಜಮನೆತನ ಪತನವಾದ ನಂತರ ನಡೆದ ಘಟನೆಯೆಂದು ಹಾಗೂ ಕ್ರಿ.ಶ.೧೩೩೦ ಸುಮಾರಿಗೆ ನಡದಂತದ್ದು. ೩ನೇ ಬಲ್ಲಾಳನು ಸ್ಥಾಪಿಸಿದ ಪಟ್ಟಣಕ್ಕೆ ಆ ಕಾಲದ ಶಾಸನಗಳು ಹೊಸ ಹಂಪೆಯ ಪಟ್ಟಣ, ಹೊಸನಾಡು, ಹೊಸಬೆಟ್ಟ, ವೀರವಿಜಯ ವಿರೂಪಾಕ್ಷಪುರ, ವಿರೂಪಾಕ್ಷ ಹೊಸಪಟ್ಟಣ, ವಿರೂಪಾಕ್ಷಪಾದ ಎಂದು ಕರೆದಿರುವುದನ್ನು ನೋಡಿದರೆ, ಸಂಗಮ ಪುತ್ರರು ಈ ಪಟ್ಟಣವನ್ನು ಸ್ಥಾಪಿಸಿಲ್ಲವೆಂದು, ನಂತರ ಈ ಪ್ರದೇಶದ ಮೇಲೆ ಹಿಡಿತ ಸಾಧಿಸಿದರು ಎನ್ನಬಹುದು.

ವಿಜಯನಗರ ಸಾಮ್ರಾಜ್ಯದ ಮೂಲವು ವಿದೇಶಿ ಬರವಣಿಗೆಯಲ್ಲಿ ವಿವಾದದ ವಸ್ತುವಾಗಿರಬಹುದು. ಏಕೆಂದರೆ ಅಲ್ಲಿಯವರೆಗೂ ಮೂಲವನ್ನು ಯಾರೂ ಪ್ರಸ್ತಾಪಿಸದ ಸಂಗತಿ. ಗಳಗನಾಥರು ತಮ್ಮ ಮಾಧವ ಕರುಣಾ ವಿಲಾಸ ಕಾದಂಬರಿಯಲ್ಲಿ ಸಂಗಮ ವಂಶಜರಾದ ಹರಿಹರ-ಬುಕ್ಕರು ವಾರಂಗಲ್ಲಿನಿಂದ ಕುರುಬರ ವೇಷದಲ್ಲಿ ಬಂದರೆಂದು ಅಭಿಪ್ರಾಯಪಟ್ಟಿದ್ದಾರೆ. ಇವರ ಮೂಲವು ಯಾದವ ವಂಶದವರೆಂದು

ಹೇಳಿರುವರು. ಇದನ್ನು ಕೃಷ್ಣಮೂರ್ತಿ ಕಿತ್ತೂರರು 'ಗಳಗನಾಥರು ಮತ್ತು ಅವರ ಕಾದಂಬರಿಗಳು' ಈ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಈ ವಿವಾದವು ಬಿಡಿಸಲಾರದ ಕಗ್ಗಾಂಟಾಗಿ ಉಳಿದಿದೆ. ಏಕೆಂದರೆ ಪ್ರಾಂತೀಯತೆ, ಭಾಷೆ, ಜಾತಿ ವೈಷಮ್ಯವು ಕಾರಣ ಎನ್ನಲಾಗಿದೆ.

## ೩.೩. ಅವನತಿಯನ್ನು ಕುರಿತ ವಿಶ್ಲೇಷಣೆ

ಸಮಯದ ಕಾಲಚಕ್ರಕ್ಕೆ ಸಿಲುಕಿ ಅನೇಕ ಸಾಮ್ರಾಜ್ಯಗಳು ಉಜ್ವಲವಾಗಿ ಬೆಳೆದು ನಂತರ ಕಣ್ಮರೆಯಾದ ಘಟನೆ ಚರಿತ್ರೆಯಲ್ಲಿ ಸಾಕಷ್ಟು ಉದಾಹರಣೆಗಳಿವೆ. ಅವು ಎಷ್ಟೇ ವೈಭವದಿಂದ ಕೂಡಿದ್ದರೂ ಕೊನೆಗೆ ಅದು ಶತ್ರುಗಳ ದಾಯಾದಿ ಇಲ್ಲವೆ ನೈಸರ್ಗಿಕ ವಿಕೋಪದಿಂದಾಗಿ ಕಾಲದ ಸೆಳೆತಕ್ಕೆ ಬಲಿಯಾಗಿವೆ. ಇದಕ್ಕೆ ವಿಜಯನಗರ ಸಾಮ್ರಾಜ್ಯವು ಹೊರತಾಗಿಲ್ಲ. ಈ ಸಾಮ್ರಾಜ್ಯದ ಅವನತಿಯ ಕುರಿತು ಮಾತನಾಡುವಾಗ ಅದನ್ನು ಹೆಚ್ಚಾಗಿ ಮತೀಯತೆ, ಧಾರ್ಮಿಕ ಹಿನ್ನೆಲೆ ನೀಡುವರು. ಕಾರಣ ಹಿಂದೂಗಳ ಅರಸರು ಹಾಗೂ ಶಾಹಿ ಸುಲ್ತಾನರ ನಡುವಿನ ಧಾರ್ಮಿಕ ವೈಮನಸ್ಸು ಕಾರಣವೆಂಬ ಅಂಶವನ್ನು ಅನೇಕರು ತಮ್ಮ ವಾದಗಳಿಗೆ ಸ್ಪಷ್ಟನೆ ನೀಡಲು ಇದನ್ನೇ ಬಳಸಿಕೊಂಡಿರುವರು. ಇದುವರೆಗೂ ವಿಜಯನಗರ ಸಾಮ್ರಾಜ್ಯದ ಅವನತಿಯ ಬಗ್ಗೆ ಪೂರ್ವಗ್ರಹ ಪೀಡಿತರಾಗಿ ಹಾಗೂ ಪಕ್ಷಪಾತವಾಗಿ ಮಾತಾನಾಡುವವರೇ ಹೆಚ್ಚು. ಆದರೆ ಈ ಸಾಮ್ರಾಜ್ಯದಲ್ಲಿ ಕಾಣಸಿಗುವ ಹಿಂದೂ ಮತ್ತು ಮುಸ್ಲಿಮ ಶೈಲಿಯ ವಾಸ್ತುಶಿಲ್ಪವು ಇವರ ಸಾಮರಸ್ಯಕ್ಕೆ ಹಿಡಿದ ಕೈಗನ್ನಡಿ. ಇದು ಹಿಂದೂ ಮತ್ತು ಮುಸ್ಲಿಮರ ನಡುವೆ ಭಾವೈಕ್ಯತೆಯನ್ನು ಮೂಡಿಸಿತ್ತೆಂದರೆ ತಪ್ಪಾಗಲಾರದು. ಆದರೆ ವಿಜಯನಗರ ಸಾಮ್ರಾಜ್ಯದ ಅವನತಿಗೆ ತಾಳಿಕೋಟೆ ಅಥವಾ ರಕ್ಕಸ ತಂಗಡಿಯ ಯುದ್ಧವೇ ಕಾರಣವೆಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಯಾವುದೇ ಒಂದು ಸಾಮ್ರಾಜ್ಯವು ಅವನತಿಯತ್ತ ಸಾಗಲು ತತ್ಕ್ಷಣದ ಘಟನೆಗಿಂತ ಅದು ಹಿಂದಿನಿಂದಲೂ ಅನುಸರಿಸಿಕೊಂಡು ಬಂದ ರೀತಿ-ರಿವಾಜುಗಳು, ಸಂಬಂಧಗಳು, ಸುಧಾರಣೆಗಳು ಪ್ರಮುಖ ಕಾರಣಗಳಾಗಿವೆ. ಇಷ್ಟೆ ಅಲ್ಲದೆ ಅವನತಿಯ ಕುರಿತು ಮಾತಾನಾಡುವಾಗ ನಮಗೆ ನೆನಪಾಗುವುದು ಫ್ರಾನ್ಸಿನ ಮಹಾಕ್ರಾಂತಿ. ಫ್ರಾನ್ಸಿನ ಕ್ರಾಂತಿಯ ೧೭೮೯ರಲ್ಲಿ ೧೬ನೇ ಲೂಯಿಯ ಕಾಲದಲ್ಲಿ ನಡೆದ ರಾಷ್ಟ್ರೀಯ ಘಟನೆ. ಅದಕ್ಕೆ ಬುದ್ಧಿ ಜೀವಿಗಳು ಕಾರಣ ಹುಡುಕುವುದು ೧೪ನೇ ಲೂಯಿಯ ಕಾಲದಿಂದ. ಅಂತೆಯೇ ನಾವು ವಿಜಯನಗರ ಸಾಮ್ರಾಜ್ಯದ ಅವನತಿಯ ಕುರಿತು ಕೃಷ್ಣದೇವರಾಯನ ಕಾಲದಿಂದಲೂ ಅನೇಕ ಕಾರಣಗಳನ್ನು ಪತ್ತೆ ಹಚ್ಚುಬಹುದು. ಕೃಷ್ಣದೇವರಾಯನ ಅನೇಕ ನೀತಿಗಳು, ದಂಡೆಯಾತ್ರೆಗಳು ಮುಸ್ಲಿಮರ ಮೇಲಿನ ದಿಗ್ವಿಜಯಗಳು, ರಾಜಧಾನಿಯಲ್ಲಿ ಅನುಸರಿಸಿದ ಕ್ರಮಗಳಾಗಿವೆ. ಕೃಷ್ಣದೇವರಾಯನ ನಂತರ ಅಧಿಕಾರಕ್ಕೆ ಬಂದ ಅಸಮರ್ಥ ಅರಸರು ಅಳಿಯ ರಾಮರಾಯನ ಅಧಿಕಾರದ ದುರಾಸೆ, ಶೈವ ಮತ್ತು ವೈಷ್ಣವರ ಮಧ್ಯೆ ಇದ್ದ ವೈರುಧ್ಯಗಳು ಈ ಸಾಮ್ರಾಜ್ಯದ ಅವನತಿಗೆ ಕಾರಣಗಳೆಂದು ಪರೋಕ್ಷ

ವಾಗಿ ಹೇಳಬಹುದು. ಆದರೆ ಚರಿತ್ರೆಕಾರರು ಇದರ ನಿರ್ದಿಷ್ಟ ಕಾರಣಗಳನ್ನು ಹುಡುಕಿದರೆ ಗೋಚರಿಸುವ ಪ್ರಮುಖ ಸಂಗತಿಗಳೆಂದರೆ, ದೋ-ಅಬ್ ಮೇಲೆ ಹಿಡಿತ ಸಾಧಿಸಲು ಶಾಹಿ ಸುಲ್ತಾನರಿಗೂ, ವಿಜಯನಗರದ ಅರಸರಿಗೂ ನಿರಂತರವಾಗಿ ನಡೆಯುತ್ತಿದ್ದ ಕದನ. ಇದಲ್ಲದೆ ರಾಮರಾಯ ಅನುಸರಿಸುತ್ತಿದ್ದ ದ್ವಂದ್ವ ಯುದ್ಧಗಳು ಇದಕ್ಕೆ ಕಾರಣಗಳನ್ನು ಕೊಡಬಹುದು.

ರಾಬರ್ಟ್ ಸಿವೆಲ್‌ರು ಈ ಸಾಮ್ರಾಜ್ಯದ ಉಗಮಕ್ಕೆ ಅನೇಕ ವಾದಗಳನ್ನು ಮುಂದಿಡುವಾಗ ಅವನತಿಯ ಕುರಿತು ಕೆಲವು ಮುನ್ನೋಟಗಳನ್ನು ನೀಡಿದ್ದಾರೆ. ಅವುಗಳನ್ನು ವಿಶ್ಲೇಷಿಸುತ್ತಾ ವಿಜಯನಗರ ಸಾಮ್ರಾಜ್ಯದ ಅವನತಿಗೆ ಯಾವ ಕಾರಣಗಳನ್ನು ನೀಡಿದ್ದಾರೆಂಬುದನ್ನು ತಿಳಿದು ಮುಂದುವರೆಯುವುದು ಉಚಿತ. ಇವರು ಇದಕ್ಕಾಗಿ ಪ್ರತ್ಯೇಕವಾಗಿ ಎರಡು ಅಧ್ಯಾಯಗಳನ್ನೇ ರಚಿಸಿದ್ದಾರೆ. ಅದರಂತೆ ಕೆಲವು ಕಾರಣಗಳನ್ನು ಇಲ್ಲಿ ನೋಡಬಹುದು. ೧೫೪೨ರಲ್ಲಿ ಅಚ್ಯುತರಾಯನ ಮರಣದ ಸಮಯಕ್ಕೆ ರಾಜಧಾನಿಯಲ್ಲಿ ಹಲವು ದೊಂಬಿಗಳು ನಡೆದಿದ್ದು, ಮನ್ನೆಯರು ಅರಸನ ವಿರುದ್ಧ ಬಂಡಾಯ ಮನೋಭಾವ ಕೆರಳಿಸಿದಂತೆ ಕಾಣುವುದು.[೩೫] ಕಾರಣ ಅಸಮರ್ಥ ರಾಜರ ವಿರುದ್ಧ ಸ್ಥಳೀಯರು ದಂಗೆ ಏಳುವುದು ಸಾಮಾನ್ಯವಾಗಿದ್ದು ಇದೇ ಮೊದಲಲ್ಲ. ವಿಜಯನಗರ ಸಾಮ್ರಾಜ್ಯದ ಉಗಮಕ್ಕೆ ಇದು ಒಂದು ಕಾರಣವಾಗಿತ್ತು ಎಂದು ತಿಳಿಯಬಹುದು.

ರಂಗ ಅಥವಾ ಕಕ್ಕನ ನೀತಿಯಿಂದ[೩೬] ಬೇಸರಿಸಿದ ಮನ್ನೆಯರು ಪ್ರತ್ಯೇಕವಾದರು ಮತ್ತು ತಮ್ಮ-ತಮ್ಮಲ್ಲೇ ಸ್ವತಂತ್ರ ಘೋಷಿಸಿಕೊಂಡರು. ಇಲ್ಲಿ ಮನ್ನೆಯರು ಯಾರಾಗಿದ್ದರು. ಇವರು ಎಲ್ಲಿಯವರೆಗೆ ಸ್ವತಂತ್ರರಾಗಿದ್ದರು. ರಾಮರಾಯನೊಂದಿಗೆ ಕೈಜೋಡಿಸಿದ್ದರೆ ಎಂಬುದನ್ನು ಸಿವೆಲ್‌ರು ವಿಶ್ಲೇಷಿಸುವುದನ್ನು ಮರೆತಂತಿದ್ದಾರೆ. ಆದರೆ ರಂಗನು ತಾನು ಅಧಿಕಾರಕ್ಕೆ ಬರಲು ಬಿಜಾಪುರದ ಆದಿಲ್‌ಶಾಹನ ನೆರವು ಕೇಳಿ ಸ್ಥಳೀಯರಿಂದ ಸೋಲನ್ನೊಪ್ಪಿಕೊಂಡನು. ಇದು ಸುಲ್ತಾನನ ಸಮಯ ಸಾಧಕತನವನ್ನು ತೋರಿಸುತ್ತದೆ. ಅಲ್ಲದೆ ಬಿಜಾಪುರದ ಸುಲ್ತಾನ ವಿಜಯನಗರದ ಕೆಲವು ಪ್ರದೇಶಗಳನ್ನು ವಶಪಡಿಸಿಕೊಳ್ಳುವ ತವಕದಲ್ಲಿದ್ದನು. ಇದನ್ನರಿತ ಸ್ಥಳೀಯರು ಸುಲ್ತಾನನ್ನು ಸೋಲಿಸಿದರು. ಹಾಗೆಯೇ ವಿಜಯನಗರ ಸಾಮ್ರಾಜ್ಯದ ಅವನತಿಗೆ ಪ್ರಮುಖ ಕಾರಣವೆಂದು ಗುರುತಿಸುವ ಅಳಿಯ ರಾಮರಾಯನು ಇದೇ ಅವಧಿಯಲ್ಲಿ ಸಿಂಹಾಸನವೇರಿದನು.[೩೭] ರಾಮರಾಯನ ನೀತಿಯು ಹೇಗಿತ್ತೆಂದರೆ ಮೊದಲು ಅಹಮ್ಮದ್ ನಗರದ ನಿಜಾಂಶಾಹ, ಗೋಲ್ಕೊಂಡದ ಕುತುಬ್‌ಶಾಹನೊಂದಿಗೆ ಸೇರಿಕೊಂಡು ಆದಿಲ್‌ಶಾಹನ ಮೇಲೆ ಯುದ್ಧ ಮಾಡಲು ತಯಾರಾದ. ಇಲ್ಲಿ ರಾಯಚೂರು ಮತ್ತು ದೋ-ಅಬ್‌ಗಳನ್ನು ವಶಪಡಿಸಿಕೊಂಡ. ೧೫೪೪ರಲ್ಲಿ ಇದೇ ಪರಿಸ್ಥಿತಿಯನ್ನು ಮುಂದುವರೆಸಿದನು. ಆದರೆ ಇಲ್ಲಿ ಸುಲ್ತಾನ ಬರಹಾನ್ ಸೋತನು. ಇಲ್ಲಿ ಬಿಜಾಪುರದ ಆದಿಲ್ ಶಾಹಿಗಳ ವರ್ತನೆ ಇತರೆ ಶಾಹಿ ಅರಸರನ್ನು ಅಗೌರವದಿಂದ ಕಾಣುವಂತೆ ಮಾಡಿತು. ಇದರಿಂದ ಇಬ್ರಾಹಿಂ

ಆದಿಲ್ ಶಾಹನ ವಿರುದ್ಧ ಪಿತೂರಿ ನಡೆಯಿತು.[೩೮] ಇಬ್ರಾಹಿಂ ಪೋರ್ಚುಗೀಸರ ಸಹಾಯ ಪಡೆದನು. ಇದಕ್ಕೆ ಪ್ರತಿಯಾಗಿ ಸ್ಯಾಲ್ಸೆಟ್ ಮತ್ತು ಬಾರ್ಡ್ಸ್‌ಗಳನ್ನು ಬಿಟ್ಟುಕೊಟ್ಟನು.

ಇದೇ ಸಮಯಕ್ಕೆ ಸರಿಯಾಗಿ ಅಳಿಯ ರಾಮರಾಯನು ಪೋರ್ಚುಗೀಸರೊಂದಿಗೆ ಒಪ್ಪಂದ ಮಾಡಿಕೊಂಡು ಗೋವಾದ ಅಶ್ವ ವ್ಯಾಪಾರದಲ್ಲಿ ಏಕಸೌಮ್ಯವನ್ನು ಹೊಂದಿದನು. ಇದು ಇತರೇ ಶಾಹಿ ಅರಸರಿಗೆ ಅಸೂಯೆ ಮೂಡಿಸಿತು. ೧೫೫೧ರಲ್ಲಿ ದೋ-ಅಬ್‌ನ್ನು ಪುನಹ ಇಬ್ರಾಹಿಂ ಆದಿಲ್‌ಶಾಹನಿಂದ ವಶಪಡಿಸಿಕೊಂಡ. ಇದರ ನೆರವಿಗಾಗಿ ಆಹಮ್ಮದ್ ನಗರದ ನಿಜಾಂಶಾಹ ಕೈಜೋಡಿಸಿದ್ದನು. ಮತ್ತೇ ಇದು ದ್ವಂದ್ವ ಯುದ್ಧದ ಫಲವಾಗಿತ್ತು. ದಾಯಾದಿಗಳಲ್ಲಿ ಕಲಹ ಏರ್ಪಟ್ಟು ಅಳಿಯ ರಾಮರಾಯನ ವಿರುದ್ಧ ಅವನ ಸಹೋದರರು ದಂಗೆಯೆದ್ದು, ಆದೋನಿಯ ಕೋಟೆಯನ್ನು ವಶಪಡಿಸಿಕೊಂಡರು ಇದಕ್ಕೆ ಅಳಿಯ ರಾಮರಾಯ ಹಾಗೂ ಗೋಲ್ಕೊಂಡದ ಕುತುಬ್‌ಶಾಹಿಯಾದ ಇಬ್ರಾಹಿಂನ ನೆರವನ್ನು ಪಡೆದು ಆ ಕೋಟೆಯನ್ನು ಪುನಹ ಸ್ವಾಧೀನಪಡಿಸಿಕೊಂಡ. ಈ ಸಮಯಕ್ಕಾಗಲೇ ಅಲಿ ಆದಿಲ್‌ಶಾಹನು ಪಟ್ಟಕ್ಕೆ ಬಂದಿದ್ದು ವಿಜಯನಗರದ ಅರಸರೊಂದಿಗೆ ಮೈತ್ರಿ ಬೆಳೆಸುವ ಸಲುವಾಗಿ ಅಳಿಯ ರಾಮರಾಯನ ಆಸ್ಥಾನಕ್ಕೆ ಭೇಟಿ ನೀಡಿದ್ದನು. ೧೫೫೮ರಲ್ಲಿ ಅಳಿಯ ರಾಮರಾಯ ರೋಮನ್ ಕ್ಯಾಥೋಲಿಕ್ ಸನ್ಯಾಸಿಗಳ ಹಾಗೂ ಸಂತ ಥಾಮಸ್ ಚರ್ಚಿನ ಮಹತ್ತ್ವದ ಸ್ಥಳವಾದ ಮೆಲಿಯಾಪುರ ಅಥವಾ ಮೈಲಾಪುರದ ಮೇಲೆ ದಂಡೆತ್ತಿ ಹೋದನು. ಕಾರಣ ಇಲ್ಲಿನ ಕ್ರೈಸ್ತರು ಹಿಂದೂ ದೇವಾಲಯಗಳನ್ನು ಹಾಗೂ ಅನೇಕ ಪಗೋಡಗಳನ್ನು ಕೆಡವಿದ್ದರಿಂದ ಬ್ರಾಹ್ಮಣರ ಮನಸ್ಸಿಗೆ ನೋವುಂಟು ಮಾಡಿದ್ದು, ಅಳಿಯ ರಾಮರಾಯನಲ್ಲಿಗೆ ಇವರು ಮನವಿ ಮಾಡಿದ್ದರು. ಈ ಕಾರಣವಾಗಿ ದಂಡೆತ್ತಿ ಹೋಗಬೇಕಾಯಿತು. ಇದು ಸಹ ವಿಜಯನಗರದ ಅವನತಿಗೆ ಕಾರಣವಾಗುವ ಅಂಶಗಳಲ್ಲಿ ಒಂದಾಗಿದೆ.[೩೯]

ಕೊನೆಯದಾಗಿ ಅಲಿ ಆದಿಲ್‌ಶಾಹ ಮತ್ತು ಅಳಿಯ ರಾಮರಾಯ ಇಬ್ಬರು ಸೇರಿ ಅಹಮ್ಮದ್ ನಗರದ ಹುಸೇನ್ ನಿಜಾಂಶಾಹನ ಮೇಲೆ ದಾಳಿ ಮಾಡಿ ಆ ಪ್ರದೇಶಗಳನ್ನು ಇಬ್ಬರು ಹಂಚಿಕೊಂಡರು. ಇಲ್ಲಿ ಬೀಜನಗರದ ಕಾಫೀರರು ಎಲ್ಲಾ ರೀತಿಯ ಕ್ರೌರ್ಯಗಳನ್ನು ಮಾಡಿದರೆಂದು, ಕುರಾನನ್ನು ಸಹ ಗೌರವದಿಂದ ಕಾಣಲಿಲ್ಲ.[೪೦] ಇದು ಮುಸ್ಲಿಮರ ನಡವಳಿಕೆಗೆ ವಿರುದ್ಧವಾಗಿದ್ದು ಅವರನ್ನು ರೊಚ್ಚಿಗೆಬ್ಬಿಸಿತು. ಇದು ವಿಜಯನಗರದ ಅಂತಿಮ ಪತನ ಹಾಗೂ ವಿನಾಶಕ್ಕೆ ಕಾರಣವಾಯಿತು ಎಂದಿದ್ದಾನೆ. ಅಂದರೆ ವಿಜಯನಗರದ ಅರಸರು ಅನೇಕ ಬಾರಿ ಮಹಮ್ಮದೀಯ ಅರಸರ ವಿರುದ್ಧ ದ್ವಂದ್ವಯುದ್ಧ ಸಾರುತ್ತಿದ್ದುದು ಹಾಗೂ ಇದನ್ನು ಗಮನಿಸಿದ ಶಾಹಿ ಸುಲ್ತಾನರು ವಿಜಯನಗರ ಸಾಮ್ರಾಜ್ಯದ ಮೇಲೆ ಸೇಡು ತೀರಿಸಿಕೊಳ್ಳುವ ಸಲುವಾಗಿಯೇ ಯುದ್ಧ ಕೈಗೊಂಡರೆಂದು ತಿಳಿದುಬರುವ ಸಂಗತಿಯಾಗಿದೆ.

ಸಿವೆಲ್‌ರು ಮುಂದುವರಿದು ವಿಜಯನಗರ ಸಾಮ್ರಾಜ್ಯದ ಅವನತಿಗೆ ನಿರ್ದಿಷ್ಟ ಕಾರಣಗಳನ್ನು ಕೊಡುವರು. ಅವು ಅಲಿ ಆದಿಲ್‌ಶಾಹನ ಮೇಲೆ ಆಕ್ರಮಣ ಎಸಗಲು ಹುಸೇನ್ ಇಬ್ರಾಹಿಂಶಾಹನು

ಕುತುಬ್ ಶಾಹನೊಂದಿಗೆ ಒಪ್ಪಂದ ಮಾಡಿಕೊಂಡನು. ಇದರಿಂದ ಅಲಿ ಆದಿಲ್‌ಶಾಹನು ಅಳಿಯ ರಾಮರಾಯನ ಸಹಾಯ ಬೇಡಿದ. ಇದಕ್ಕೆ ಅಳಿಯ ರಾಮರಾಯ ನೆರವು ನೀಡಿದ ಆದರೆ ಕುತುಬ್ ಶಾಹನು ಅಲಿ ಆದಿಲ್‌ಶಾಹನ ಜೊತೆ ಸೇರಿದನು. ಅಹಮ್ಮದ್ ನಗರದ ಮೇಲೆ ಈ ಮೂರು ಸೌರ್ವಭೌಮರು ಮುತ್ತಿಗೆ ಹಾಕಿದರು. ವಿಜಯನಗರದ ಸೈನಿಕರ ಇಲ್ಲಿನ ಅಸಭ್ಯ ವರ್ತನೆ ಶಾಹಿ ಅರಸರನ್ನು, ಮುಸ್ಲಿಮರನ್ನು ಹಾಗೂ ಸ್ಥಳೀಯರನ್ನು ರೊಚ್ಚಿಗೆಬ್ಬಿಸಿತು. ಈ ವೇಳೆಗೆ ಶಾಹಿ ಸುಲ್ತಾನರನ್ನು ಮುಖ್ಯರಲ್ಲ ಎಂದು ಅಳಿಯ ರಾಮರಾಯನು ತೀರ್ಮಾನಿಸಿದನು ಮತ್ತು ಕುತುಬ್‌ಶಾಹ ಹಾಗೂ ಆದಿಲ್ ಶಾಹನಿಂದ ಘಾನಪುರ ಮತ್ತು ಪಾಂಗಲ್ ಗಳನ್ನು ಪಡೆದುಕೊಂಡ. ಇವನ ಆಕ್ರಮಣ ನೀತಿ ಹಾಗೂ ದ್ವಂದ್ವ ಯುದ್ಧವೇ ಸಾಮ್ರಾಜ್ಯದ ಅವನತಿಗೆ ಮುಳುವಾಯಿತು ಎಂದಿದ್ದಾರೆ.

ಶಾಹಿ ಸುಲ್ತಾನರು ಅಳಿಯ ರಾಮರಾಯನಿಗೆ ಬುದ್ಧಿ ಕಲಿಸಲು ಹಾಗೂ ಅವನ ಅನೇಕ ಪ್ರದೇಶ ಗಳನ್ನು ವಶಪಡಿಸಿಕೊಳ್ಳಲು ನಾಲ್ವರು ಶಾಹಿ ಸುಲ್ತಾನರು ಒಂದಾದರೂ ಇವರ ನೇತೃತ್ವವನ್ನು ಅಲಿ ಆದಿಲ್ ಶಾಹನು ವಹಿಸಿಕೊಂಡನು. ಶಾಹಿಸುಲ್ತಾನರ ಸೈನ್ಯ ಹಾಗೂ ಅಳಿಯ ರಾಮರಾಯನ ಸೈನ್ಯವು ರಕ್ಕಸಗಿ ಹಾಗೂ ತಂಗಡಗಿ ಎಂಬಲ್ಲಿ ನಡೆದ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯವು ಸೋತು ಪಲಾಯನ ಮಾಡಿತು. ಅಳಿಯ ರಾಮರಾಯನು ೯೦ ವರ್ಷದವನಾಗಿದ್ದರೂ ವೀರಾವೇಷದಿಂದ ಹೋರಾಡಿ, ಶಾಹಿ ಸುಲ್ತಾನರ ಕೈಗೆ ದೊರೆತು ಹತನಾದನು. ಇದನ್ನು ಕಂಡ ವಿಜಯನಗರದ ಸೈನಿಕರು ದಿಕ್ಕು ತೋಚದೆ ಪಲಾಯನ ಮಾಡಿದರು. ಇದರಿಂದ ಸೆರೆ-ಸಿಕ್ಕ ಸೈನಿಕರನ್ನು ಕೊಚ್ಚಿ ಹಾಕಿ, ಲೂಟಿ ಕಾರ್ಯ ಮಾಡತೊಡಗಿದರು. ೧೫೬೫ರವರೆಗೆ ಉಜ್ವಲವಾಗಿ ಬಾಳಿ ಬದುಕಿದ ವಿಜಯನಗರ ಸಾಮ್ರಾಜ್ಯವು ತಾತ್ಕಾಲಿಕವಾಗಿ ಅವನತಿಯತ್ತ ಸಾಗಿತು.

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪಿಯು ಎಂದೂ ಕಾಣದ ವಿನಾಶದತ್ತ ನಡೆದಿತ್ತು. ರಾಜರ ರಕ್ಷಣೆಯಿಲ್ಲದೆ ಇದ್ದ ಹಂಪಿಯನ್ನು ಸ್ಥಳೀಯರು ಹಾಗೂ ಮುಸ್ಲಿಮರು ಲೂಟಿ ಮಾಡಿದರೆಂಬ ಆರೋಪವಿದೆ. ನಮಗೆ ಸಾಮ್ರಾಜ್ಯದ ಅವನತಿಗಿಂತ ರಾಜಧಾನಿಯ ಅವನತಿಯು ಹೇಗಾಯಿತು ಎಂಬುದನ್ನು ಕುರಿತು ಚರ್ಚಿಸುವ ಅಗತ್ಯವಿದೆ. ಅದನ್ನು ಈ ಮುಂದಿನಂತೆ ನೋಡಬಹುದು. ರಾಜಧಾನಿಯ ಅವನತಿಯ ಬಗ್ಗೆ ಅನೇಕ ವಿವಾದಗಳಿವೆ. ಮುಸ್ಲಿಮರು ನಾಶಪಡಿಸಿದರೆಂದು, ಮತ್ತೊಂದೆಡೆ ಸ್ಥಳೀಯರೆಂಬ ಅಭಿಪ್ರಾಯಗಳಿವೆ ಅವುಗಳನ್ನು ಚರ್ಚಿಸುವ ಅನಿವಾರ್ಯತೆ ಇದೆ.

ವಿಜಯನಗರದ ಅವನತಿಯ ಕುರಿತು ವಿಶ್ಲೇಷಿಸುವಾಗ, ಪ್ರಧಾನವಾಗಿ ರಾಬರ್ಟ್ ಸಿವೆಲ್‌ರು ವಿವರಿಸುವ ಈ ಘಟನಾವಳಿಗಳ ಮೇಲೆ ಬೆಳಕು ಚೆಲ್ಲಿದ್ದು ವಿಶೇಷ. ಆದರೆ ಇಲ್ಲಿಯೂ ಇವರು ಮತೀಯತೆನ್ನು ಹಾಗೂ 'ಒಡೆದು ಆಳುವ ನೀತಿ'ಯನ್ನು ಪ್ರಚೋದಿಸಿದ್ದಾರೆ. ವಿಜಯನಗರದ ಅರಸರಂತೆ ಶಾಹಿ ಸುಲ್ತಾನರು ಸಾಮ್ರಾಜ್ಯವಿಸ್ತಾರ ಹಾಗೂ ಸಂಪತ್ತನ್ನು ಸಂಗ್ರಹಿಸುವ ಸಲುವಾಗಿಯೇ, ಯುದ್ಧ

ಹೂಡಿರುವರು. ವಿಜಯನಗರದ ಸಂಪತ್ತು ದೋಚುವ ಹಾಗೂ ರಾಮರಾಯನ ದರ್ಪವನ್ನು ಮುರಿಯುವ ದುರುದ್ದೇಶದಿಂದ ಮತ್ತು ವಿಜಯನಗರ ಸಾಮ್ರಾಜ್ಯದ ಮೇಲೆ ಅಸೂಯೆ, ದ್ವೇಷದಿಂದ ಯುದ್ಧ ಸಾರಿದರು ಎನ್ನಬಹುದು. ಆದರೆ ಈ ತಾಳಿಕೋಟೆ ಯುದ್ಧದ ನಂತರ ನಡೆದ ರಾಜಧಾನಿಯ ವಿನಾಶ ಹಾಗೂ ಸಂಪತ್ತಿನ ದೋಚುವಿಕೆಗೆ ಸಂಬಂಧಿಸಿದ ಹೇಳಿಕೆಗಳು ಇಂದಿಗೂ ವಾದಗ್ರಸ್ತವಾಗಿವೆ. ಇವೆರೆಡು ಅಂಶಗಳನ್ನು ಸಿವೆಲ್‌ರು ಚರ್ಚಿಸಿದ್ದು, ಇವುಗಳನ್ನು ಕೇವಲ ಮುಸ್ಲಿಮರೇ ನಡೆಸಲಿಲ್ಲ ಇದಕ್ಕೆ ಹಿಂದೂಗಳು ಕೈಜೋಡಿಸಿದರು ಎಂದಿದ್ದಾರೆ. "ಕುರುಬರು, ಬೇಡರು, ಲಂಬಾಡಿಗರು ಬ್ರಿಂಜಾರಿಗಳು ಇದರಲ್ಲಿ ಪಾಲ್ಗೊಂಡಿದ್ದರು ಎಂದು ಉಲ್ಲೇಖಿಸಿರುವರು."[೧] ರಾಬರ್ಟ್ ಸಿವೆಲ್‌ರು ಕೇವಲ ಮುಸ್ಲಿಮರೇ ಈ ಸಾಮ್ರಾಜ್ಯದ ಅವನತಿಗೆ ಕಾರಣರಲ್ಲ ಎಂದು ತೋರಿಸಿಕೊಟ್ಟಿದ್ದಾರೆ.

ಇದಕ್ಕೆ ಪೂರಕವಾಗಿ ಅನೇಕ ವಿದ್ವಾಂಸರು ವಿಜಯನಗರ ಸಾಮ್ರಾಜ್ಯದ ಅವನತಿಯನ್ನು ವಿಶ್ಲೇಷಿಸಿದ್ದಾರೆ. ಅದರಲ್ಲಿ "ವಸುಂಧರಾ ಫಿಲಿಯೋಜಾ" ಪ್ರಮುಖರು. ಇವರ "ವಿಜಯನಗರ" ಕೃತಿಯಲ್ಲಿ ವಿಜಯನಗರ ರಾಜಧಾನಿಯಾದ ಹಂಪಿಯು ಯಾವ ಕಾರಣದಿಂದ ನಾಶವಾಯಿತು ಎಂಬುದನ್ನು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ಕೃಷ್ಣದೇವರಾಯನ ನಂತರ ಅಧಿಕಾರವಹಿಸಿಕೊಂಡ ಅಚ್ಯುತರಾಯನ ಆಡಳಿತಾವಧಿಯಲ್ಲಿ ಅನೇಕ ಮಹತ್ತ್ವದ ಘಟನೆಗಳು ನಡೆದವು. ಅಚ್ಯುತರಾಯನ ನಂತರ ಅಧಿಕಾರ ವಹಿಸಿಕೊಂಡ ಸದಾಶಿವರಾಯನನ್ನು ಅಳಿಯ ರಾಮರಾಯನು ಕೇವಲ ನಾಮಮಾತ್ರ ಅರಸನನ್ನಾಗಿಸಿದನು. ಅಳಿಯ ರಾಮರಾಯನು ಶಾಸನಬದ್ಧ ಅರಸನಂತಿದ್ದು, ಸಾಮ್ರಾಜ್ಯದ ಆಗು-ಹೋಗುಗಳನ್ನು ನಿಯಂತ್ರಿಸುತ್ತಿದ್ದ. ಅಳಿಯ ರಾಮರಾಯನು ಅರವೀಡು ವಂಶದವನು. ಆಂಧ್ರ ಪ್ರದೇಶದ ಅರವೀಡು ಎಂಬ ಸ್ಥಳವು ಇವನ ಮೂಲವಾಗಿದ್ದು, ತೆಲುಗು ಭಾಷಿಕ. ಇವನ ಮೇಲೆ ತಿರುಪತಿ ಹಾಗೂ ಶ್ರೀವೈಷ್ಣವದ ಅತ್ಯಂತ ಗಾಢವಾದ ಪರಿಣಾಮ ಬೀರಿತ್ತು. ಈತ ಶ್ರೀವೈಷ್ಣವದ ಇತರೇ ಕೇಂದ್ರಗಳೊಂದಿಗೆ ಸಂಪರ್ಕ ಹೊಂದಿದ್ದನು.[೨] ಉದಾ : ತಮಿಳುನಾಡಿನ ಮಧುರೈ, ರಾಜಧಾನಿಯ ತುಂಬೆಲ್ಲಾ ಶ್ರೀವೈಷ್ಣವದ ಪ್ರಭಾವವನ್ನು ಹೆಚ್ಚಿಸಲಾಯಿತು. ಇದನ್ನು ಸಾದರ ಪಡಿಸಲು ಸಾಮ್ರಾಜ್ಯದಾದ್ಯಂತ ಅನೇಕ ವೈಭವಯುತ ಕಾರ್ಯಕ್ರಮಗಳನ್ನು ಹಮ್ಮಿಕೊಂಡನು. ಹಂಪಿಯ ವಿಠ್ಠಲ, ಕೃಷ್ಣ, ಹಜಾರ ರಾಮಚಂದ್ರ ದೇವಾಲಯಗಳಲ್ಲಿ ಶ್ರೀವೈಷ್ಣವದ ಪ್ರಭಾವವನ್ನು ಇಂದಿಗೂ ನೋಡಬಹುದು. ವಿಠ್ಠಲ ದೇವಾಲಯ ರಾಜಧಾನಿಯಲ್ಲಿ 'ರತ್ನ'ದಂತೆ ಕಂಗೊಳಿಸುತ್ತಿತ್ತು.[೩] ಈ ದೇವಾಲಯದ ಮಂಟಪವು ಕರ್ನಾಟಕ ವಾಸ್ತುಶಿಲ್ಪದ ರತ್ನವಾಗಿದೆ. ಇದು ಭಾರತೀಯ ಕಲೆ ಮತ್ತು ವಾಸ್ತುಶಿಲ್ಪಕ್ಕೆ ನೀಡಿದ ಕೊಡುಗೆ ಎನ್ನಬಹುದು. ಇಷ್ಟರ ಮಟ್ಟಿಗೆ ಶ್ರೀವೈಷ್ಣವದ ಪ್ರಭಾವವನ್ನು ನೋಡಬಹುದು.

ಈ ತೆರನಾಗಿ ರಾಜಧಾನಿಯಲ್ಲಿ ಶ್ರೀವೈಷ್ಣವದ ಪ್ರಭಾವವನ್ನು ಕಂಡ ಶೈವರು, ಶ್ರೀವೈಷ್ಣವರ ಮೇಲೆ ಮುನಿಸಿಕೊಳ್ಳುವಂತಾಯಿತು. ವಿಜಯನಗರ ಸ್ಥಾಪನೆಯ ಪೂರ್ವದಿಂದಲೂ ಶೈವರ ಕೇಂದ್ರವಾಗಿದ್ದ

ಹಂಪಿಯ ಮೇಲೆ ಹಿಡಿತ ಸಾಧಿಸಿದ್ದರು. ಆದರೆ ಕೃಷ್ಣದೇವರಾಯ ಹಾಗೂ ನಂತರ ಬಂದ ಅರಸರು ಇವರನ್ನು ನಿರ್ಲಕ್ಷ್ಯಕ್ಕೆ ಒಳಗು ಮಾಡಿದ್ದರು. ೧೫೬೫ರ ತಾಳಿಕೋಟೆ ಕದನದಲ್ಲಿ ಸೋತ ವಿಜಯನಗರದ ಅರಸರು ಪೆನುಗೊಂಡಕ್ಕೆ ಪಲಾಯನ ಮಾಡಿದರು. ಇದೇ ಸುಸಂದರ್ಭ ಎಂದು ತಿಳಿದ ಶೈವರು, ಶ್ರೀವೈಷ್ಣವರ ಮೇಲೆ ಸೇಡು ತೀರಿಸಿಕೊಳ್ಳುವ ಸಲುವಾಗಿಯೇ ಅವರ ದೇವಾಲಯಗಳನ್ನು ನಾಶಪಡಿಸಲು ಮುಂದಾಗಿರಬಹುದು ಎಂಬ ಸಂಶಯವನ್ನು ಸೂಕ್ಷ್ಮವಾಗಿ ವ್ಯಕ್ತಪಡಿಸಿದ್ದಾರೆ.

ವಿಜಾಪುರದ ಆದಿಲ್‌ಶಾಹಿಗಳ ಚರಿತ್ರೆಯನ್ನು ಒಳಗೊಂಡ ಬುಸಾತೀನ-ಸಲಾತೀನ್ ಎಂಬ ಗ್ರಂಥದಲ್ಲಿ ''ರಾಜಧಾನಿಯ ನಾಶದಲ್ಲಿ ಮುಸ್ಲಿಮ್ ಸುಲ್ತಾನರ ಪಾತ್ರವೇ ಹೆಚ್ಚು'' ಎಂದಿದ್ದಾರೆ. ಅದನ್ನು ಈ ರೀತಿಯಾಗಿ ವಿವರಿಸಿದ್ದಾರೆ. ದೊಡ್ಡ-ದೊಡ್ಡ ಗಟ್ಟಿಯಾದ ಥರವನ್ನು ತುಂಬಿ ಕಟ್ಟಿದ ಕಟ್ಟಡಗಳನ್ನು, ವಿಶಾಲವಾದ ಅರಮನೆಗಳನ್ನು, ದೇವಾಲಯಗಳನ್ನು ದೊಡ್ಡ-ದೊಡ್ಡ ಮಹಲನ್ನು ಕೆಡವಿ ನೆಲಸಮ ಮಾಡಿದರು. ವಿಜಯನಗರದ ಅರಸರು ಮಾಡಿದ ವಿನಾಶಕ್ಕಿಂತ ನೂರುಪಟ್ಟು ಅಧಿಕವಾಗಿ ದೇವಾಲಯಗಳನ್ನು ಧ್ವಂಸಗೊಳಿಸಿದರು. ವಿಜಯನಗರವು ದೊಡ್ಡದು ಮತ್ತು ಬಹಳ ಜನವಸತಿಯೊಂದಿಗೆ ಭರಾಟೆಯಲ್ಲಿತ್ತು. ಸಾವಿರ ವರ್ಷಗಳಲ್ಲಿ ಎಂದು ಪರಕೀಯರ ಸೈನ್ಯವು ಬಂದು ಆ ನಗರದಲ್ಲಿ ಕಾಲಿಟ್ಟಿರಲಿಲ್ಲ. ಅಲ್ಲಿ ವಾಸಿಸುತ್ತಿದ್ದ ಅಮೀರರು, ಸಾಹುಕಾರರು, ರೈತರು, ಜನರು, ಫಕೀರರು ಬಹಳ ಸಂತೋಷದಿಂದ ಜೀವನ ನಡೆಸುತ್ತಿದ್ದರು. ಇವರು ಮುಸಲ್ಮಾನರು ಲೂಟಿ ಮಾಡುತ್ತಾರೆಂದು ತಿಳಿದು ಮನೆಯಲ್ಲಿಯ ನೆಲಮನೆಯಲ್ಲಿ, ಬಾವಿಗಳಲ್ಲಿ, ಹೌದುಗಳಲ್ಲಿ ಮುಳುಗಿಸಿ ಇಟ್ಟಿದ್ದರು. ಆದರೆ ಮುಸಲ್ಮಾನ ಜನರ ಸೈನ್ಯವು ಅಲ್ಲಿ ಬಂದು ಕಣ್ಣಿಗೆ ಕಂಡದನ್ನು ಲೂಟಿ ಮಾಡುತ್ತ ಸಂಪೂರ್ಣವಾಗಿ ನಿಶೇಷ್ಯವಾಗಿ ಸುಲಿಗೆ ಮಾಡಿತು. ಆಗ ಮುಸಲ್ಮಾನ ಜನರಿಗೆ, ಬಹಳಷ್ಟು ದ್ರವ್ಯವನ್ನು ಸಾಕಷ್ಟು ಜನರು ಭೂಮಿಯಲ್ಲಿ ಹುಗಿದು ಇಟ್ಟಿದ್ದಾರೆಂದು ತಿಳಿಯಿತು. ಹಾಗೆ ಗೊತ್ತಾದ ತಕ್ಷಣ ಅದರ ಹಿಂದೆಯೇ ಮನೆಗಳನ್ನು ಕಟ್ಟಡಗಳನ್ನು ಮತ್ತು ಅಂಗಡಿಗಳನ್ನು ಅಗೆದು ತೆಗೆಯಹತ್ತಿದ್ದರು. ಇದರಿಂದಾಗಿ ಅವರಿಗೆ ಸಾಕಷ್ಟು ಸಂಪತ್ತು ದೊರಕಿತು.'' ಮುಸಲ್ಮಾನ್ ಬಾದಶಹರ, ಯೋಧರು ಬಂಗಾರದ ಬೆಳ್ಳಿಯ ಆಭರಣಗಳನ್ನು, ಮುತ್ತು-ರತ್ನಗಳು, ಕುದುರೆ, ತಲವಾರಗಳನ್ನು, ಸೇವಕ, ಸೇವಕಿಯರನ್ನು ಮತ್ತಷ್ಟೇ ಪದಾರ್ಥಗಳನ್ನು ಹರಣ ಮಾಡಿ, ತಮ್ಮ ಉಳಿದ ಆಯುಷ್ಯ ಪರ್ಯಂತ ಹೊಟ್ಟೆ ಪಾಡಿಗಾಗಿ ದುಡಿಯುವ ಗೋಜು ಇಲ್ಲವೆಂಬಂತೆ ಶ್ರೀಮಂತರಾದರೆಂದು'' ಅಭಿಪ್ರಾಯಪಟ್ಟಿದ್ದಾರೆ.

ಬಿ.ಸೂರ್ಯನಾರಾಯಣರಾವ್‌ರು ತಮ್ಮ ಕೃತಿಯಾದ 'ಎ ಹಿಸ್ಟರಿ ಆಫ್ ವಿಜಯನಗರ; ದಿ ನೆವರ್ ಟು ಬಿ ಫರ್‌ಗಾಟನ್ ಎಂಪೈರ್'ನಲ್ಲಿ ವಿಜಯನಗರ ಸಾಮ್ರಾಜ್ಯದ ಅವನತಿಯನ್ನು ಕುರಿತು ವಿಶ್ಲೇಷಿಸುವಾಗ ಹೆಚ್ಚು ಕಡಿಮೆ ರಾಬರ್ಟ್ ಸಿವೆಲ್‌ರನ್ನು ಅನುಸರಿಸಿದ್ದಾರೆ. ರಾಜಧಾನಿಯ ವಿನಾಶವನ್ನು ವಿವರಿಸುವಾಗ, ಹಂಪಿಯನ್ನು ಮಹಮ್ಮದೀಯರ ನಾಲ್ಕು ಸಂಯುಕ್ತ ಸೈನ್ಯವು ಇಡೀ ನಗರವನ್ನು ಕೊಳ್ಳೆ

ಹೊಡೆಯಲಾಯಿತು.[೪೬] ಇಡೀ ನಗರವು ಐದು ತಿಂಗಳ ಕಾಲ ಸೂರೆಗೊಳಗಾಯಿತು ಎಂದಿದ್ದಾರೆ.[೪೭] ರಾಜಧಾನಿಯನ್ನು ಧ್ವಂಸಗೊಳಿಸುವ ಕಾರ್ಯ ಹಾಗೂ ಸಂಪತ್ತನ್ನು ದೋಚುವಲ್ಲಿ ಸ್ಥಳೀಯರು ಭಾಗವಹಿಸಿದ್ದರೆಂದು ಅಭಿಪ್ರಾಯ ಪಟ್ಟಿರುವರು.[೪೮] ಮುಂದುವರಿದು ರಾಜಧಾನಿಯನ್ನು ಧ್ವಂಸಗೊಳಿಸಿರುವುದನ್ನು ಈ ರೀತಿಯಾಗಿ ವಿಶ್ಲೇಷಿಸಿದ್ದಾರೆ. ''ಅವರು ಯಾವುದೇ ಕರುಣೆಯನ್ನು ತೋರಿಸದೇ ಜನರನ್ನು ಕೊಚ್ಚಿ ಹಾಕಿದರು. ದೇವಾಲಯಗಳನ್ನು ಮತ್ತು ಅರಮನೆಗಳನ್ನು ಕೆಡವಿದರು. ಅವರು ರಾಜನ ನಿವಾಸದ ಮೇಲೆ ಪ್ರತೀಕಾರವನ್ನು ಸಾಧಿಸಲು ಯಾವ ರೀತಿ ಅತೀ ಅನಾಗರಿಕವಾಗಿ ಅವುಗಳನ್ನು ಭಗ್ನಗೊಳಿಸಿದರೆಂದರೆ ಕೆಲವು ದೊಡ್ಡ ಪ್ರಮಾಣದ ಗೋಡೆಗಳು ಹಾಗೂ ದೇವಾಲಯಗಳನ್ನು ಹೊರತುಪಡಿಸಿ, ಮಿಕ್ಕೆಲ್ಲವನ್ನು ಸಂಪೂರ್ಣವಾಗಿ ನಾಶ ಮಾಡುವ ಮೂಲಕ ಒಂದು ಕಾಲದಲ್ಲಿ ಆ ಸ್ಥಳದಲ್ಲಿ ಅದ್ಭುತವಾದ ಅರಮನೆಯೊಂದಿತ್ತೆಂದು ಹೇಳಲು ಬೇಕಾದ ಅವಶೇಷಗಳು ಮಾತ್ರ ಉಳಿಯುವಂತೆ ಭಗ್ನಾವಶೇಷದ ರಾಶಿಗಳನ್ನು ಮಾಡಿದರು.'' ಅದ್ಭುತವಾಗಿ ಅಲಂಕೃತಗೊಂಡಿದ್ದ ಭಾರಿ ಕಟ್ಟಡಕ್ಕೆ ದೊಡ್ಡದಾಗಿ ಬೆಂಕಿಯನ್ನು ಹಚ್ಚಿ ಅದನ್ನು ವಿರೂಪಗೊಳಿಸಿ ನಾಶಪಡಿಸಿದರು. ಶಕ್ತಿ ಮತ್ತು ಬೆಂಕಿಯ ಸಹಾಯದಿಂದ, ಕೊಡಲಿ ಮತ್ತು ಗುದ್ದಲಿಗಳಿಂದ ಪ್ರತಿದಿನ ತಮ್ಮ ವಿನಾಶಕಾರಿ ಕಾರ್ಯವನ್ನು ಮುಂದುವರೆಸಿ ಎಲ್ಲವನ್ನು ದಾಳಿಮಾಡಿದರು. ಇವರ ಅಭಿಪ್ರಾಯವನ್ನು ಗಮನಿಸಿದಾಗ ಸಿವೆಲ್‌ರು ಉದ್ಧರಿಸಿದ ಮಾತುಗಳನ್ನೇ ಇಲ್ಲಿಯೂ ನೋಡಬಹುದು. ಸಿವೆಲ್‌ರು ಮತೀಯತೆಯನ್ನು ಪ್ರೋತ್ಸಾಹಿಸಿದರೆ ಇವರು ಅದಕ್ಕೆ ನೀರೂಣಿಸಿ ಬೆಳೆಸಿದ್ದಾರೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟವಾದ ಕರ್ನಾಟಕ ಚರಿತ್ರೆ ಸಂಪುಟ-೩ ಸಂಪೂರ್ಣವಾಗಿ ವಿಜಯನಗರ ಸಾಮ್ರಾಜ್ಯದ ಚರಿತ್ರೆಗೆ ಮೀಸಲಾಗಿದೆ. ಈ ಗ್ರಂಥದಲ್ಲಿ ವಿಜಯನಗರದ ರಾಜಧಾನಿಯನ್ನು ಹೇಗೆ ನಾಶಪಡಿಸಲಾಯಿತು ಹಾಗೂ ಅದರ ನಾಶಕ್ಕೆ ಹೊಣೆ ಯಾರು ಅಂತ ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ವಿಜಯಿ ಸೈನ್ಯಗಳು ಪಟ್ಟಣಕ್ಕೆ ಬರುವ ಮೊದಲೇ ಕಳ್ಳಕಾಕರು, ಪಕ್ಕದ ಕಾಡು ಮೇಡುಗಳಲ್ಲಿದ್ದ ದರೋಡೆಗಾರರು ನಗರವನ್ನು ಲೂಡಿ ಮಾಡಿ ಕೈಗೆ ಸಿಕ್ಕದುದ್ದನ್ನೆಲ್ಲಾ ಎತ್ತಿಕೊಂಡು ಹೋದರು. ಲೂಟಿ ಮಾಡಿದವರು ಮುಸ್ಲಿಮರು ಮಾತ್ರವೇ ಅಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಅಲ್ಲದೆ ಮುಂದುವರಿದು ಮುಖ್ಯವಾದ ಸಂಗತಿಯನ್ನು ಇಲ್ಲಿ ಹೇಳಲೇಬೇಕಾಗಿದೆ. ರಾಜಧಾನಿಯಲ್ಲೇ ಶೈವರಿಗೆ ಅಧಿಕ ಪ್ರಮಾಣದ ರಾಜಾಶ್ರಯ ಪಡೆದಿದ್ದ ಶ್ರೀ ವೈಷ್ಣವರ ಮೇಲೆ ಉಂಟಾದ ಮಾತ್ಸರ್ಯ. ಶ್ರೀವೈಷ್ಣವರಿಗೆ ದೊರೆಕಿದ್ದ ಅಪಾರ ಸವಲತ್ತುಗಳು ಹಾಗೂ ದಾನಧರ್ಮಗಳು, ಉಡುಗೊರೆಗಳು ಶೈವರಿಗೆ ಸಹನೆಯಾಗಿರಲಿಲ್ಲ. ರಾಜಧಾನಿಯಲ್ಲಿ ಗೊಂದಲವುಂಟಾಗಿದ್ದಾಗ ಆ ಸಂದರ್ಭವನ್ನು ಉಪಯೋಗಿಸಿಕೊಂಡು ಶೈವರು ಲೂಟಿ ಮಾಡತೊಡಗಿದರು. ಲೂಟಿಗಿಂತ ಹೆಚ್ಚಾಗಿ ಶ್ರೀವೈಷ್ಣವ ದೇವಾಲಯಗಳನ್ನು ನೆಲಸಮ ಮಾಡುವುದರಲ್ಲಿ ಅವರಿಗೆ ಆಸಕ್ತಿಯುಂಟಾಯಿತು. ಇದೇ ಅಭಿಪ್ರಾಯವನ್ನು ವಸುಂಧರಾ ಪಿಲಿಯೋಜಾರವರು

ವ್ಯಕ್ತಪಡಿಸಿದ್ದಾರೆ.[೪೯] ಹಂಪಿಗೆ ಭೇಟಿಕೊಟ್ಟ ಯಾರಿಗೇ ಆದರೂ ಇಂದಿಗೂ ಚೆನ್ನಾಗಿ ತಿಳಿಯುವ ಒಂದು ಅಂಶವೆಂದರೆ, ವಿಷ್ಣು ದೇವಾಲಯಗಳೇ ಅಧಿಕವಾಗಿ ವಿನಾಶಕ್ಕೊಳಗಾದವು ಎನ್ನುವುದು.

ವಿಜಯನಗರ ಸಾಮ್ರಾಜ್ಯದ ಅವನತಿಗೆ ಇವೇ ಕಾರಣಗಳೆಂದು ಕೊಡುವುದು ಅಸಾಧ್ಯ. ಅಳಿಯ ರಾಮರಾಯನ ಛದ್ಮ ಯುದ್ಧವು ಶಾಹಿ ಸುಲ್ತಾನರನ್ನು ಕೆರಳಿಸಿತು. ಅಳಿಯ ರಾಮರಾಯನು ಯುದ್ಧೋತ್ಸಾಹಿಯಾಗಿದ್ದು ನಿರಂತರವಾಗಿ ಯುದ್ಧದಲ್ಲಿ ತೊಡಗಿರುತ್ತಿದ್ದುದು ಹಾಗೂ ಅಳಿಯ ರಾಮರಾಯನ ಮೇಲೆ ಸೇಡು, ಅಸೂಯೆ ಇದ್ದದ್ದು ವಿಜಯನಗರ ಸಾಮ್ರಾಜ್ಯದ ಮೇಲೆ ಯುದ್ಧ ಸಾರಲು ಕಾರಣವಾಯಿತು. ಯುದ್ಧದಲ್ಲಿ ಸೆರೆಸಿಕ್ಕು ಹತನಾದ ಅಳಿಯ ರಾಮರಾಯನ ಸೈನ್ಯವು ಕಂಗೆಟ್ಟು ಓಡಿ ಹೋಯಿತು. ಇದರಿಂದ ಆವೇಶ ಭರಿತರಾಗಿ ವಿಜಯನಗರ ಸಾಮ್ರಾಜ್ಯವನ್ನು ಲೂಟಿ ಮಾಡತೊಡಗಿದರು. ಸುಮಾರು ಎರಡೂವರೆ ಶತಮಾನಗಳವರೆಗೆ ಆಳ್ವಿಕೆ ನಡೆಸಿದ ರಾಜಮನೆತನವು ಪುನಹ ಮೇಲೆ ಏಳಲಾರದಂತಹ ಸ್ಥಿತಿಗೆ ತಲುಪಲು ಈ ರಕ್ಕಸಗಿ ತಂಗಡಿಗೆ ಯುದ್ಧವು ಕಾರಣವಾಯಿತು. ಈ ಸಾಮ್ರಾಜ್ಯದ ಲೂಟಿಗೆ ಹಾಗೂ ರಾಜಧಾನಿಯಾದ ಹಂಪಿಯನ್ನು ವಿನಾಶಗೊಳಿಸುವಲ್ಲಿ ಸ್ಥಳೀಯರು ಪ್ರಮುಖವಾಗಿ ಕಾರಣರಾದರು. ಜೊತೆಗೆ ಇಲ್ಲಿಯ ಹಿಂದೂ ಧರ್ಮದಲ್ಲಿದ್ದ ಶೈವರಿಗೂ ಮತ್ತು ವೈಷ್ಣವರಿಗೂ ಇದ್ದ ವೈರತ್ವವು ಈ ಕೆಲಸ ಮಾಡಿತು ಎನ್ನಬಹುದು.

ವಿಜಯನಗರ ಸಾಮ್ರಾಜ್ಯದ ಅವನತಿಯು ದಕ್ಷಿಣ ಭಾರತದ ರಾಜಕೀಯ ಸ್ಥಿತಿಯ ಮೇಲೆ ಹಾಗೂ ಪೋರ್ಚುಗೀಸ್ ವ್ಯಾಪಾರ ವಹಿವಾಟಿನ ಮೇಲೆ ಬೀರಿದ ಪ್ರಭಾವ ಅಪಾರ. ದಕ್ಷಿಣ ಭಾರತದ ಕರಾವಳಿಯ ಮೇಲೆ ಹಿಡಿತ ಸಾಧಿಸಿದ ಪೋರ್ಚುಗೀಸರ ವ್ಯಾಪಾರವು ಕ್ಷೀಣವಾಯಿತು. ರಾಜಕೀಯವಾಗಿ ಅನೇಕ ಮಹತ್ತ್ವದ ಘಟನೆಗಳು ಸಂಭವಿಸಿದವು. ಮೈಸೂರಿನ ಒಡೆಯರು, ಕೆಳದಿಯ ನಾಯಕರು, ಜಿಂಜಿ, ತಾಂಜಾವೂರಿನ, ಮಧುರೈಯ ನಾಯಕರು ಸ್ವತಂತ್ರರಾದರು. ಸಿವೆಲ್‌ರು ಇದನ್ನು ತಮ್ಮ 'ಸ್ಕೇಚ್ ದ ಡೈನಾಸ್ಟಿಸ್ ಆಫ್ ಸದರ್ನ್ ಇಂಡಿಯಾ'ದಲ್ಲಿ ಚರ್ಚಿಸಿದ್ದಾರೆ. ೧೫೬೭ರಲ್ಲಿ ಹಂಪೆಗೆ ಭೇಟಿಕೊಟ್ಟಿದ್ದ ಇಟಲಿಯ ಸೀಜರ್ ಫೆಡ್ರಿಕ್ ಎಂಬ ವ್ಯಾಪಾರಿ ಹಂಪಿಯ ಬಗ್ಗೆ ಈ ರೀತಿಯಾಗಿ ಉಲ್ಲೇಖಿಸಿದ್ದಾರೆ. "ವಿಜಯನಗರ ಪೂರ್ತಿನಾಶವಾಗಿಲ್ಲ ಮನೆಗಳು ಮಂದಿರಗಳು ಹಾಗೆಯೇ ಇವೆ. ಆದರೆ ವಾಸಿಸುವರು ಯಾರು ಇಲ್ಲ ಅದು ವನ್ಯ ಮೃಗಗಳ ತಾಣವಾಗಿದೆ." ಮುಂದುವರಿದು ಇಲ್ಲಿ ವ್ಯಾಪಾರ ವಹಿವಾಟು ನಡೆಯುತ್ತಿತ್ತು ಎಂದಿದ್ದಾರೆ. ಈ ಸಾಮ್ರಾಜ್ಯವನ್ನು ಪುನಃ ಅದೇ ಸ್ಥಿತಿಗೆ ತರಲು ಪ್ರಯತ್ನಿಸಿ ವಿಫಲರಾದ ಬಗ್ಗೆ ಉಲ್ಲೇಖಗಳನ್ನು ನೋಡಬಹುದು.

ರಾಬರ್ಟ್ ಸಿವೆಲ್‌ರು ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ಕಟ್ಟಿಕೊಡುವ ನೆಪದಲ್ಲಿ ಕೋಮುಭಾವನೆಯನ್ನು ಬಿತ್ತಿದ್ದಾರೆ. ಈ ಯುದ್ಧವು ಹಿಂದೂ ಮತ್ತು ಮುಸ್ಲಿಮರ ಮಧ್ಯೆ ನಡೆಯಿತೆಂದು, ಹಿಂದೂ ಸೈನ್ಯದಲ್ಲಿದ್ದ ಇಬ್ಬರು ಸೈನಿಕ ದಂಡಾಳುಗಳಿಬ್ಬರು ಪಕ್ಷ ಬದಲಾಯಿಸಿದರೆಂಬ ಹಾಗೂ ಸೈನ್ಯದ

ಒಳಸುಳಿವುಗಳನ್ನು ನೀಡಿದ್ದರೆಂದು ಅಭಿಪ್ರಾಯಪಟ್ಟಿರುವರು. ನೈಜಸಂಗತಿ ಎಂದರೆ ರಾಜಧಾನಿಯಲ್ಲಿ ಪಕ್ಷಪಾತ ಮಾಡಲಾರದಷ್ಟು ಸವಲತ್ತುಗಳನ್ನು ಮುಸ್ಲಿಮರಿಗೆ ಒದಗಿಸಿದ್ದರು. ಮಸೀದಿಯ ನಿರ್ಮಾಣವು, ಹಿಂದೂ ಮತ್ತು ಮುಸ್ಲಿಮ್ ಶೈಲಿಯ ಕಟ್ಟಡಗಳನ್ನು ನಿರ್ಮಿಸಿದ ಉದಾಹರಣೆಗಳು ಇಂದಿಗೂ ಕಣ್ಮರೆಯಾಗದೇ ಉಳಿದಿವೆ.

## ೩.೪. ಆಕರಗಳ ಸ್ವರೂಪ ಹಾಗೂ ವಿಶ್ಲೇಷಣೆ

ಚರಿತ್ರೆಯ ನಿರ್ಮಾಣದಲ್ಲಿ ಆಕರಗಳು ಪ್ರಮುಖ ಪಾತ್ರನಿರ್ವಹಿಸುತ್ತವೆ. ಆಕರಗಳು ದೊರೆ ಮಾತ್ರಕ್ಕೆ ಚರಿತ್ರೆಯು ನಿರ್ಮಿತವಾಗುವುದಿಲ್ಲ. ಆಕರಗಳನ್ನು ವಿಶ್ಲೇಷಣೆಗೆ, ವಿಮರ್ಶೆಗೆ ಒಳಪಡಿಸುವುದು ಚರಿತ್ರೆಕಾರನ ಕರ್ತವ್ಯ. ದೊರೆತ ಎಲ್ಲಾ ಆಕರಗಳಿಂದ ಚರಿತ್ರೆಯನ್ನು ನಿರ್ಮಿಸುವುದು ಕಷ್ಟ. ದೊರೆತಿರುವ ಆಕರಗಳು ಚರಿತ್ರೆಯ ನಿರ್ಮಾಣಕ್ಕೆ ಯೋಗ್ಯವೇ ಅಲ್ಲವೆ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸುವುದು ಅಗತ್ಯ ಹಾಗೂ ಅನಿವಾರ್ಯವಾದ ಸಂಗತಿ. ಆಕರಗಳಿಲ್ಲದೆ ನಿರ್ಮಿತವಾದ ಚರಿತ್ರೆ, ಬೋಳು ಕವಿತೆ, ಕತೆಯಾಗಿ ಮಾರ್ಪಡುತ್ತದೆ. ಚರಿತ್ರೆಯು ರಚನೆಯಾದ ನಂತರ ಆಕರಗಳ ವಿಶ್ಲೇಷಣೆಯು ಅಷ್ಟೇ ಮಹತ್ತ್ವದ ಕಾರ್ಯವಾಗಿದೆ. ಅಂತೆಯೇ ಚರಿತ್ರೆಯ ರಚನೆಯಲ್ಲಿ ಬಳಕೆಯಾದ ಆಕರಗಳು ಎಷ್ಟು ಸಮಂಜಸವಾಗಿವೆ ಹಾಗೂ ನಿಷ್ಪಕ್ಷಪಾತವಾಗಿ ಮತ್ತು ಪೂರ್ವಗ್ರಹಪೀಡಿತವಾಗಿ ರಚಿಸಲಾಗಿವೆಯೇ ಎಂದು ತಿಳಿಯುವುದು ಸೂಕ್ತ. ಆಕರಗಳನ್ನು ತಿರುಚಿ ಬರೆದಿರುವುದನ್ನು ಪಕ್ಷಪಾತ ಹಾಗೂ ಪೂರ್ವಗ್ರಹಪೀಡಿತವಾಗಿ ಬಳಸಿರುವುದನ್ನು ಬ್ರಿಟಿಷರ ಬರೆಹಗಳಲ್ಲಿ ನೋಡಬಹುದು. ಇವರ ಬರವಣಿಗೆಯ ಉದ್ದೇಶವು ಸಹ ಇದೇ ಆಗಿರಬಹುದು. ಪೂರ್ವಗ್ರಹ ಪೀಡಿತರಾಗಿ ಭಾರತೀಯ ಇತಿಹಾಸ, ಸಂಸ್ಕೃತಿಯನ್ನು ಟೀಕಿಸುವ ಉದ್ದೇಶದಿಂದಲೇ ಅಂತಹ ಆಕರಗಳನ್ನು ಬಳಸಿಕೊಂಡಿರುವರು. ಇವು ನೈಜತೆಗೆ ಹಾಗೂ ವಾಸ್ತವಕ್ಕೆ ಎಷ್ಟು ಹತ್ತಿರದಲ್ಲಿದೆ ಎಂಬುದರ ಕುರಿತು ಚಿಂತಿಸುವ ಅಗತ್ಯವಿದೆ. ಇಂತಹ ಕೃತಿಗಳಲ್ಲಿ ರಾಬರ್ಟ್ ಸಿವೆಲ್‌ರ 'ಎ ಫರ್‌ಗಾಟನ್ ಎಂಪೈರ್' ಹೊರತಾಗಿಲ್ಲ.

ಕೇವಲ ರಾಜಕೀಯ ಚರಿತ್ರೆಗೆ ಮೀಸಲಾದ ಈ ಕೃತಿಯು, ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ಕಟ್ಟಿಕೊಟ್ಟ ಮೊದಲ ಕೃತಿಯಾಗಿದೆ. ರಾಬರ್ಟ್ ಸಿವೆಲ್‌ರು ತಮ್ಮ ಬ್ರಿಟಿಷರ ನೀತಿಗನುಸಾರವಾಗಿ ಈ ಕೃತಿಯನ್ನು ರಚಿಸಿರುವರು. ವಿಜಯನಗರ ಸಾಮ್ರಾಜ್ಯವು ಕರ್ನಾಟಕ ಸಾಂಸ್ಕೃತಿಕ ಚರಿತ್ರೆಗೆ ತನ್ನದೇ ಆದ ಕೊಡುಗೆ ನೀಡಿದೆ. ಇಂತಹ ಚರಿತ್ರೆಯ ರಚನೆಗೆ ಬಳಸಿಕೊಂಡಿರುವ ಆಕರಗಳ ವಿಶ್ಲೇಷಣೆ ಅತ್ಯಾವಶ್ಯಕ. ಹೆಚ್ಚಾಗಿ ವಿದೇಶಿ ಬರವಣಿಗೆಗಳಿಂದ ಹಾಗೂ ವಿದೇಶಿ ಯಾತ್ರಿಗಳಿಂದ, ರಚಿಸಲಾದ ಕೃತಿಗಳಿಂದ, ಆಯ್ದ ವಿಷಯವು ಆ ಕೃತಿಯ ಜೀವಾಳವಾಗಿದೆ. ಸಿವೆಲ್‌ರು ಕೇವಲ ಸ್ಥಳೀಯರ ಮಾಹಿತಿ, ಕ್ಷೇತ್ರಕಾರ್ಯದ ಮೂಲಕ ನೋಡಿದ, ತಿಳಿದ, ಕೇಳಿದ ಮಾಹಿತಿಯನ್ನು ಸಂಗ್ರಹಿಸಿದ್ದಾರೆ.

ಇದಕ್ಕಾಗೇ ಇವರನ್ನು ನಿಯೋಜಿಸಿದಂತಿದ್ದು ಹಾಗೂ ದಕ್ಷಿಣ ಭಾರತದ ಚರಿತ್ರೆಯನ್ನು ರಚಿಸುವ ಕಾರ್ಯಕ್ಕೆ ಇವರನ್ನು ನೇಮಿಸಲಾಗಿತ್ತು. ಈ ಕೃತಿಯಲ್ಲಿ ಹೆಚ್ಚಾಗಿ ಬಳಸಿಕೊಂಡಿರುವ ಆಕರಗಳೆಂದರೆ ಪ್ರೋರ್ಚುಗೀಸರ ಬರಹಗಳ ದಾಖಲೆಗಳು. ಮೇಲಾಗಿ ಸಿವೆಲ್‌ರು ರಚಿಸಿದ 'ಸ್ಕೆಚ್ ದಿ ಡೈನಾಸ್ಟಿಸ್ ಆಫ್ ಸದರ್ನ್ ಇಂಡಿಯಾ', ಬಿ.ಎಲ್.ರೈಸ್‌ರ ಎಫಿಗ್ರಾಫಿ ಆಫ್ ಕರ್ನಾಟಿಕಾ, ಹುಲ್ಷ್‌ರ ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ ಹಾಗೂ ಇತರೆ ಇಂಗ್ಲೀಷ್ ಅಥವಾ ಬ್ರಿಟಿಷ್ ಲೇಖಕರ ಕೃತಿಗಳನ್ನು ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ.

ರಾಬರ್ಟ್ ಸಿವೆಲ್‌ರು ಬಳಸಿಕೊಂಡಿರುವ ಆಕರಗಳ ಕುರಿತು ಈ ರೀತಿಯಾಗಿ ವಿಶ್ಲೇಷಿಸಿದ್ದಾರೆ. ಬ್ಯಾರೋಸ್, ಕೌಟೋ, ಕೊರಿಯಾ ಮುಂತಾದ ಜಾಗರೂಕ ಮಧ್ಯಯುಗದ ಇತಿಹಾಸಕಾರರು ಸಂಕಲಿಸಿದ ಸಾರಾಂಶಗಳು ಒಂದು ಮೂಲ. ಇವರೆಲ್ಲ ಒಂದು ಮಿತಿಯವರೆಗೆ ದೇಶದ ಸಾಮಾನ್ಯ ಸ್ಥಿತಿಗತಿಗಳಲ್ಲಿ ಆಸಕ್ತರಾಗಿದ್ದರೂ ಸಹ ಐರೋಪ್ಯ ಓದುಗರ ತಿಳಿವಳಿಕೆಗೋಸ್ಕರ ಐರೋಪ್ಯ ವಸಾಹತುಗಾರರ ಚಟುವಟಿಕೆಗಳಿಗೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಂಡರು. ಇನ್ನೂ ಒಂದು ಆಂಶಿಕ ಮೂಲವೆಂದರೆ ಹೆಚ್ಚಾಗಿ ತಮ್ಮ ರಾಜರ ಅಸಂತುಷ್ಟಿಯ ಭಯದಿಂದ ಬರೆದ ಆ ಕಾಲದ ಕೆಲವು ಮಹಮ್ಮದೀಯ ಲೇಖಕರ ದಿನಚರಿಗಳು. ಇನ್ನೊಂದು ಆಂಶಿಕ ಮೂಲವೆಂದರೆ ಗುಡಿಗಳಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಭೂದತ್ತಿಗಳನ್ನು ದಾಖಲಿಸುವ ಹಿಂದೂ ಶಾಸನಗಳು, ಈ ದಸ್ತಾವೇಜುಗಳನ್ನು ಸರಕಾರಿ ಪತ್ರಗಳೆಂದು ನೋಡಿದಾಗ ಅವು ಕೆಲವು ಹೆಸರುಗಳು ಮತ್ತು ತೇದಿಗಳನ್ನುಳಿದು ಬೇರೆ ಏನನ್ನೂ ನೀಡುವುದಿಲ್ಲ.[೨೦] ಇನ್ನು ಮುಂದೆ ರಚಿತವಾಗಬಹುದಾದ ವಿಜಯನಗರ ಸಾಮ್ರಾಜ್ಯದ ಕ್ರಮಬದ್ಧ ಇತಿಹಾಸಕ್ಕೆ ಅಡಿಪಾಯವಾಗುವ ರೀತಿಯಲ್ಲಿ ಅವುಗಳನ್ನು ಸಂಯೋಜಿಸಲು ಪ್ರಯತ್ನಿಸಿರುವೆ, ಎಂದಿರುವ ಸಿವೆಲ್‌ರು ಅನತಿ ಕಾಲದಲ್ಲಿ ಶುಷ್ಕ ಅಸ್ಥಿಗಳಲ್ಲಿ, ಜೀವ ತುಂಬಬಲ್ಲ ಪ್ರತಿಭಾವಂತ ಲೇಖಕನೊಬ್ಬ ದಕ್ಷಿಣ ಭಾರತದ ಸಂಪೂರ್ಣ ಇತಿಹಾಸವನ್ನು ಬರೆಯುವನೆಂಬ ಬಗೆಗೆ ನನಗೆ ಸಂದೇಹವಿಲ್ಲ. ಆದರೆ ಅದುವರೆಗೆ ಅಸ್ಥಿಗಳನ್ನೇ ಸಂಗ್ರಹಿಸಿ ಜೋಡಿಸದೆ ಗತ್ಯಂತರವಿಲ್ಲ. ಅಸ್ಥಿಪಂಜರದ ಮುಖ್ಯ ಭಾಗಗಳನ್ನಾದರೂ ಜೋಡಿಸುವುದು ನನ್ನ ಕಾಯಕವಾಗಿದೆ ಎಂದು ವಿವರಿಸಿದ್ದಾರೆ.

ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದ ಮೇಲೆ ಐರೋಪ್ಯವ್ಯಾಪಾರಿಗಳು, ಯಾತ್ರಿಕರು ಭಾರತಕ್ಕೆ ಆಗಮಿಸಿದರು. ಭಾರತಕ್ಕೆ ಬಂದ ಅನೇಕ ಯಾತ್ರಿಕರು ವಿಜಯನಗರ ಸಾಮ್ರಾಜ್ಯ ಅಥವಾ ನರಸಿಂಗನ[೨೧] ಆಸ್ಥಾನಕ್ಕೆ ಭೇಟಿ ನೀಡುತ್ತಿದ್ದು, ಇವರಲ್ಲಿ ಹೆಚ್ಚಾಗಿ ಭೇಟಿ ನೀಡಿದವರೆಂದರೆ ಪೋರ್ಚುಗೀಸರು. ಇದಕ್ಕೆ ಕಾರಣವೆಂದರೆ ಅವರೊಂದಿಗೆ ವ್ಯಾಪಾರ ವಹಿವಾಟು, ಉತ್ತಮ ಮಟ್ಟದ ಕುದುರೆ ಆಮದು ಮಾಡಿಕೊಳ್ಳುತ್ತಿದ್ದುದು ಹಾಗೂ ಸಾಮ್ರಾಜ್ಯದ ಸಮೀಪವೇ ಪೋರ್ಚುಗೀಸರ ರಾಜಧಾನಿ ಗೋವೆಯು ಇದ್ದದ್ದು. ಪೋರ್ಚುಗೀಸರಲ್ಲಿ ಡೋಮಿಂಗ್ ಪಾಯಸ್, ಪೆರ್ನಾವ್ ನ್ಯೂನಿಚ್, ಡುರೆಂಟ್ ಬಾರ್ಬೊಸ್,

ಲೊಡೊವಿಕೊ ದಿ ವರ್ತೆಮಾ, ಟಾಮ್ ಪಿರೆಸ್‌ರು ಪ್ರಮುಖರು. ಅದೇ ರೀತಿ ಇಟಲಿಯ ನಿಕೋಲೊ ಡಿ ಕೌಂಟಿ, ಸೀಜರ್ ಫೆಡ್ರಿಕ್, ರಷ್ಯಾದ ಅಥನೇಶಿಯಸ್ ನಿಕೆಟಿನ್, ಪರ್ಷಿಯಾದ ಅಬ್ದುಲ್ ರಜಾಕ್‌ರ ಬರೆಹಗಳನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ. ಅಲ್ಲಲ್ಲಿ ಸ್ಥಳೀಯ ಸಾಹಿತ್ಯಕ ಆಕರಗಳನ್ನು, ಸಿವೆಲ್ ರು ರಚಿಸಿದ 'ಸ್ಕೆಚ್ ದಿ ಡೈನಾಸ್ಟಿಸ್ ಆಫ್ ಸದರ್ನ್ 'ಇಂಡಿಯಾ' ಹಾಗೂ ಬ್ರಿಟಿಷ್ ಬರಹಗಳಿಗೆ ಹೆಚ್ಚು ಮೊರೆ ಹೋಗಿರುವರು. ಅದೇ ರೀತಿಯಾಗಿ ಮುಸ್ಲಿಮ್ ಶಾಹಿ ಸುಲ್ತಾನರ ಬಗ್ಗೆ ತಿಳಿಯಲು ಫೆರಿಸ್ತಾರನ್ನು ಆಶ್ರಯಿಸಿದ್ದಾರೆ.

ಇವರು ವಿಜಯನಗರಕ್ಕೆ ಏಕಕಾಲದಲ್ಲಿ ಭೇಟಿ ನೀಡಿರಲಿಲ್ಲ ಹಾಗೂ ಅವರು ಕೂಡ ತಿಳಿದ ಕೇಳಿದ ವಿಷಯವು ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುತ್ತಿತ್ತು. ಇವರ ಮಾಹಿತಿಯಲ್ಲಿ ಭಾರತದ ಸಾಂಸ್ಕೃತಿಕ ಚರಿತ್ರೆ ಸಾಮಾಜಿಕ, ರಾಜಕೀಯ ಅಂಶಗಳು ಸೇರಿಕೊಳ್ಳುತ್ತಿದ್ದವು. ಪುಸ್ತಕದ ಆರಂಭದಲ್ಲಿ ಹೆಚ್ಚಾಗಿ ಪೋರ್ಚುಗೀಸರ ಆಕರಗಳನ್ನು ಬಳಸಿಕೊಂಡಿದ್ದಾರೆ. ಅಂತೆಯೇ ಶಾಸನಗಳು, ಫೆರಿಸ್ತಾರ ಬರವಣಿಗೆ ಹಾಗೂ ನ್ಯೂನಿಜ್ ರ ಲೇಖನಗಳಿಗೆ ಮೊರೆ ಹೋಗಿದ್ದಾರೆ. ಡೋಮಿಂಗ್ ಪಾಯಸ್ ಹಾಗೂ ಪೆರ್ನಾವ ನ್ಯೂನಿಜ್‌ರ ಪ್ರವಾಸದ ಕಥೆಯಾದ 'ಡೋಸ್ ರೈಸ್ ದ ಬಿಸ್ನಾಗ' ಇದು ಪೋರ್ಚುಗೀಸ್ ಭಾಷೆಯಲ್ಲಿದ್ದು ೧೮೯೭ ಪ್ರಕಟವಾಗಿದೆ.[೫೨] ಕೃಷ್ಣದೇವರಾಯ ಹಾಗೂ ಅನಂತರ ಅರಸರ ಬಗ್ಗೆ ತಿಳಿಯಲು ಬಹು ಉಪಯುಕ್ತವಾದ ಆಕರಗ್ರಂಥವಾಗಿದೆ. ಇದನ್ನು ಸಿವೆಲ್‌ರು ಹೆಚ್ಚಾಗಿ ಬಳಸಿಕೊಂಡಿದ್ದಾರೆ. ಶಾಹಿ ಸುಲ್ತಾನರು ಮತ್ತು ವಿಜಯನಗರದ ಅರಸರ ಸಂಬಂಧ ತಿಳಿಯಲು ಫೆರಿಸ್ತಾರ ಬರಹಗಳನ್ನು ಮತ್ತು ಬ್ರಿಟಿಷ್ ಲೇಖಕರಾದ ಕರ್ನಲ್ ಬ್ರಿಗ್ಸ್, ಈಲಿಯೇಟ್ ಮುಂತಾದವರ ಬರೆಹಗಳನ್ನು ಅವಲಂಬಿಸಿದ್ದಾರೆ.

ಸಿವೆಲ್‌ರು ಉದ್ಧರಿಸುವ ಯಾವುದೇ ದಾಖಲೆಯಲ್ಲೂ ಮತೀಯತೆಯನ್ನು ಬೆಂಬಲಿಸುವ ಉದಾಹರಣೆಗಳು ಇಲ್ಲ. ವಿಜಯನಗರದ ವಿವಿಧ ಅರಸು ಮನೆತನಗಳಲ್ಲಿ ಅಧಿಕಾರಕ್ಕಾಗಿ ನಡೆದ ಕುಟಿಲೋಪಾಯ, ಷಡ್ಯಂತ್ರ ಕೊಲೆ ಮುಂತಾದವುಗಳ ಬಗ್ಗೆ ಹೇಗೆ ವಿವರಗಳಿವೆಯೋ ಹಾಗೆಯೇ ಶಾಹಿ ಅರಸರಲ್ಲಿ ಇದನ್ನು ನೋಡಬಹುದು. ಉದಾ. ಬಿಜಾಪುರದ ಆದಿಲ್‌ಶಾಹನಿಗೆ ಹಾಗೂ ಅಹಮ್ಮದ್ ನಗರದ ನಿಜಾಮ್ ಶಾಹಿಗಳಿಗೆ ಆಗದಿರುವುದನ್ನು ಚಿತ್ರಿಸಿದ್ದಾನೆ. ಇವರು ಮುಂದುವರಿದು ಶಾಹಿ ಅರಸರ ಮಧ್ಯೆ ನಡೆಯುವ ಯುದ್ಧದ ವಿವರಣೆಯನ್ನು ನೀಡಿದ್ದಾರೆ. ಕೇವಲ ವಿಜಯನಗರದ ಚರಿತ್ರೆಗೆ ಮಾತ್ರ ಇದನ್ನು ಸೀಮಿತಗೊಳಿಸಿಕೊಂಡಿಲ್ಲ. ರಾಜ್ಯಗಳು, ಸಾಮ್ರಾಜ್ಯಗಳು ಪತನವಾಗುವುದಕ್ಕೆ ಕಾರಣವಾದ ಅಂಶಗಳ ಬಗ್ಗೆಯೂ ಕ್ಷಕಿರಣ ಬೀರುವ ಸಿವೆಲ್ಲರ ಆಕರಗಳಂತೂ ಬಹಳ ಮುಖ್ಯ.

ಸಿವೆಲ್‌ರಿಗೆ ಈ ಸಾಮ್ರಾಜ್ಯದ ಚರಿತ್ರೆಯ ರಚನೆಗೆ ನೆರವಾಗುವ ಆಕರಗಳು ಮಧ್ಯಕಾಲೀನ ಭಾರತದಲ್ಲಿ ರಚನೆಯಾದವು. ಇವು ಶಾಸನಾಧಾರಗಳು, ವಿದೇಶಿ ಯಾತ್ರಿಕರ ಕಥಾನಕಗಳನ್ನು ಮುಂತಾದವು ಗಳನ್ನು ದುಡಿಸಿಕೊಂಡಿದ್ದಾರೆ. ಆಕರಗಳನ್ನು ಬಳಸಿಕೊಳ್ಳುವಾಗ ವಿವಾದಾತ್ಮಕ ದಿನಾಂಕ(ಇಸ್ವಿ) ವರ್ಷಗಳನ್ನು

ಚರ್ಚಿಸುವಾಗ ರೈಸ್‌ರ ಹಾಗೂ ಹುಲ್ಷ್‌ರ ಶಾಸನ ಸಂಪುಟಗಳನ್ನು ಬಳಸಿಕೊಂಡಿರುವರು. ವಿಜಯನಗರದ ಸಾಮ್ರಾಜ್ಯದ ಅವನತಿಯ ಕುರಿತು ಮಾತನಾಡುವಾಗ ಪೋರ್ಚುಗೀಸರ ಹಾಗೂ ಇಟಲಿಯ ವ್ಯಾಪಾರಿಯಾದ ಸೀಜರ್ ಫೆಡ್ರಿಕ್‌ಗೆ ಮೊರೆ ಹೋಗಿದ್ದಾರೆ. ಸೀಜರ್ ಫೆಡ್ರಿಕ್‌ರ ಬರೆಹಗಳು ಸ್ವಲ್ಪ ಅತಿಶಯೋಕ್ತಿ ಎನಿಸುವವು. ಸತಿಪದ್ಧತಿಯ ಆಚರಣೆ, ಹಬ್ಬ ಹರಿದಿನಗಳ ಉಲ್ಲೇಖವನ್ನು ನೋಡಬಹುದು. ಅಂತೆಯೇ ಇವರು ವಿಜಯನಗರ ಸಾಮ್ರಾಜ್ಯದಲ್ಲಿ ಇನ್ನೂ ವ್ಯಾಪಾರ ವಹಿವಾಟು ನಡೆಯುತ್ತಿದ್ದು ಆದರೆ ಇಲ್ಲಿ ವಾಸಿಸುವ ಜನರೇ ಇರಲಿಲ್ಲ ಅಲ್ಲಿನ ಮನೆಗಳು ಮಂದಿರಗಳು ಗುಹೆಗಳಂತಿದ್ದವು ಎಂದು ಅಭಿಪ್ರಾಯಪಟ್ಟಿದ್ದಾರೆ.

## ೩.೫. ಪಠ್ಯದ ಸ್ವರೂಪ ಹಾಗೂ ವಿಶ್ಲೇಷಣೆ

ಚರಿತ್ರೆಯನ್ನು ಒಳಗೊಂಡ ಪುಸ್ತಕಗಳು ಭಾರತ ಹಾಗೂ ಕರ್ನಾಟಕದಾದ್ಯಂತ ಇಂದಿಗೂ ಪ್ರಕಟಣೆಯನ್ನು ಕಾಣುತ್ತಿವೆ. ಅವು ರಾಜರ ಚರಿತ್ರೆ, ಸಾಮ್ರಾನ್ಯ ವರ್ಗದ ಚರಿತ್ರೆ, ಜನರ ಚರಿತ್ರೆ, ಮಹಿಳಾ ಚರಿತ್ರೆ, ಕಾರ್ಮಿಕರ ಚರಿತ್ರೆಯೇ ಆಗಿರಬಹುದು. ಕರ್ನಾಟಕದಲ್ಲಿ ಇಂತಹ ಪರಂಪರೆಯು ಬ್ರಿಟಿಷರ ಕಾಲದಲ್ಲೇ ವಿಪುಲವಾಗಿ ಬೆಳೆಯಿತು. ಕರ್ನಲ್ ಮೆಕೆಂಜಿ, ಮಾರ್ಕ್‌ವಿಲ್ಕ್ಸ್, ಬಿ.ಎಲ್.ರೈಸ್ ಮೊದಲಾದವರು ಕನ್ನಡ ನಾಡಿನ ಶಾಸನ, ಸ್ಥಳೀಯರ ಕಥನಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಹೊರತಂದರು. ಅವುಗಳಿಗೆ ಅವರದೇ ಹೆಸರಿನಿಂದ ಕರೆಯಲಾಯಿತು. ಮೆಕೆಂಜಿಯ ಕೈಫಿಯತ್ತು, ರೈಸ್‌ರ ಶಾಸನ ಸಂಪುಟಗಳು ಎಂದು ಹೆಸರು ಪಡೆದವು. ಇದಕ್ಕೆ ಸಾಮ್ರಾಜ್ಯಗಳ, ರಾಜರ ಚರಿತ್ರೆಯನ್ನು ಸೇರಿಸಿ ಒಂದು ಪುಸ್ತಕ ರಚಿಸುವ ಹಾಗೂ ಅದನ್ನು ಅಧ್ಯಯನಕ್ಕೆ ಒಳಪಡಿಸುವ ಕ್ರಮವೊಂದು ಬ್ರಿಟಿಷರಿಂದಲೇ ಪ್ರಾರಂಭವಾಯಿತು. ಇಂತಹ ಕೃತಿಗಳಲ್ಲಿ ರಾಬರ್ಟ್ ಸಿವೆಲ್‌ರ 'ಎ ಫರ್‌ಗಾಟನ್ ಎಂಪೈರ್' ಒಂದಾಗಿದೆ. ವಿಜಯನಗರ ಸಾಮ್ರಾಜ್ಯ ಎಂದಾಕ್ಷಣ ಇದಕ್ಕೆ ಹಿಂದೂ ಧರ್ಮವನ್ನು ಪುನರುಜ್ಜೀವನ ಗೊಳಿಸಲೆಂದೇ ಹುಟ್ಟಿದ ಸಾಮ್ರಾಜ್ಯ ಎಂಬ ಅಭಿಪ್ರಾಯವುಂಟು. ಇದಕ್ಕೆ ಕೊಡುವ ಕಾರಣಗಳೆಂದರೆ ೧ ದಕ್ಷಿಣ ಬಾರತದಲ್ಲಿ ಹಿಂದೂ ಧರ್ಮದ ಮೇಲೆ ಅನ್ಯಧರ್ಮವು ದಾಳಿ ಮಾಡುತ್ತದೆ ಎಂಬ ಭಾವನೆ ೨ ದಕ್ಷಿಣ ಭಾರತದ ಎಲ್ಲಾ ಹಿಂದೂ ರಾಜ್ಯಗಳು ಅವನತಿಯತ್ತ ಸಾಗಲು ಮುಸ್ಲಿಂರ ದಾಳಿಗಳೇ ಕಾರಣ ಅದಕ್ಕೆ ವಿರುದ್ಧವಾಗಿ ಈ ಸಾಮ್ರಾಜ್ಯ ತಲೆಯೆತ್ತಿದ್ದು ೩ ವೈಭವದ ವರ್ಣನೆಗಳು. ಆದರೆ ಇದಕ್ಕೆ ವ್ಯತಿರಿಕ್ತವಾದ ಹೇಳಿಕೆಗಳನ್ನು ಹಲವು ಚರಿತ್ರೆಕಾರರು ನೀಡಿರುವುದು ಉಲ್ಲೇಖನೀಯವಾದುದು.

ರಾಬರ್ಟ್ ಸಿವೆಲ್‌ರ ಈ ಕೃತಿಯು ವಸಾಹತುಶಾಹಿ ಸಿದ್ಧಾಂತದ ನೆಲೆಗಳಲ್ಲಿ ಬಂದಿರುವುದನ್ನು ಗಮನಿಸಬಹುದು. ದಕ್ಷಿಣ ಭಾರತದ ಚರಿತ್ರೆಯನ್ನು ಬರೆಯುವ ಉದ್ದೇಶದಿಂದಲೇ ಇವರನ್ನು ನಿಯೋಜಿಸಲಾಗಿತ್ತು. ಈ ಕೃತಿಯನ್ನು ಹೆಚ್ಚಾಗಿ ರಾಜಕೀಯ ಚರಿತ್ರೆಗೆ ಮಾತ್ರ ಸೀಮಿತಗೊಳಿಸಿಕೊಂಡಿದ್ದಾರೆ. ಆದರೆ ಅಲ್ಲಲ್ಲಿ ಸತಿಪದ್ಧತಿ ಹಬ್ಬ ಹರಿದಿನಗಳ ವಿವರಣೆಯನ್ನು ನೋಡಬಹುದು. ಸಿವೆಲ್‌ರು ಈ

ಕೃತಿಯಲ್ಲಿ ಯುರೋಪ್ ದೇಶದ ವ್ಯಾಪಾರಿಗಳಾದ ಪೋರ್ಚುಗೀಸರು, ಇಟಲಿ, ರಷ್ಯಾ, ಪರ್ಷಿಯಾ, ಇವರ ಹಾಗೂ ವಿಜಯನಗರಕ್ಕೆ ಭೇಟಿ ನೀಡಿದ ವಿದೇಶಿ ಯಾತ್ರಿಕರಿಂದ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಸಂಗಮರ ಕಾಲದ ಚರಿತ್ರೆಗೆ ಸಂಬಂಧಿಸಿದಂತೆ ಹೆಚ್ಚಾಗಿ ಮುಸ್ಲಿಮ್ ಲೇಖಕರನ್ನು ಅವಲಂಬಿಸಿದ್ದಾರೆ. ಇವರು ರಾಜರ, ಸುಲ್ತಾನರ ಅಸಂತುಷ್ಟಿಯ ಭಯದಿಂದ ಬರೆದಿದ್ದು, ಇಲ್ಲಿ ರಾಜಾಶ್ರಯ ಪಡೆಯಲು ಅನಿವಾರ್ಯವಾಗಿ ಆಶ್ರಿತ ರಾಜನನ್ನು ಹೊಗಳಲೇ ಬೇಕಾಗುತ್ತದೆ. ವಿರೋಧಿ ಅರಸರನ್ನು ತೆಗಳಿ ಬರೆಯಲೇ ಬೇಕಾದ ಪ್ರಸಂಗವಾಗಿರುತ್ತದೆ. ಇವರು ಮುಂದುವರಿದು ಸ್ವಲ್ಪಮಟ್ಟಿಗೆ ಶಾಸನಾಧಾರಗಳು ಹಾಗೂ ಸಾಹಿತ್ಯಿಕ ಆಧಾರಗಳನ್ನು ಬಳಸಿಕೊಂಡಿದ್ದಾರೆ.

ಅನಿಲಾ ವರ್ಗಿಸ್‌ರು ತಮ್ಮ 'ಆರ್ಕಿಯಾಲಾಜಿ, ಆರ್ಟ್ ಆ್ಯಂಡ್ ರಿಲಿಜಿಯನ್ ನ್ಯೂ ಪರ್ ಸ್ಪೆಕ್ಟಿವ್ ಆನ್ ವಿಜಯನಗರ' ಕೃತಿಯಲ್ಲಿ ರಾಬರ್ಟ್ ಸಿವೆಲ್‌ರ ಈ ಕೃತಿಯನ್ನು ಕುರಿತು "೨೦ನೇ ಶತಮಾನದ ಆರಂಭದಲ್ಲಿ ಐತಿಹಾಸಿಕ ಹಾಗೂ ಪುರಾತತ್ವೀಯ ನೆಲೆಯಲ್ಲಿ ವಿಪುಲವಾದ ಮಾಹಿತಿಯನ್ನು ನೀಡಿದ್ದು, ವಿಜಯನಗರ ಚರಿತ್ರೆಯ ಚಿತ್ರಣವನ್ನು ನೀಡಿದ ಮೊಟ್ಟಮೊದಲ ಗ್ರಂಥವೆಂದು" ಉಲ್ಲೇಖಿಸಿದ್ದಾರೆ. ಇದು ಸರಿಯೆನಿಸುವುದು ಏಕೆಂದರೆ ಅಲ್ಲಿಯವರೆಗೆ ಕರ್ನಾಟಕ ಸಾಮ್ರಾಜ್ಯ ಎಂದು ಖ್ಯಾತಿಪಡೆದ ಈ ಸಾಮ್ರಾಜ್ಯದ ಚರಿತ್ರೆಯನ್ನು ಕಟ್ಟಿಕೊಟ್ಟ ಒಂದು ಗ್ರಂಥವು ಇರಲಿಲ್ಲ. ಇವರ ನಂತರ ಸಾಲು-ಸಾಲಾಗಿ ಅನೇಕ ಕೃತಿಗಳು ಪ್ರಕಟಣೆಯಾದವು. ರಾಬರ್ಟ್ ಸಿವೆಲ್‌ರ ಈ ಕೃತಿಯನ್ನು ಅಧ್ಯಯನದ ಅನುಕೂಲಕ್ಕಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

'ಎ ಫರ್‌ಗಾಟನ್ ಎಂಪೈರ್' ಕೃತಿಯು ಬ್ರಿಟಿಷರ ಧೋರಣೆಗಳನ್ನು ಅನುಸರಿಸಿ ರೂಪಿಸಿದ್ದಾದರೂ ಈ ಕ್ಷೇತ್ರದಲ್ಲಿ ದುಡಿದ ಮೊದಲಿಗರು. ಇವರ ಈ ಕೃತಿಯೇ ಇಂದಿಗೂ ಹಂಪಿ ಪ್ರವಾಸಿಗರ ಮಾರ್ಗದರ್ಶಿಯಂತಿದೆ. ಇದನ್ನು ತಮ್ಮ ವಸಾಹತುಶಾಹಿ ನೀತಿಯನ್ನು ಮೇಳೈಸಿ ಸಂಬಂಧ ಕಲ್ಪಿಸಿ ಬರೆಯಲಾಗಿದೆ. ರಾಬರ್ಟ್ ಸಿವೆಲ್‌ರು ೨೩೪ ಪುಟಗಳಲ್ಲಿ ಈ ಸಾಮ್ರಾಜ್ಯದ ರಾಜಕೀಯ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಸಾಮಾನ್ಯವಾಗಿ ವಸಾಹತುಕಾಲೀನ ಕೃತಿಗಳನ್ನು ಅನುಮಾನಸ್ಪದವಾಗಿ ನೋಡುವರು. ಕಾರಣ ಅದರಲ್ಲಿ ಚರಿತ್ರೆಯಿದ್ದರು ಮತೀಯತೆ, ಕೋಮುಭಾವನೆಯನ್ನು ಕೆರಳಿಸುವಂತಹ ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ. ಇದಕ್ಕೆ ಈ ಕೃತಿಯೂ ಹೊರತಾಗಿಲ್ಲ. ಇಲ್ಲಿ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಅಂಶಗಳನ್ನು ಕಡೆಗಣಿಸಲಾಗಿದೆ. ಕೇವಲ ಸಾಮ್ರಾಜ್ಯದ ಹುಟ್ಟು ಅದರ ರಾಜರು, ರಾಜಮನೆತನಗಳ ಪ್ರಸಿದ್ಧ ಅರಸರು, ಸಾಮ್ರಾಜ್ಯದ ಅವನತಿಗೆ ಕಾರಣಗಳು ಹಾಗೂ ಬಳಸಿಕೊಂಡಿರುವ ಆಕರಗಳ ವಿಶ್ಲೇಷಣೆ ಈ ಕೃತಿಯಲ್ಲಿ ಪ್ರಮುಖವಾಗಿವೆ. ಒಟ್ಟು ೧೭ ಅಧ್ಯಾಯಗಳಾಗಿ ವಿಭಜಿಸಲಾಗಿದೆ. ಈ ಕೃತಿಯು ರಚನೆಯಿಂದ ಹಂಪಿಯು ಇಂದು ವಿಶ್ವಪರಂಪರೆ ಪಟ್ಟಿಯಲ್ಲಿ ಸ್ಥಾನಗಿಟ್ಟಿಸಲು ಕಾರಣವಾಯಿತು ಹಾಗೂ ಹಂಪಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಯಿತು ಎಂಬ ಮಾತು ಇದೆ.

ಗ್ರಂಥದ ಆರಂಭದಲ್ಲೇ ಇವರು ವಸಾಹತುಶಾಹಿ ಧೋರಣೆಯನ್ನು ತಳೆದಿದ್ದು, ಇಂಗ್ಲೆಂಡಿನ ಮೂರನೇ ಎಡ್ವರ್ಡ್‌ನ ಕಾಲದಲ್ಲಿ, ಭಾರತದಲ್ಲೊಂದು ಘಟನೆ ಜರುಗಿತು. ಈ ಘಟನೆ ಇಡೀ ದಕ್ಷಿಣದ ರಾಜಕೀಯ ಸ್ಥಿತಿಯನ್ನೇ ಬದಲಿಸಿತು ಎಂದಿದ್ದಾರೆ. ಇದು ಭಾರತದ ಸ್ಥಿತಿಯನ್ನು ಇಂಗ್ಲೆಂಡಿನೊಡನೆ ಹೋಲಿಸುವುದಾಗಿದೆ. ವಿಜಯನಗರ ಸಾಮ್ರಾಜ್ಯ ಸಂಸ್ಥಾಪನೆಯಾದ ನಂತರ ದಕ್ಷಿಣದ ಎಲ್ಲಾ ರಾಜರು ಅಧೀನರಾದರು ಎಂಬ ಉಲ್ಲೇಖವನ್ನು ನೋಡಿದಾಗ, ಕೇವಲ ಪ್ರಬಲರಾದ ಎರಡನೇ ದೇವರಾಯ, ಕೃಷ್ಣದೇವರಾಯನ ಕಾಲದಲ್ಲಿ ಮಾತ್ರ ಸಾಮ್ರಾಜ್ಯ ವಿಶಾಲವಾಗಿತ್ತೆಂದು ಹಾಗೂ ನೇರ ಆಳ್ವಿಕೆ ನಡೆಸುತ್ತಿದ್ದರೆಂದು ತಿಳಿದ ಸಂಗತಿ. ಅಲ್ಲದೆ ಇವರ ಈ ವಿಶಾಲ ಸಾಮ್ರಾಜ್ಯವನ್ನು ಏಕಚಕ್ರಾಧಿಪತ್ಯಕ್ಕೆ ಗುರಿಪಡಿಸಲಾಗಿತ್ತು. ಕೇಂದ್ರಿಕೃತ ಸರ್ಕಾರವನ್ನು ಹೊಂದಿತ್ತೆಂಬುದನ್ನು ಬರ್ಟನ್‌ಸ್ಟೈನ್[೬]ರವರು ತಿರಸ್ಕರಿಸುವುದನ್ನು ನೋಡಬಹುದು. ಈ ಗ್ರಂಥಕ್ಕೆ ಮರೆತು ಹೋದ ಮಹಾಸಾಮ್ರಾಜ್ಯ ಎಂದು ಕರೆಯುವ ಔಚಿತ್ಯವಾದರೂ ಏನು ಎಂದು ಪ್ರಶ್ನೆ ಮಾಡಿದಾಗ ದೊರಕುವ ಉತ್ತರ ಮಾತ್ರ ಹೀಗಿದೆ. ''ಒಂದು ಕಾಲಕ್ಕೆ ಹೆಮ್ಮೆಯ ಹೆಸರು ಪಡೆದು ಭವ್ಯವಾಗಿದ್ದ ರಾಜಧಾನಿ ಸಂಪೂರ್ಣವಾಗಿ ನಾಶವಾಗಿದೆ. ಮಂದಿರಗಳು, ಅರಮನೆಗಳಿಂದ ಕೂಡಿದ್ದ ಹಂಪಿಯು ಭಗ್ನಾವಶೇಷಗಳಾಗಿ ಅಲ್ಲಲ್ಲಿ ಬಿದ್ದುಕೊಂಡಿವೆ. ಅದರ ಹೆಸರು ಕೂಡ ಜನರ ಮನಸ್ಸಿನಿಂದ ಮತ್ತು ಸ್ಮರಣೆಯಿಂದ ಹಾರಿ ಹೋಗಿದೆ. ಅದರ ನಿವೇಶನವನ್ನು ಗುರುತಿಸುವ ಅವಶೇಷಗಳು ಹಂಪಿಯ ಚಿಕ್ಕ ಗ್ರಾಮಗಳ ಬಳಿ ಬಿದ್ದಿರುವ ಭಗ್ನಾವಶೇಷಗಳೆಂದೇ ಹೆಸರಾಗಿವೆ.''[೭] ಅಂದರೆ ಹಂಪಿಯ ಬಳಿಯಿರುವ ಸ್ಮಾರಕಗಳು ಆಡಳಿತ ವರ್ಗದಿಂದ, ಜನಸಾಮಾನ್ಯರಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಹಾಗೂ ಅವುಗಳನ್ನು ರಕ್ಷಿಸಬೇಕೆಂಬ ಔದಾರ್ಯವನ್ನಾದರೂ ತೋರಿಸದಿರುವುದನ್ನು ಗಮನಿಸಬಹುದು.

**ಟಿಪ್ಪಣಿಗಳು**

೧. ರೈಸ್ ಬಿ.ಎಲ್., ಮೈಸೂರು ಎ ಗೆಜೆಟಿಯರ್, ಪು.೩೪೪

೨. ಮಾರ್ಕ್‌ವಿಲ್ಕ್ಸ್, ಹಿಸ್ಟರಿ ಆಫ್ ಮೈಸೂರು, ಸಂ.೧, ಪು.೧೪-೨೦

೩. ರೈಸ್ ಬಿ.ಎಲ್, ಪೂರ್ವೋಕ್ತ, ಪು.೩೪೪

೪. ವೆಂಕಟರಂಗೋಕಟ್ಟಿ, ಗೆಜೆಟಿಯರ್ ಮುಂಬೈ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು, ಪು.೩೪೦-೩೪೧

೫. ರಾಬರ್ಟ್ ಸಿವೆಲ್, ಎ ಫರ್‌ಗಾಟನ್ ಎಂಪೈರ್, ಪು.೨೦-೨೧

೬. ಅದೇ, ಪು.೨೧

೭. ಅದೇ, ಪು.೨೧-೨೨

೮. ಅದೇ, ಪು.೨೨

೯. ಅದೇ, ಪು.೨೨

೧೦. ಅದೇ, ಪು.೨೨-೨೩

೧೧. ಅದೇ, ಪು.೨೩

೧೨. ಅದೇ, ಪು.೨೧-೨೨

೧೩. ಅದೇ, ಪು.೨೨

೧೪. ಈ ಹೊಸ ಪಟ್ಟಣವನ್ನು ೩ನೇ ಬಲ್ಲಾಳನು ಸ್ಥಾಪಿಸಿದನೆಂಬ ಅಭಿಪ್ರಾಯವಿದೆ.

೧೫. ಈ ಮೂಲವು ಇಂದಿಗೂ ಚರ್ಚಿತವಾದ ಸಂಗತಿಯಾಗಿದೆ.

೧೬. ಸಿವೆಲ್‌ರು ತಮ್ಮ ನಾಲ್ಕನೇ ವಾದದಲ್ಲಿ ಸ್ಪಷ್ಟಪಡಿಸಿದ್ದಾರೆ. ಪು.೨೨

೧೭. ಸಿವೆಲ್, ಪೂರ್ವೋಕ್ತ ಪು.೭-೮ ಇದರ ಉಲ್ಲೇಖವನ್ನು ನೋಡಬಹುದು. ಸಿವೆಲ್‌ರು ಸಹ ಈ ವರ್ಷವನ್ನು ತಪ್ಪೆಂದು ಗುರುತಿಸಿದ್ದಾರೆ. ಇದನ್ನೇ ಸೂರ್ಯನಾರಾಯಣರಾವ್ ಬಿ., ತಮ್ಮ 'ಎ ಹಿಸ್ಟರಿ ಆಫ್ ವಿಜಯನಗರ ದಿ ನೆವರ್ ಟು ಬಿ ಫರ್‌ಗಾಟನ್ ಎಂಪೈರ್' ಹೇಳಿದ್ದಾರೆ, ಪು.೯

೧೮. ಸೂರ್ಯನಾರಾಯಣರಾವ್ ಬಿ., ಪೂರ್ವೋಕ್ತ, ಪು.೬-೯

೧೯. ಸೂರ್ಯನಾಥ ಕಾಮತ್, ವಿಜಯನಗರ ಸಾಮ್ರಾಜ್ಯ, ಪು.೩-೪

೨೦. ಕೊಟ್ರಯ್ಯ ಸಿ.ಟಿ.ಎಂ., ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ, ಪು.೩೨-೩೩

೨೧. ರಾಘುವೇಂದ್ರರಾವ್ ವಿ., ವಿಜಯನಗರ, ಪು.೧೩-೧೫

೨೨. ನೀಲಕಂಠಶಾಸ್ತ್ರಿ ಕೆ.ಎ.(ಸಂ), ಫರ್ದರ್ ಸೋರ್ಸ್ಸ್ ಆಫ್ ವಿಜಯನಗರ ಹಿಸ್ಟರಿ, ಪು.೧೦-೧೧

೨೩. ವಸುಂಧರಾ ಫಿಲಿಯೋಜಾ, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಪು.೫

೨೪. ದೀಕ್ಷಿತ್ ಜಿ.ಎಸ್., ಸಂಗಮರ ಕಾಲದ ವಿಜಯನಗರ, ಪು.೨೨

೨೫. ರೈಸ್ ಬಿ.ಎಲ್., ಪೂರ್ವೋಕ್ತ, ಪು.೩೪೬ ಇದನ್ನು ಸಮರ್ಥಿಸುವರು.

೨೬. ಸೂರ್ಯನಾಥ ಕಾಮತ್, ಪೂರ್ವೋಕ್ತ, ಪು.೩-೪

೨೭. ಷೇಕ್ ಅಲಿ ಬಿ.(ಸಂ), ಕರ್ನಾಟಕ ಚರಿತ್ರೆ ಸಂಪುಟ-೩, ಪು.೧೬

೨೮. ಸಿವೆಲ್, ಪೂರ್ವೋಕ್ತ, ಪು.೨೨

೨೯. ವಸುಂಧರಾ ಫಿಲಿಯೋಜಾ, ಪೂರ್ವೋಕ್ತ, ಪು.೩

೩೦. ಪುಟ್ಟಸ್ವಾಮಿ, ಕೈಫಿಯತ್ತು ಕಂಡ ಮೈಸೂರು ರಾಜಕೀಯ ಚರಿತ್ರೆ, ಪು.೫೧

೩೧. ರೈಸ್ ಬಿ.ಎಲ್., ಪೂರ್ವೋಕ್ತ, ಪು.೩೪೪

೩೨. ಆಲೂರ ವೆಂಕಟರಾಯರು, ಕರ್ನಾಟಕ ಗತವೈಭವ, ಪು.೬೭

೩೩. ವೆಂಕಟರಂಗೋಕಟ್ಟಿ, ಪೂರ್ವೋಕ್ತ, ಪು.೩೪೦-೪೧

೩೪. ಗಳಗನಾಥರು, ಮಾಧವ ಕರುಣಾ ವಿಲಾಸ ಕೃತಿಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆಂದು, ಕೃಷ್ಣಮೂರ್ತಿ ಕಿತ್ತೂರು ತಮ್ಮ "ಗಳಗನಾಥರು ಮತ್ತು ಅವರ ಕಾದಂಬರಿಗಳು" ಎಂಬ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಪು.೨೪೨.

೩೫. ಸದಾನಂದ ಕನವಳ್ಳಿ(ಅನು), ಮರೆತು ಹೋದ ಮಹಾಸಾಮ್ರಾಜ್ಯ, ಪು.೧೮೮

೩೬. ಅದೇ, ಪು.೧೮೮

೩೭. ಅದೇ, ಪು.೧೮೯

೩೮. ಅದೇ, ಪು.೧೮೯-೧೯೦

೩೯. ಅದೇ, ಪು.೧೯೭



೪೦. ಅದೇ, ಪು.೧೯೮

೪೧. ಅದೇ, ಪು.೨೧೨

೪೨. ವಸುಂಧರಾ ಫಿಲಿಯೋಜಾ, ವಿಜಯನಗರ, ಪು.೫೧

೪೩. ಅದೇ, ಪು.೫೨

೪೪. ಕೃಷ್ಣ ಕೊಲ್ಹಾರ ಕುಲಕರ್ಣಿ(ಅನು), ಬುಸಾತೀನೆ-ಸಲಾತೀನ, ಪು.೮೮-೮೯

೪೫. ಅದೇ, ಪು.೮೭

೪೬. ಬಾಲಸುಬ್ರಹ್ಮಣ್ಯಂ(ಅನು), ಮರೆಯಲಾಗದ ಮಹಾಸಾಮ್ರಾಜ್ಯ, ಪು.೨೪

೪೭. ಅದೇ, ಪು.೨೪. ಆದರೆ ಇದಕ್ಕೆ ವಿರೋಧವಿದೆ. ಮಹಮ್ಮದ್ ಇಬ್ರಾಹಿಂ ಜುಬೇರಿಯು ತನ್ನ ಬುಸಾತೀನೆ-ಸಲಾತೀನ ಕೃತಿಯಲ್ಲಿ ಆರು ತಿಂಗಳೆಂದು ಪು.೯೦, ಸಿವೆಲ್‌ರು ಐದು ತಿಂಗಳೆಂದು ಪು.೨೧೨ ಅಭಿಪ್ರಾಯಪಟ್ಟಿದ್ದಾರೆ.

೪೮. ಅದೇ, ಪು.೨೫

೪೯. ವಸುಂಧರಾ ಫಿಲಿಯೋಜಾ, ವಿಜಯನಗರ, ಪು.೫೧-೫೨

೫೦. ಸದಾನಂದ ಕನವಳ್ಳಿ, ಪೂರ್ವೋಕ್ತ, ಪು.೨-೩

೫೧. ಪೋರ್ಚುಗೀಸರು ವಿಜಯನಗರ ಸಾಮ್ರಾಜ್ಯವನ್ನು ನರಸಿಂಗನ ರಾಜ್ಯವೆಂದೇ ಕರೆಯುತ್ತಿದ್ದರು.

೫೨. ವಿವೇಕ ರೈ ಬಿ.ಎ., ಪ್ರವಾಸಿಕಂಡ ವಿಜಯನಗರ, ಪು.೫೩

೫೩. ಅನಿಲಾವರ್ಗಿಸ್, "ಆರ್ಕಿಯಾಲಾಜಿ, ಆರ್ಟ್ ಆ್ಯಂಡ್ ರಿಲಿಜಿಯನ್ ನ್ಯೂ ಪರಸ್ಪೆಕ್ಟಿವ್ ಆನ್ ವಿಜಯನಗರ", ಪು.೧೬

೫೪. ಬರ್ಟನ್ ಸ್ಟೈನ್, ದಿ ನ್ಯೂ ಕೇಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ, ವಿಜಯನಗರ

೫೫. ಸದಾನಂದ ಕನವಳ್ಳಿ, ಪೂರ್ವೋಕ್ತ, ಪು.೨

ಅಧ್ಯಾಯ ೪

# ಸಿವೆಲ್‌ರ ಅಧ್ಯಯನದ ನೋಟಗಳು

೪.೧. ಸಾಮ್ರಾಜ್ಯಶಾಹಿ ನೆಲೆಯ ಧೋರಣೆ

೪.೨. ಕೋಮುವಾದಿ ಸೈದ್ಧಾಂತಿಕತೆ

೪.೩. ವಸಾಹತುಶಾಹಿ ಆಯಾಮಗಳು

೪

# ಸಿವೆಲ್‌ರ ಅಧ್ಯಯನದ ನೋಟಗಳು

## ೪.೧. ಸಾಮ್ರಾಜ್ಯಶಾಹಿ ನೆಲೆಯ ಧೋರಣೆ

ಇಂಗ್ಲೆಂಡನ್ನು ರವಿ ಮುಳಗದ ನಾಡು ಎಂದು ಕರೆಯುವರು. ಅಂದರೆ ಇಡೀ ವಿಶ್ವದಾದ್ಯಂತ ಇವರು ಸಾಮ್ರಾಜ್ಯವನ್ನು ಹೊಂದಿದ್ದರು ಎಂಬರ್ಥವನ್ನು ಕೊಡುತ್ತದೆ. ಇವರ ಸಾಮ್ರಾಜ್ಯವು ಹಲವು ದೇಶಗಳಲ್ಲಿ ಯಶಸ್ವಿಯಾಗಿ ಆಳ್ವಿಕೆ ನಡೆಸಿತ್ತು. ಬ್ರಿಟಿಷರು ವ್ಯಾಪಾರಕ್ಕೆ ಹೋದಲೆಲ್ಲಾ, ವ್ಯಾಪಾರ ಕೋಠಿಗಳನ್ನು ಸ್ಥಾಪಿಸಿ, ಅದರ ಸುತ್ತಲಿನ ಪ್ರದೇಶವನ್ನು ವಶಪಡಿಸಿಕೊಂಡು ತಾವೇ ಆಳ್ವಿಕೆ ನಿರ್ವಹಿಸುತ್ತಿದ್ದರು. ಹೀಗೆ ಅಲ್ಲಿನ ಅರಸರ ಅಥವಾ ಪ್ರಭುತ್ವದ ಅಸಮರ್ಥತೆಯನ್ನು ಅರಿತು ಅವರ ಮೇಲೆ ಅಧಿಕಾರ ಚಲಾಯಿಸುವಷ್ಟು ಸಮರ್ಥರಾದರು. ಉದಾ : ಭಾರತ, ಚೀನಾದ ವಶ. ಇದಕ್ಕೆ ಕಾರಣವೆಂದರೆ ಬ್ರಿಟಿಷರು ಜಾರಿಗೆ ತಂದ ಪ್ರಮುಖ ನೀತಿಗಳಾಗಿರಬಹುದು. ಇಲ್ಲವೇ ಅವರ ಅಧಿಕಾರಿಗಳಾಗಿರಬಹುದು. ಭಾರತದಲ್ಲಿ ಈ ಸಾಮ್ರಾಜ್ಯಶಾಹಿ ನೀತಿಯು ಹೆಚ್ಚಾಗಿ ಪ್ರಚುರಪಡಿಸಿದ ಕಾಲಮಾನ ಎಂದರೆ ೧೯ ಮತ್ತು ೨೦ನೇ ಶತಮಾನಗಳು. ಈ ನೀತಿಯು ೧೭೮೪ರ ರಾಯಲ್ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಸ್ಥಾಪನೆಯಿಂದ ಪ್ರಾರಂಭವಾಯಿತು ಎನ್ನಬಹುದು. ಈ ಸಮಾಜದಲ್ಲಿದ್ದ ವಿದ್ವಾಂಸರು ಪೂರ್ವದ ಪೌರ್ವಾತ್ಯ ದೇಶಗಳ ಇತಿಹಾಸ, ಸಂಸ್ಕೃತಿ, ಸಾಹಿತ್ಯ ಮುಂತಾದವನ್ನು ಭಾಷಾಂತರಿಸುವ, ರಚಿಸುವ ಕಾರ್ಯಕ್ಕೆ ಕೈ ಹಾಕಿದರು. ಸರ್ ವಿಲಿಯಂ ಜೋನ್ಸ್, ಮ್ಯಾಕ್ಸ್‌ಮುಲ್ಲರ್, ಜೇಮ್ಸ್‌ಮಿಲ್ ಪ್ರಮುಖರಾಗಿದ್ದಾರೆ.

ಜೇಮ್ಸ್ ಮಿಲ್ ನು ೧೮೧೭ರಲ್ಲಿ ರಚಿಸಿದ "ಎ ಹಿಸ್ಟರಿ ಆಫ್ ಬ್ರಿಟಿಷ್ ಇಂಡಿಯಾ" ಕೃತಿಯಲ್ಲಿ ಮತೀಯತೆಗೆ ನಾಂದಿ ಹಾಡಿದ. ಭಾರತೀಯ ಚರಿತ್ರೆಯನ್ನು ಮೂರು ಭಾಗಗಳಾಗಿ ವಿಂಗಡಿಸಿ ಪ್ರಾಚೀನ ಭಾರತವನ್ನು ಹಿಂದೂ ಯುಗವೆಂದೂ, ಮಧ್ಯಕಾಲೀನ ಭಾರತವನ್ನು ಮುಸ್ಲಿಮರ ಯುಗ ಎಂದು ಆಧುನಿಕ ಭಾರತವನ್ನು ಬ್ರಿಟೀಷ್ ಯುಗ ಎಂದನೇ ಹೊರತು ಕ್ರೈಸ್ತರ ಯುಗ ಎನ್ನಲಿಲ್ಲ. ಇಲ್ಲಿ ಇವರು

ಮತೀಯತೆ, ಕೋಮುಭಾವನೆ ಕೆರಳಿಸುವಂತ ಅಂಶಗಳನ್ನು ಗಮನಿಸಬಹುದು. ಇದೇ ಮಾರ್ಗವನ್ನು ಅನೇಕ ಹಿರಿಯ ವಿದ್ವಾಂಸರು ಅನುಸರಿಸಿದರು. ಅಂಥವರಲ್ಲಿ ಪ್ರಮುಖರೆಂದರೆ ಹೆಚ್.ಎಂ.ಈಲಿಯೆಟ್, ಜಿ.ಯು.ಪೋಪ್, ವಿ.ಎ.ಸ್ಮಿತ್. ಇವರ ಸಾಲಿಗೆ ಸೇರುವ ಇನ್ನೊಬ್ಬ ಸಾಮ್ರಾಜ್ಯಶಾಹಿ ಇತಿಹಾಸಕಾರರೆಂದರೆ ರಾಬರ್ಟ್ ಸಿವೆಲ್, ವಸಾಹತುಶಾಹಿ ಚರಿತ್ರೆಕಾರರ ಸಾಲಿಗೆ ನಿಸ್ಸಂದೇಹವಾಗಿ ಸೇರುವರು. ಸಾಮಾನ್ಯವಾಗಿ ಇವರ ಕೃತಿಗಳಲ್ಲಿ ವಸಾಹತುಶಾಹಿ ನೀತಿಯನ್ನು ಹೆಚ್ಚಾಗಿ ಪ್ರಚುರ ಪಡಿಸಿರುವರು. ಇವರ ಮೇರುಕೃತಿ "ಎ ಫರ್‌ಗಾಟನ್ ಎಂಪೈರ್" ಆಗಿದೆ. ಈ ಕೃತಿಯನ್ನು ಸೂಕ್ಷ್ಮವಾಗಿ ಅವಲೋಕಿಸುವುದರಿಂದ ಹಾಗೂ ಅಧ್ಯಯನಕ್ಕೆ ಒಳಪಡಿಸುವುದರಿಂದ ಸಾಮ್ರಾಜ್ಯಶಾಹಿ, ವಸಾಹತು ನೀತಿ ಮತ್ತು ಕೋಮುವಾದಿ ನೆಲೆಗಳ ಹಿನ್ನಲೆಯಲ್ಲಿ ರಚನೆಗೊಂಡಿರುವುದನ್ನು ತಿಳಿಯಬಹುದು. ಸಿವೆಲ್‌ರು ವಸಾಹತುಶಾಹಿ ನೀತಿಯ ಪ್ರಚೋದಕ ಹಾಗೂ ಬ್ರಿಟಿಷ್ ಅಧಿಕಾರಿಯಾಗಿದ್ದು ಇದಕ್ಕೆ ಕಾರಣ. ಈ ಕೃತಿಯ ಮೂಲಕ ಬ್ರಿಟಿಷರು ದಕ್ಷಿಣ ಭಾರತದತ್ತ ತಮ್ಮ ನೆಲೆಯನ್ನು ಗಟ್ಟಿಗೊಳಿಸುವತ್ತ ಹೆಜ್ಜೆ ಹಾಕಿದರು. ೧೯೦೦ರಲ್ಲಿ ಪ್ರಕಟವಾದ ಈ ಕೃತಿಯು ಕರ್ನಾಟಕ ಚರಿತ್ರೆಯಲ್ಲಿ ಒಂದು ಮೈಲಿಗಲ್ಲು. ಈ ಕೃತಿಯು ಕರ್ನಾಟಕ ಸಾಮ್ರಾಜ್ಯ ಅಂದರೆ ವಿಜಯನಗರ ಸಾಮ್ರಾಜ್ಯದ ಇತಿಹಾಸಕ್ಕೆ ನಾಂದಿ ಹಾಡಿತು. ವಿಜಯನಗರ ಸಾಮಾಜ್ಯದಂತೆ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ಬಲಿಷ್ಠ ಹಾಗೂ ಶ್ರೇಷ್ಠ ಸಾಮ್ರಾಜ್ಯವನ್ನು ನಿರ್ಮಿಸುವ ಕನಸನ್ನು ಕಾಣತೊಡಗಿದರು.

ಈ ಸಾಮ್ರಾಜ್ಯವು ಮೊದಲಿಗೆ ಕರ್ನಾಟಕ ಸಾಮ್ರಾಜ್ಯ[೧] ಎಂದು ಹೆಸರು ಪಡೆದಿತ್ತು. ವಿದೇಶಿಯರ ಸಂಪರ್ಕದಿಂದಾಗಿ ಬಿಜನಗರ, ಬಿಜನೇಗಾಲಿಯ, ಬಿಜೆನಗರ, ಬಿಸಗ್ನ ಎಂಬ ಹಲವು ಹೆಸರುಗಳನ್ನು ಪಡೆಯಿತು. ಇದೇ ಮುಂದೇ ವಿಜಯನಗರ ಎಂದು ಖ್ಯಾತಿ ಹೊಂದಿದೆ. ಎ ಫರ್‌ಗಾಟನ್ ಎಂಪೈರ್ ಕೃತಿಯ ಮೂಲಕ ದಕ್ಷಿಣ ಭಾರತದ ಚರಿತ್ರೆಗೆ ನಾಂದಿ ಆಯಿತು. ದಕ್ಷಿಣ ಭಾರತದ ಚರಿತ್ರಗೆ ವಿಶೇಷ ಸ್ಥಾನ ದೊರೆಯಲು ಈ ಕೃತಿ ಕಾರಣವಾಗಿದೆ. ಈ ಮೂಲಕ ಉತ್ತರ ಭಾರತಕ್ಕೆ ಮಾತ್ರ ಸಿಮೀತವಾದ ಬ್ರಿಟಿಷರ ಭಾರತದ ಚರಿತ್ರೆಯು ಸಮಸ್ತ ಭಾರತದ ಚರಿತ್ರೆಯ ಅಧ್ಯಯನಕ್ಕೆ ಹೆಬ್ಬಾಗಿಲಾಗಿ ಪರಿಣಮಿಸಿತು. ಈ ಕೃತಿಯ ಆರಂಭದಲ್ಲೇ ಬ್ರಿಟಿಷರ ನೀತಿಯನ್ನು ಪ್ರಚುರಪಡಿಸಿದ್ದನ್ನು ಗಮನಿಸಬಹುದು. ಭಾರತದಲ್ಲಿ ಯಾವುದೇ ಒಂದು ಘಟನೆ ಸಂಭವಿಸಿದರು ಅದನ್ನು ಬ್ರಿಟನ್ನಿನೊಂದಿಗೆ ಸಂಬಂಧ ಕಲ್ಪಿಸುವುದನ್ನು ನೋಡಬಹುದು. "ಈಸ್ಟ್ ಇಸ್ ಈಸ್ಟ್, ವೆಸ್ಟ್ ಇಸ್ ವೆಸ್ಟ್ ದೇ ಟು ಶಲ್ ನೆವರ್ ಮೀಟ್ ಆಗೈನ್" ಎಂಬ ಹೇಳಿಕೆಯಿದ್ದರು, ಬೇರೆ ಸಾಮ್ರಾಜ್ಯಗಳ ಜೊತೆ ಸಂಬಂಧ ಕಲ್ಪಿಸಿ ಆ ಸಾಮ್ರಾಜ್ಯದ ಸ್ಥಾನದಲ್ಲಿ ಬ್ರಿಟಿಷರ ಸಾಮ್ರಾಜ್ಯವಿರಬೇಕು ಎಂಬ ನಿಲುವನ್ನು ತಳೆಯುವರು. ಇದು ಇಂಗ್ಲೆಂಡಿನ ರಾಣಿ ವಿಕ್ಟೋರಿಯಾಳನ್ನು ತೃಪ್ತಿಪಡಿಸುತ್ತದೆ ಎಂಬ ಆಶಾಭಾವನೆಯನ್ನು ತಳೆಯಲಾಯಿತು.

ಬ್ರಿಟಿಷರ ಸಾಮ್ರಾಜ್ಯ ವಿಸ್ತರಣ ನೀತಿ ಹೇಗಿದೆ ಎಂದರೆ, ಯಾವುದೇ ಒಂದು ಸಾಮ್ರಾಜ್ಯವನ್ನು ಸುವರ್ಣಯುಗ, ಗತಕಾಲದ ವೈಭವವನ್ನು ಮೆಲುಕು ಹಾಕುವುದು, ವರ್ಣಿಸುವುದು ಅದರ ಜೊತೆ

ಸಂಬಂಧ ಕಲ್ಪಿಸಿ ಆ ಸಾಮ್ರಾಜ್ಯದಂತೆಯೇ ಬ್ರಿಟಿಷ್ ಸಾಮ್ರಾಜ್ಯವಿರಬೇಕು ಎಂಬ ಆಶಯ ಇವರದು. ಇವರ ಕಲ್ಪನೆ ಹೇಗಿತ್ತೆಂದರೆ ಒಂದು ಸಾಮ್ರಾಜ್ಯದ ರಾಜಧಾನಿಯು ಶ್ರೀಮಂತವಾಗಿದ್ದರೆ, ಇಡೀ ರಾಜ್ಯವೇ ಶ್ರೀಮಂತವಾಗಿರುತ್ತದೆ ಎಂಬ ಅತೀ ಕಲ್ಪನೆ ಇರುವುದು. ಈ ಕಲ್ಪನೆಗೆ ಪ್ರೇರಣೆ ಎಂದರೆ ಉತ್ತರದ ಗುಪ್ತ ಸಾಮ್ರಾಜ್ಯ. ಉತ್ತರದಲ್ಲಿ ಯಶಸ್ವಿಯಾದ ಗುಪ್ತರಂತೆ ದಕ್ಷಿಣದಲ್ಲಿ ವಿಜಯನಗರ ಸಾಮ್ರಾಜ್ಯ ಎಂದು ಗುರುತಿಸುವ ಮೂಲಕ ದಕ್ಷಿಣ ಭಾರತದತ್ತ ತಮ್ಮ ಚಿತ್ತವನ್ನು ಹರಿಸಿದರು. ಈ ಮೂಲಕ ಬ್ರಿಟಿಷ್ ಸಾಮ್ರಾಜ್ಯವನ್ನು ವಿಜಯನಗರ ಸಾಮ್ರಾಜ್ಯದೊಡನೆ ಸಮೀಕರಿಸುವ ಪ್ರಯತ್ನ ಮಾಡಲಾಯಿತು. ಇವರು ಹೆಚ್ಚಾಗಿ ಪೋರ್ಚುಗೀಸ್, ಇಟಲಿ ಪ್ರವಾಸಿಗರ ಕಥಾನಕಗಳತ್ತ ಗಮನಹರಿಸಿ, ಅವರ ಹೇಳಿಕೆಗಳನ್ನು ಹಾಗೆಯೇ ದಾಖಲಿಸಿಕೊಂಡರು. ಈ ವಿದೇಶಿ ಯಾತ್ರಿಕರ ಹೇಳಿಕೆಗಳು ವೈಭವದಿಂದ ಕೂಡಿರುತ್ತವೆ. ವಿಜಯನಗರಕ್ಕೆ ಸಂಬಂಧಿಸಿದಂತೆ ವಜ್ರ, ವೈಢೂರ್ಯಗಳು, ಮುತ್ತು, ರತ್ನಗಳನ್ನು ಬೀದಿಯಲ್ಲಿ ಮಾರಾಟ ಮಾಡುತ್ತಿದ್ದರು, ಸೇರುವಿನಿಂದ ಅಳೆಯುತ್ತಿದ್ದರು ಎಂಬ ಹೇಳಿಕೆಗಳು ಸಾಮಾನ್ಯವಾಗಿದ್ದವು. ಹಾಗೇ ನೋಡಿದರೆ ಇದು ಅತಿಶಯೋಕ್ತಿ ಎನಿಸದು. ಏಕೆಂದರೆ ರಾಜಧಾನಿಯಲ್ಲಿ ವ್ಯಾಪಾರ-ವಹಿವಾಟು ಭರದಿಂದ ಸಾಗುತಿತ್ತು ಮತ್ತು ವಿದೇಶಿ ಯಾತ್ರಿಕರು ವ್ಯಾಪಾರ, ವಹಿವಾಟಿನಲ್ಲಿ ಹೆಚ್ಚಾಗಿ ಪಾಲ್ಗೊಳ್ಳುತ್ತಿದ್ದರು. ಇದರಿಂದ ಸಾಮಾನ್ಯವಾಗಿ ಈ ಹೇಳಿಕೆಗಳು ಸಮಂಜಸವೆನಿಸುವುವು. ಇದಕ್ಕೆ ಇನ್ನೊಂದು ಸಮರ್ಥನೆ ನೀಡುವುದಾದರೆ, ಕಳ್ಳಕಾಕರಿಂದ ಮುಕ್ತವಾದ ವಿದೇಶಿ ಯಾತ್ರಿಕರು ಈ ಕಲ್ಪನೆಯನ್ನು ತಂದಿರಬಹುದು. ಇಂಥ ವೈಭವದ ವರ್ಣನೆಗಳು ಈ ಕೃತಿಯಲ್ಲಿ ಮೂಡಿಬಂದಿವೆ. ಇದರ ಜೊತೆಗೆ ಬ್ರಿಟಿಷ್ ಸಾಮ್ರಾಜ್ಯವನ್ನು ಸಮೀಕರಿಸುವುದು.

ರಾಬರ್ಟ್ ಸಿವೆಲ್‌ರು ವಿಜಯನಗರ ಸಾಮ್ರಾಜ್ಯಕ್ಕೆ ಮರೆತು ಹೋದ ಮಹಾಸಾಮ್ರಾಜ್ಯ ಎಂಬ ಶೀರ್ಷಿಕೆಯನ್ನು ಕೊಟ್ಟದ್ದು ಏಕೆ? ಯಾವ ಕಾರಣಕ್ಕಾಗಿ ಮರೆತು ಹೋಯಿತು? ಯಾರು ಮರೆತ ಸಾಮ್ರಾಜ್ಯ? ಈ ಶೀರ್ಷಿಕೆಯ ಔಚಿತ್ಯವಾದರೂ ಏನು? ಮರೆತು ಹೋದ ಸಾಮ್ರಾಜ್ಯ, ಹೇಗೆ? ಎಂದು ನಮ್ಮ ಕೃತಿಯಲ್ಲಿ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ಆದರೆ ಪ್ರಾರಂಭದಲ್ಲಿ ಎರಡು ಮಾತಿನಲ್ಲಿ ಮುಗಿಸಿದ್ದಾರೆ.[೩] ಈ ಮೂಲಕ ಭಾರತದಲ್ಲಿ ಬ್ರಿಟಿಷರ ಸಾಮ್ರಾಜ್ಯವನ್ನು ನೆನೆಯಬೇಕು, ಅವರು ಜಾರಿಗೆ ತಂದ ಸುಧಾರಣೆಗಳು, ಶಿಕ್ಷಣ ಪದ್ಧತಿ, ಸಂಪರ್ಕ ಸಾಧನಗಳು ಹೇಗೆ ಭಾರತವನ್ನು ಬದಲಾಯಿಸಿವೆ. ಆದರೆ ಇವುಗಳನ್ನು ಭಾರತೀಯರು ಮನನ ಮಾಡಿಕೊಳ್ಳುತ್ತಿಲ್ಲ. ವಿಜಯನಗರ ಸಾಮ್ರಾಜ್ಯದಂತೆ ಬ್ರಿಟಿಷರ ಸಾಮ್ರಾಜ್ಯವು ವೈಭವಯುತವಾಗಿ ಇಡೀ ಭಾರತವನ್ನೇ ತನ್ನ ಕಪಿ ಮುಷ್ಠಿಯಲ್ಲಿಟ್ಟುಕೊಂಡು ಆಳ್ವಿಕೆ ನಡೆಸಿದೆ ಎಂಬುದನ್ನು ಸೂಚಿಸುವ ಸಲುವಾಗಿಯೇ ಈ ಸಾಮ್ರಾಜ್ಯವನ್ನು ತಮ್ಮ ನೀತಿಗನುಗುಣವಾಗಿ ರಚಿಸಲಾಗಿದೆ. ದಕ್ಷಿಣ ಭಾರತದಲ್ಲಿ ತಮ್ಮ ನೆಲೆಯನ್ನು ಕಂಡುಕೊಳ್ಳುವ ಸಲುವಾಗಿಯೇ ಈ ಕೃತಿಯನ್ನು ರಚಿಸಲಾಯಿತು. ಈ ಕಾರ್ಯಕ್ಕಾಗಿ ಸಿವೆಲ್‌ರನ್ನು ನಿಯೋಜಿಸಿದಂತಿದೆ. ಉತ್ತರದಿಂದ ದಕ್ಷಿಣದವರೆಗೆ

ಪೂರ್ವದ ಅರಬ್ಬಿ ಸಮುದ್ರದಿಂದ, ಪಶ್ಚಿಮದ ಬಂಗಾಳಕೊಲ್ಲಿಯವರೆಗೆ ಇವರ ಸಾಮ್ರಾಜ್ಯವನ್ನು ವಿಸ್ತರಿಸುವ ಗುರಿಯನ್ನು ಹೊಂದಿತ್ತು. ಇದಕ್ಕೆ ಅಲ್ಲಲ್ಲಿ ತಡೆ ಬಂದರು ಯಶಸ್ವಿಯಾಗಿ ನಿಯಂತ್ರಿಸಿದರು.

ರಾಬರ್ಟ್ ಸಿವೆಲ್‌ರ ಪ್ರಮುಖ ನಿಲುವು ಏನಾಗಿತ್ತು ಎಂಬುದರ ಕುರಿತು ಚಿಂತಿಸುವ ಅಗತ್ಯವಿದೆ. ಭಾರತೀಯರಿಗೆ ಇತಿಹಾಸದ ಪ್ರಜ್ಞೆ ಇಲ್ಲ ಎನ್ನುವುದನ್ನು ಅರಿತ ಇವರು ಒಂದು ಸಾಮ್ರಾಜ್ಯ ಉಜ್ವಲವಾಗಿ ಬಾಳಿದೆ. ಅದರ ಇತಿಹಾಸವು ಜನರ ಮನಸ್ಸಿನಿಂದ ಮರೆಯಾಗಿರುವುದನ್ನು ನೆನಪಿಸುವ, ಅದರ ವೈಭವದ ದಿನಗಳನ್ನು ಮೆಲುಕು ಹಾಕುವ ಆ ಮೂಲಕ ಬ್ರಿಟಿಷ್ ಸಾಮ್ರಾಜ್ಯದ ಸ್ಥಿತಿಗತಿ, ಅದರ ಕಾರ್ಯವೈಖರಿ ಹಾಗೂ ಬ್ರಿಟಿಷ್ ಸಾಮ್ರಾಜ್ಯದ ವೈಭವವನ್ನು ಈ ಸಾಮ್ರಾಜ್ಯದೊಡನೆ ಸಮೀಕರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಹಿಂದೂ ಮತ್ತು ಮುಸ್ಲಿಂರಲ್ಲಿ ಒಡಕು ಮೂಡಿಸಿ ಒಂದು ಬಲಿಷ್ಠ ಬ್ರಿಟಿಷ್ ಸಾಮ್ರಾಜ್ಯವನ್ನು ನಿರ್ಮಿಸುವ ಮಹತ್ವಾಕಾಂಕ್ಷೆಯಿತ್ತು. ಈ ಕೃತಿಯು ಇದರ ಮೇಲೆ ಇನ್ನಷ್ಟು ಪ್ರಭಾವ ಬೀರಿತು. ಬ್ರಿಟಿಷರು, ಭಾರತದಾದ್ಯಂತ ಒಂದೇ ಸಾಮ್ರಾಜ್ಯವಿರಬೇಕು. ಅದು ಬ್ರಿಟಿಷ್ ಸಾಮ್ರಾಜ್ಯವಿರಬೇಕು ಎಂಬ ನೀತಿಗೆ ಪ್ರಚೋದಕವಾಗಿ, ಈ ವಿಜಯನಗರದ ಚರಿತ್ರೆಯನ್ನು ಸಮೀಕರಿಸುವ ಪ್ರಯತ್ನ ಮಾಡಲಾಗಿದೆ. ರಾಬರ್ಟ್ ಸಿವೆಲ್‌ರು ಕರ್ನಾಟಕದಲ್ಲಿ ಅಷ್ಟೇ ಪ್ರಮುಖವಾಗಿ ಆಳ್ವಿಕೆ ನಡೆಸಿದ ರಾಜ ಮನೆತನಗಳಿದ್ದರು ಅವುಗಳನ್ನೇಕ ಗಣನೆಗೆ ತೆಗೆದುಕೊಳ್ಳಲಿಲ್ಲ. ಆ ಕ್ಷೇತ್ರಗಳಲ್ಲಿ ಅಪಾರವಾದ ಯಶಸ್ಸುಗಳಿವೆ. ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು ಕರ್ನಾಟಕವನ್ನು ಏಕಾಚಕ್ರಾಧಿಪತ್ಯಕ್ಕೆ ಒಳಪಡಿಸಿದ್ದಾರೆ. ಅವರನ್ನು ಕಡೆಗಣಿಸಿ ಈ ಸಾಮ್ರಾಜ್ಯವನ್ನೇ ಏಕೆ ಆಯ್ದುಕೊಳ್ಳಬೇಕಾಗಿತ್ತು. ಇಲ್ಲಿ ಹಿಂದೂ ಮತ್ತು ಮುಸ್ಲಿಮರು ಭಾವೈಕ್ಯದಿಂದ ಇದ್ದವರು. ಇವರನ್ನು 'ಒಡೆದು ಆಳುವ' ಸಲುವಾಗಿಯೇ ಈ ಸಾಮ್ರಾಜ್ಯದ ವಸ್ತು ವಿಷಯವನ್ನು ಆಯ್ದುಕೊಂಡಿರಬಹುದು.

ರಾಬರ್ಟ್ ಸಿವೆಲ್‌ರು ತಮ್ಮ ಕೃತಿಯಲ್ಲಿ ಹಿಂದೂ ಅರಸರನ್ನು ಮತ್ತು ಮುಸ್ಲಿಂ ಶಾಹಿ ಅರಸರು, ಬಹುಮನಿ ಸುಲ್ತಾನರ ನಡುವೆ ನಡೆದ ಯುದ್ಧಗಳನ್ನು ತಮ್ಮ ಬ್ರಿಟಿಷ್‌ರ ನೀತಿಗನುಸಾರವಾಗಿ ಬಳಸಿಕೊಂಡಿದ್ದಾರೆ. ಪ್ರತಿಯೊಂದು ರಾಜಮನೆತನದಲ್ಲಿ ಕುಟಿಲೋಪಾಯಗಳು, ಷಡ್ಯಂತ್ರಗಳನ್ನು ನೋಡಬಹುದು. ಅದೇ ರೀತಿಯಾಗಿ ಇಲ್ಲಿ ಬ್ರಿಟಿಷರ ಮತ್ತು ಪೋರ್ಚುಗೀಸರ ನಡುವಿನ ತಿಕ್ಕಾಟ, ವೈರುಧ್ಯಗಳು, ಅವರು ಯುದ್ಧಗಳನ್ನು ರಾಜ್ಯದಾಹದ ಹಿನ್ನೆಲೆಯಲ್ಲಿ ಮಾಡುತ್ತಿದ್ದುದನ್ನು ಗಮನಿಸಬಹುದು. ಬ್ರಿಟಿಷರು ಬೇರೆ ಯಾವ ಐರೋಪ್ಯರು ಈ ಪ್ರದೇಶದ ಮೇಲೆ ಹಿಡಿತ ಸಾಧಿಸುವುದನ್ನು ಸಹಿಸದಾಗಿದ್ದರು. ಈ ಸಲುವಾಗಿಯೇ ರಾಬರ್ಟ್ ಸಿವೆಲ್‌ರು ಈ ಕೃತಿಯನ್ನು ರಚಿಸಿ ಸಾಮ್ರಾಜ್ಯಶಾಹಿ ನೀತಿಯನ್ನು ಹೆಚ್ಚು ಪ್ರಚುರಪಡಿಸಿದ್ದಾರೆ.

## ೪.೨. ಕೋಮುವಾದಿ ಸೈದ್ಧಾಂತಿಕತೆ

ಭಾರತದ ಚರಿತ್ರೆಯನ್ನು ನಾವು ಅಭ್ಯಾಸಿಸುವಾಗ ಪ್ರಮುಖವಾಗಿ ಮೂರು ಕಾಲಘಟ್ಟಗಳನ್ನು ನೋಡುತ್ತೇವೆ. ಅವುಗಳನ್ನು ಮೊದಲಿಗೆ ಪರಿಚಯಿಸಿದ್ದು ಜೇಮ್ಸ್ ಮಿಲ್. ೧೮೧೭ರಲ್ಲಿ ತನ್ನ 'ಎ ಹಿಸ್ಟರಿ ಆಫ್ ಬ್ರಿಟಿಷ್ ಇಂಡಿಯಾ' ಕೃತಿಯಲ್ಲಿ. ಮಧ್ಯಕಾಲೀನ ಭಾರತದವರೆಗೂ ಭಾರತದಲ್ಲಿ ಯಾವ ಕೋಮುಭಾವನೆ ಇರಲಿಲ್ಲ. ಬ್ರಿಟಿಷರು ಮೊದಲಿಗೆ ಇದನ್ನು ಹುಟ್ಟು ಹಾಕಿದರು. ಅವರಲ್ಲಿ ಮೊದಲಿಗರನ್ನು ಈಗಾಗಲೇ ಉಲ್ಲೇಖಿಸಲಾಗಿದೆ ಅವರಂತೆಯೇ, ಜಿ.ಯು.ಪೋಪ್, ವಿ.ಎ.ಸ್ಮಿತ್, ಈಲಿಯೇಟ್, ಮಾರ್ಕ್‌ವಿಲ್ಕ್ಸ್, ಇವರ ಸಾಲಿಗೆ ಸೇರುವ ಇನ್ನೊಬ್ಬ ಬ್ರಿಟಿಷ್ ಅಧಿಕಾರಿ ಎಂದರೆ ರಾಬರ್ಟ್ ಸಿವೆಲ್. ಇವರು ಅನೇಕ ಕೃತಿಗಳನ್ನು ರಚಿಸಿದ್ದು, ಪ್ರಮುಖವಾದುದೆಂದರೆ 'ಎ ಫರ್ ಗಾಟನ್ ಎಂಪೈರ್'. ಈ ಕೃತಿಯ ಮೂಲಕ ಹಿಂದೂ ಮತ್ತು ಮುಸ್ಲಿಂರ ಸಾಮರಸ್ಯವನ್ನು ಕದಡುವಂತ ಕಾರ್ಯಕ್ಕೆ ಕೈ ಹಾಕಿರುವರು. ಮೇಲ್ವರ್ಗದ ಹಿಂದೂಗಳಲ್ಲಿ ಹಿಂದುತ್ವದ ಭಾವನೆಯನ್ನು ಭಿತ್ತಿ ಬೆಳೆಸಿದ್ದಾರೆ. ಇಲ್ಲಿ ಬ್ರಿಟಿಷರು ತಮ್ಮ ಧರ್ಮವನ್ನು ಪ್ರಸಾರ ಹಾಗೂ ಪ್ರಚಾರ ಮಾಡುವ ಸಲುವಾಗಿ ಭಾರತೀಯರನ್ನು ಒಡೆದು ಅಲ್ಲಿ ತಮ್ಮ ಧರ್ಮವನ್ನು ತಂದಿಡುವುದು.

ಕೋಮುವಾದಿ ಬರವಣಿಗೆಯ ಕ್ರಮವು ಆರಂಭಗೊಂಡಿದ್ದು ಜೇಮ್ಸ್‌ಮಿಲ್‌ನಿಂದ. ಆದರೆ ಅದನ್ನು ಬೆಳೆಸಿದವರಲ್ಲಿ ರಾಬರ್ಟ್ ಸಿವೆಲ್‌ರು ಸಹ ಒಬ್ಬರು. ವಾಸ್ತವವಾಗಿ ದಕ್ಷಿಣ ಭಾರತದಲ್ಲಿ ಹೊಯ್ಸಳರ ಹಾಗೂ ವಾರಂಗಲ್ಲಿನ ಕಾಕತೀಯರ ನಂತರ ರಾಜಕೀಯ ಶೂನ್ಯವನ್ನು ತುಂಬಿದವರು ವಿಜಯನಗರದ ಅರಸರು. ಆದರೆ ಸಿವೆಲ್‌ರು ಉದ್ಧರಿಸುವುದು ಇದು ಮಹಮ್ಮದೀಯರು ಭಾರತವನ್ನು ಗೆಲ್ಲಲು ಸತತವಾಗಿ ಮಾಡಿದ ಪ್ರಯತ್ನಗಳ ಫಲವಾಗಿತ್ತು.[೪] ಎಂದಿದ್ದಾರೆ. ನೈಜವಾಗಿ ಮಹಮ್ಮದೀಯರು ಕೇವಲ ಸಂಪತ್ತಿನ ಆಸೆಗಾಗಿ ದಾಳಿ ಮಾಡಿದರೆ ಹೊರತು ಸಾಮ್ರಾಜ್ಯ ಸ್ಥಾಪನೆ ಮಾಡಲು ಅವರು ಮುಂದಾಗಿರಲಿಲ್ಲ. ಭಾರತೀಯ ವಿದ್ವಾಂಸರು ಸಿವೆಲ್‌ರು ಹಾಕಿಕೊಟ್ಟ ಹೆಜ್ಜೆಯನ್ನೇ ತುಳಿಯುತ್ತಿದ್ದಾರೆ. ಈ ಸಾಮ್ರಾಜ್ಯ ಏಳ್ಗೆಗೆ ಬರಲು ವಿದ್ಯಾರಣ್ಯರು ಕಾರಣರೆಂದು ತಿಳಿಯುವರು. ಆದರೆ ವಿದ್ಯಾರಣ್ಯರಿಗೆ ಒಬ್ಬ ಉತ್ತಮ ನಾಯಕನ ಅವಶ್ಯಕತೆಯಿತ್ತು. ಏಕೆಂದರೆ ಧಾರ್ಮಿಕವಾಗಿ, ಆರ್ಥಿಕವಾಗಿ ಹಾಗೂ ಜನಶಕ್ತಿಯನ್ನು ಬಳಸಿಕೊಳ್ಳಲು, ಇದನ್ನು ಪರಸ್ಪರರು ಆಶ್ರಯಿಸಬೇಕಾಗಿತ್ತು.

ಕೋಮುವಾದದ ಪ್ರಮುಖ ಉದ್ದೇಶವೆಂದರೆ ಹಿಂದೂ ಮತ್ತು ಮುಸ್ಲಿಮರಲ್ಲಿ ಒಡಕು ಮೂಡಿಸಿ, ರಾಜಕೀಯ ಲಾಭ ಪಡೆಯುವುದಾಗಿತ್ತು. ಈ ಕೃತಿಯು ರಚನೆಯಾದ ನಂತರ ಇದರ ಪ್ರಭಾವ ಇನ್ನೂ ಹೆಚ್ಚು ಆಯಿತು ಎನ್ನಬಹುದು. ಏಕೆಂದರೆ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಉದ್ದೇಶವೇ ಹಿಂದೂ ಧರ್ಮವನ್ನು ರಕ್ಷಿಸುವುದು ಹಾಗೂ ಹಿಂದೂ ಸಾಮ್ರಾಜ್ಯದ ಸ್ಥಾಪನೆಯನ್ನು ಸಮರ್ಥಿಸುವುದು. ಆದರೆ

ದಕ್ಷಿಣ ಭಾರತದ ಮೇಲೆ ಮುಸ್ಲಿಮರ ಆಕ್ರಮಣಗಳ ಭಯವು ಕಾಡುತ್ತಿತ್ತು[೫] ಎಂದು ಉಲ್ಲೇಖಿಸಿದ್ದಾರೆ. ಸಿವೆಲ್‌ರು ೧೩೪೪ರ ಸುಮಾರಿಗೆ ವಿದೇಶಿಯರ ದಾಳಿಗಳನ್ನು ತಡೆಗಟ್ಟಲು ಸಾಧ್ಯವಾಯಿತು. ಅದು ಆನೆಗೊಂದಿಯ ಚಿಕ್ಕ ಪಾಳೆಯಪಟ್ಟುವಾಗಿತ್ತು. ಇದೇ ಮುಂದೆ ವಿಜಯನಗರ ಸಾಮ್ರಾಜ್ಯವಾಗಿ ಬೆಳೆದು ದಕ್ಷಿಣದ ಎಲ್ಲ ರಾಜ್ಯಗಳ ಮೇಲೆ ಹಿಡಿತ ಸಾಧಿಸಿತು ಎಂಬುದನ್ನು ಗಮನಿಸಿದಾಗ, ಮುಸ್ಲಿಮ ಅರಸರು ಕೇವಲ ಸಂಪತ್ತನ್ನು ದೋಚುವ ಸಲುವಾಗಿಯೇ ದಾಳಿ ನಡೆಸಿದರು ಎಂದು ಅರಿಯಬಹುದು.

ವಿಜಯನಗರದ ಅರಸರಿಗೂ ಹಾಗೂ ಶಾಹಿಸುಲ್ತಾನರಿಗೂ ವೈರತ್ವ ಶಾಶ್ವತವೇನೋ ಎಂಬಂತೆ ಚಿತ್ರಿಸಿದ್ದಾರೆ. ಇವರ ಮಧ್ಯೆ ಎಷ್ಟೇ ಸಾಮರಸ್ಯವಿದ್ದರೂ ಬದ್ಧ ವೈರತ್ವವನ್ನು ಹುಟ್ಟುಹಾಕಿದ್ದಾರೆ. ವಿಜಯನಗರ ಸಾಮ್ರಾಜ್ಯವಿರುವುದೇ ಮುಸ್ಲಿಮರನ್ನು ಮಟ್ಟ ಹಾಕಲು ಎಂಬಂತೆ ತೋರಿಸಿಕೊಟ್ಟಿದ್ದಾರೆ. ವಿಜಯನಗರ ಸ್ಥಾಪನೆಯ ಉದ್ದೇಶವನ್ನು ಮತೀಯ ನೆಲೆಯಲ್ಲಿ ನೋಡಲಾಗುವುದು. ಇದು ಮೇಲ್ವರ್ಗದಲ್ಲಿ ಹಿಂದೂತ್ವದ ಭಾವನೆ ಬೆಳೆಸಲು ಸಹಾಯಕವಾಯಿತು. ಸಿವೆಲ್‌ರು ಪೂಜಾಸ್ಥಳಗಳಲ್ಲಿ ಇದ್ದಿರಬಹುದಾದ ನಿಧಿಗಾಗಿ ಆಕ್ರಮಣಗಳು ನಡೆದಿರಬಹುದು ಎಂದು ಉದ್ಧರಿಸುವಾಗ, ಅದನ್ನು ಮತೀಯ ಕಾರಣಕ್ಕಾಗಿ ಮಾಡಲಾಯಿತೆಂದು ವಿಶ್ಲೇಷಿಸಲಾಗುವ ಆಕರಗಳನ್ನು ಎಲ್ಲಿಯೂ ಹೇಳದಿರುವುದು ಗಮನಾರ್ಹ. ಉದಾ: ಅಹಮದ್ ನಗರದಲ್ಲಿ ಹಿಂದೂಗಳು ಘೋರ ಅತ್ಯಾಚಾರಗಳನ್ನು ಎಸಗಿದರು. ಮಸೀದಿಗಳಲ್ಲಿ ಹಾಡುತ್ತ ಹಾಗೂ ತಮ್ಮ ಮೂಢ ಪೂಜೆ ಮಾಡುತ್ತಾ, ಮಹಮ್ಮದೀಯ ಪವಿತ್ರ ಧರ್ಮಕ್ಕೆ ಯಾವ ಅಗೌರವದ ಲಕ್ಷಣವನ್ನು ತೋರಿಸದೇ ಬಿಡಲಿಲ್ಲ.[೬] ಈ ರೀತಿಯಾಗಿ ಎಲ್ಲೇ ಸೈನ್ಯ ಕಾರ್ಯಚರಣೆ ನಡೆದರು ಈ ರೀತಿಯ ಉಲ್ಲೇಖಗಳು ಬರುವುದನ್ನು ನೋಡಬಹುದು. ಸಿವೆಲ್‌ರು ವಿಜಯನಗರ ಸಾಮ್ರಾಜ್ಯದ ಅವನತಿಗೆ ಸಂಪೂರ್ಣವಾಗಿ ಮುಸ್ಲಿಮರೇ ಹೊಣೆ ಎಂದು ಹೇಳುವುದಿಲ್ಲ. ಏಕೆಂದರೆ ಈ ಕಾರ್ಯದಲ್ಲಿ ಅತೃಪ್ತ ಹಿಂದೂಗಳು ಭಾಗವಹಿಸಿದ್ದರು ಎಂಬುದನ್ನು ಉಲ್ಲೇಖಿಸಿದ್ದಾರೆ.[೭]

ವಿಜಯನಗರದ ಅವನತಿಯನ್ನು ಸಂಪೂರ್ಣವಾಗಿ ಮುಸ್ಲಿಂ ಶಾಹಿ ಸುಲ್ತಾನರ ಮೇಲೆ ನೇರ ಹೊಣೆಗಾರಿಕೆ ಮಾಡಿದ್ದಾರೆ. ಮುಸ್ಲಿಮರಲ್ಲಿದ್ದ ಇಬ್ಬರು ದಂಡನಾಯಕರು ಪಕ್ಷಪಾತ ಮಾಡಿದರೆಂದು, ಅವರು ಸೈನ್ಯದ ಎಲ್ಲಾ ಒಳ ಸಂಚುಗಳನ್ನು ಎದುರಾಳಿಗೆ ತೋರಿಸಿಕೊಟ್ಟಿದ್ದಾರೆಂದು ಅಭಿಪ್ರಾಯಪಡುವರು. ಅವನತಿಯ ಕುರಿತು, ನೈಜವಾಗಿ ನಿಷ್ಪಕ್ಷಪಾತವಾಗಿ ಅವಲೋಕಿಸುವ ಅಗತ್ಯತೆ ಇದೆ. ತಾಳಿಕೋಟೆಯುದ್ಧದ ಸಂದರ್ಭವು ಹೆಚ್ಚಾಗಿ ಕೋಮುಭಾವನೆ ಕೆರಳಿಸುವಂತೆ ಮಾಡಿದ್ದಾರೆ. ಮುಸ್ಲಿಮರ ದಾಳಿಯಿಂದಾಗಿ ಸುಮಾರು ಎರಡೂವರೆ ಶತಮಾನಗಳ ಕಾಲ ಆಳ್ವಿಕೆ ನಡೆಸಿದ ರಾಜಮನೆತನ ಅವನತಿಯತ್ತ ಸಾಗುವಂತೆ ಮಾಡಿದರು. ವಿಜಯನಗರದ ರಾಜಧಾನಿಯು ಮುಸ್ಲಿಮರಿಂದಲೇ ನಾಶವಾಯಿತು ಎಂದು ನಂತರ ಬರೆದ ಚರಿತ್ರೆಕಾರರು ಅಭಿಪ್ರಾಯಪಟ್ಟಿದ್ದಾರೆ. ವಿನಾಶದಲ್ಲಿ ಹಿಂದೂಗಳಿಗೂ ಪಾಲಿತ್ತು ಎನ್ನುವುದನ್ನು ಮರೆ ಮಾಚಿಸಿದ್ದಾರೆ. ಅವನತಿಯ ಸಂದರ್ಭದಲ್ಲಿ ರಾಮರಾಯನು ದರ್ಪದಿಂದ ಹಾಗೂ ಶಾಹಿ ಸುಲ್ತಾನರನ್ನು

ಕೀಳಾಗಿ ನೋಡುತ್ತಿದ್ದನು. ಇದನ್ನು ಮುರಿಯಲೆಂದೇ ಹಾಗೂ ಹಿಂದೂ ರಾಜ್ಯವನ್ನು ಕೇವಲ ಒಬ್ಬ ಶಾಹಿಸುಲ್ತಾನನಿಂದ ಸೋಲಿಸುವುದು ಅಸಾಧ್ಯ ಎಂದು, ಇದನ್ನರಿತ ಶಾಹಿಸುಲ್ತಾನರು ಒಟ್ಟಾಗಿ ವಿಜಯನಗರದ ಮೇಲೆ ದಾಳಿ ಮಾಡಿದರು. ಇದನ್ನು ಒಂದು ಹಿಂದೂ ಸಾಮ್ರಾಜ್ಯದ ಪತನಕ್ಕೆ ಹೋಲಿಸಿದ್ದಾರೆ.

ಬ್ರಿಟಿಷರಿಗೆ ಭಾರತದಲ್ಲಿ ಒಂದು ಸಾಮ್ರಾಜ್ಯ ಸ್ಥಾಪಿಸಬೇಕೆಂಬ ಹಂಬಲದಿಂದ, ಅನೇಕ ಐತಿಹಾಸಿಕ ಗ್ರಂಥಗಳನ್ನು ರಚಿಸುವ ಮೂಲಕ ಹಾಗೂ ಈ ತೆರನಾಗಿ ರಚಿಸಿದ ಕೃತಿಗಳನ್ನು ತಮ್ಮ ವಸಾಹತುಶಾಹಿ ನೀತಿಯೊಂದಿಗೆ ಮೇಳೈಸಿಕೊಂಡರು. ಇಲ್ಲಿ ಕೋಮುವಾದಿ ಭಾವನೆ, ಸಾಮ್ರಾಜ್ಯಶಾಹಿ ನೀತಿಯನ್ನು ಪ್ರಕಟಪಡಿಸುವರು. 'ಎ ಫರ್‌ಗಾಟನ್ ಎಂಪೈರ್' ಕೃತಿಯಲ್ಲಿ 'ವಿಜಯನಗರ ಸಾಮ್ರಾಜ್ಯವನ್ನು ಒಂದು ಹಿಂದೂ ಸಾಮ್ರಾಜ್ಯ'ವೆಂಬಂತೆ ಚಿತ್ರಿಸಿದ್ದಾರೆ. ಪೂರ್ವಗ್ರಹ ಪೀಡಿತರಾಗಿ ಈ ರೀತಿಯ ರಚನೆಯಲ್ಲಿ ತೊಡಗಿದ್ದಾರೆ. ಬ್ರಿಟಿಷರ ಬರಹಗಳು ಎಂದಾಕ್ಷಣ ಅವು ಭಾರತದ ಚರಿತ್ರೆಯನ್ನು ವಿವಿಧ ಮಜಲುಗಳಲ್ಲಿ ವಿಂಗಡಿಸಿ ಬರೆದಿರುವರು. ಇವುಗಳನ್ನು ಅನುಮಾನದಿಂದ ನೋಡುವರು. ಭಾರತೀಯರಿಗೆ ಉಪಯುಕ್ತವಾದ ಮಾಹಿತಿಯನ್ನು ಮಾತ್ರ ನೀಡಿದರೆ ಸಾಲದು, ಅದು ಎಷ್ಟು ಸಮಂಜಸವಾಗಿದೆ, ವಾಸ್ತವಕ್ಕೆ ಎಷ್ಟು ಹತ್ತಿರದಲ್ಲಿದೆ. ಅದು ಯಾವ ಅಂಶಗಳಿಂದ ಕೂಡಿದೆ ಎಂಬುದರ ಕುರಿತ ವಿಶ್ಲೇಷಣೆಯೂ ಅಗತ್ಯ.

ವಿಜಯನಗರ ಸಾಮ್ರಾಜ್ಯದಲ್ಲಿ ಇಂದಿಗೂ ನೋಡಬಹುದಾದ ಕಮಲಮಹಲ್, ಗಗನ್ ಮಹಲ್, ಆನೆಲಾಯ, ರಾಣಿಯರ ಸ್ನಾನಗೃಹಗಳು ಹಿಂದೂ ಮತ್ತು ಮುಸ್ಲಿಮ್ ಶೈಲಿಯ ಮಿಶ್ರಣದಿಂದ ಕೂಡಿರುವಂತದ್ದು. ಇದು ಹಿಂದೂ ಮತ್ತು ಮುಸ್ಲಿಂರ ಮಧ್ಯೆ ಇರುವ ಸಾಮರಸ್ಯಕ್ಕೆ ಹಿಡಿದಿರುವ ಕೈಗನ್ನಡಿ ಎಂದರೆ ತಪ್ಪಾಗಲಾರದು ವಿಜಯನಗರ ಸಾಮ್ರಾಜ್ಯವನ್ನು ಹಿಂದೂ ಸಾಮ್ರಾಜ್ಯದಂತೆ ವರ್ಣಿಸಿದ್ದಾರೆ. ಹಿಂದೂ, ಮುಸ್ಲಿಮ್, ಕ್ರೈಸ್ತರು ವಾಸವಾಗಿದ್ದ, ನೆಲೆಸಿದ್ದ ಸಾಮ್ರಾಜ್ಯವನ್ನು 'ಹಿಂದೂ ಸಾಮ್ರಾಜ್ಯ' ಎಂಬಂತೆ ಚಿತ್ರಿಸಿರುವುದು ದುರಂತ. ಈ ಸಾಮ್ರಾಜ್ಯವು ಕೇವಲ ಮುಸ್ಲಿಮರ ಮೇಲೆ ದಾಳಿ ಮಾಡಿರಲಿಲ್ಲ. ಬದಲಿಗೆ ಕ್ರೈಸ್ತರ ಮೇಲೂ ದಾಳಿ ಮಾಡಿರುವುದಿದೆ.[8] ಹೀಗಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ಹಿಂದೂ, ಮುಸ್ಲಿಮ್, ಕ್ರೈಸ್ತರು ಸಾಮರಸ್ಯದಿಂದಲೇ ಇದ್ದರು ಎನ್ನುವ ಕಲ್ಪನೆ ಬರುವುದರಲ್ಲಿ ಅನುಮಾನವಿಲ್ಲ. ವಿಜಯನಗರ ಸಾಮ್ರಾಜ್ಯದ ವೈಭವಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ ವಿದೇಶಿ ಯಾತ್ರಿಕರ ಹೇಳಿಕೆಗಳನ್ನು ಹೆಚ್ಚಾಗಿ ಅವಲಂಬಿಸಿರುವುದರಿಂದ ಇದರ ಪರಿಣಾಮ ಹೆಚ್ಚು ಎನ್ನಬಹುದು. ಪೋರ್ಚುಗೀಸರಿಗೂ ಮತ್ತು ಬ್ರಿಟಿಷರಿಗೂ ವ್ಯಾಪಾರ ವಹಿವಾಟಿನಲ್ಲಿ ಆದ ಎಡರು ತೊಡರುಗಳನ್ನು ಹಾಗೂ ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಲುವಾಗಿ ನಡೆದ ಘಟನೆಗಳನ್ನು ಈ ಕೃತಿಯ ಮೂಲಕ ಪರೋಕ್ಷವಾಗಿ ವ್ಯಕ್ತಪಡಿಸಿದ್ದಾರೆ.

## ೪.೩. ವಸಾಹತುಶಾಹಿ ಆಯಾಮಗಳು

ಭಾರತಕ್ಕೆ ಬಂದ ಬ್ರಿಟಿಷ್ ಅಧಿಕಾರಿಗಳು ಇಲ್ಲಿನ ಸಮಾಜ, ಸಂಸ್ಕೃತಿ, ಆಚಾರ, ವಿಚಾರಗಳನ್ನು ಅರಿತರು. ಬ್ರಿಟಿಷ್ ಆಡಳಿತದಲ್ಲಿ ಹಲವು ಮಹತ್ತ್ವದ ಸಂಶೋಧನೆಗಳು, ಸಂಘ ಸಂಸ್ಥೆಗಳ ಮೂಲಕ ಸಾಮ್ರಾಜ್ಯಗಳ ಇತಿಹಾಸ ರಚನೆಯಲ್ಲಿ ನಿರತರಾದರು. "ರಾಯಲ್ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್" ಈ ಸಂಸ್ಥೆಯು ಇಂತಹ ಉದ್ದೇಶಗಳಿಗಾಗಿಯೇ ಸ್ಥಾಪಿತವಾಗಿತ್ತು. ಸರ್ ವಿಲಿಯಂ ಜೋನ್ಸ್‌ರಿಂದ ಪ್ರಾರಂಭವಾದ ಈ ಸಂಸ್ಥೆಯು ಹಲವು ಚರಿತ್ರೆಕಾರರನ್ನು, ಭಾಷಾ ಪಂಡಿತರನ್ನು ಶಾಸನತಜ್ಞರನ್ನು ಹುಟ್ಟು ಹಾಕಿದೆ. ಅಂಥವರಲ್ಲಿ ಜೇಮ್ಸ್‌ಮಿಲ್, ಜಿ.ಯು.ಪೋಪ್, ಈಲಿಯೇಟ್, ವಿ.ಎ.ಸ್ಮಿತ್ ಮೊದಲಿಗರು. ಇವರು ಬರೆದ ಚರಿತ್ರೆಯು ವಸಾಹತುಶಾಹಿ, ಕೋಮುಭಾವನೆ ಮೂಡಿಸುವಂತಹವು. ಇವರ ಸಾಲಿಗೆ ಸೇರುವ ಇನ್ನೊಬ್ಬ ವಸಾಹತುಶಾಹಿ ಚರಿತ್ರಕಾರ ಎಂದರೆ ರಾಬರ್ಟ್ ಸಿವೆಲ್.

ಸಾಮಾನ್ಯವಾಗಿ ವಸಾಹತುಶಾಹಿ ಎಂದರೆ ಕೈಗಾರಿಕೆ, ತಂತ್ರಜ್ಞಾನ, ಆರ್ಥಿಕ, ಸೈನಿಕ ಮತ್ತು ವಿಜ್ಞಾನ ರಂಗಗಳಲ್ಲಿ ಮುಂದುವರಿದ ರಾಷ್ಟ್ರಗಳು ಅನಭಿವೃದ್ಧಿ ಹೊಂದಿದ ವಸಾಹತುಗಳ ಮೇಲೆ ಅಧಿಕಾರ ಹೇರಿ ಅಲ್ಲಿ ಉತ್ಪಾದನೆಯಾಗುವ ಸಂಪತ್ತನ್ನು ತಮ್ಮ ದೇಶಗಳ ಬೆಳವಣಿಗೆಗೋಸ್ಕರ ಕೊಂಡೊಯ್ಯುವ ಪ್ರಕ್ರಿಯೆಯನ್ನು ವಸಾಹತುಶಾಹಿ ಎಂದು ಕರೆಯಲಾಗುತ್ತದೆ. ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ನೀತಿಯು ಒಂದರೊಳಗೊಂದು ಸೇರಿಕೊಂಡಿವೆ. ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎನ್ನಬಹುದು. ಈ ನೀತಿಯನ್ನು ಸಿವೆಲ್‌ರು ಅನುಸರಿಸಿದ್ದಾರೆ. 'ಇವರು ವಸಾಹತುಶಾಹಿಯ ಭಾಗವಾಗಿದ್ದ ಫಲಾನುಭವಿಗಳು. ಇವರ ಪ್ರಜ್ಞೆಯು ತೀವ್ರವಾಗಿದ್ದು, ರೂಪಗೊಂಡಿದ್ದು ವಸಾಹತುಶಾಹಿಯ ತಾತ್ವಿಕತೆಯಿಂದ'. ಇದನ್ನು ಮುಂದುವರಿಸಿದ ಸಿವೆಲ್‌ರು ತಮ್ಮ ಬರಹಗಳ ಮೂಲಕ ಈ ನೀತಿಯನ್ನು ಪ್ರಕಟಪಡಿಸಿದ್ದಾರೆ. ಇವರ 'ಎ ಫರ್‌ಗಾಟನ್ ಎಂಪೈರ್' ಕೃತಿಯು ಇದರಿಂದ ಹೊರತಾಗಿಲ್ಲ. ಇವರ ಈ ಕೃತಿಯು ಬ್ರಿಟಿಷರ 'ಒಡೆದು ಆಳುವ ನೀತಿ'ಯನ್ನು ಹೆಚ್ಚು ಪ್ರಚೋದಿಸಿದೆ. ಸಾಮಾನ್ಯವಾಗಿ ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ಹಿಂದೂ ಸಾಮ್ರಾಜ್ಯದ ಚರಿತ್ರೆಯಂತೆ ಚಿತ್ರಿಸಿರುವರು. ಇವರ ಈ ನಿಲುವು ಪ್ರಸ್ತುತದವರೆಗೂ ಅನ್ವಯಿಸುತ್ತದೆ. ಈ ಸಾಮ್ರಾಜ್ಯದಲ್ಲಿ ಹಲವಾರು ಭಾಷೆ, ಸಂಸ್ಕೃತಿಗಳ ಸಾಮಾನ್ಯ ಜನ ಒಟ್ಟಾಗಿ, ಸಾಮರಸ್ಯದಿಂದ ಬಾಳಿದ ಚರಿತ್ರೆಯನ್ನೇ ತಿರುಚಿರುವ ಪರಿಣಾಮವಾಗಿ ಆಧುನಿಕ ಭಾರತ ಹಾಗೂ ಕರ್ನಾಟಕದಲ್ಲಿ ಸಾಮರಸ್ಯ ಹಾಗೂ ಸೌಹಾರ್ದಗಳಿಗೆ ಧಕ್ಕೆಯಾಗಿದೆ. ಇಂತಹ ಪರಿಣಾಮಕಾರಿಯಾದ ಚಿಂತನೆ ಸಿವೆಲ್‌ರಲ್ಲಿ ಮೊಳೆಯಲು ಅವರು ಬ್ರಿಟಿಷ್ ಅಧಿಕಾರಿಯಾಗಿದ್ದೇ ಕಾರಣ ಎನ್ನಬಹುದು. ಚರಿತ್ರೆಯುದ್ದಕ್ಕೂ ಸಂಘರ್ಷಗಳು, ಕುಟಿಲತೆ, ಮೋಸ, ಯುದ್ಧ, ಹಿಂಸೆ, ರಕ್ತಪಾತಗಳನ್ನು ನೋಡಿದಾಗ, ಇಡೀ ಚರಿತ್ರೆಯೇ ಅದೇ ರೀತಿಯಾಗಿರುತ್ತದೆ ಎಂದು ಊಹಿಸುವುದು ತಪ್ಪು. ಸಿವೆಲ್‌ರು ಈ ಸಾಮ್ರಾಜ್ಯವನ್ನು ಧರ್ಮಾಧಾರಿತವಾಗಿ ನೋಡಿದ್ದಾರೆ. ಯಾವುದೇ ಸಾಮ್ರಾಜ್ಯದಲ್ಲಿ ಜಾತಿ, ಧರ್ಮಾಧಾರಿತ

ಯುದ್ಧಗಳು ನಡೆಯುತ್ತಿರಲಿಲ್ಲ. ರಾಜಕೀಯ ಲಾಭ ಪಡೆಯಲು ಸಿವೆಲ್‌ರು ಈ ನೀತಿಯನ್ನು ಅನುಸರಿಸಿದ್ದಾರೆ. ಯಾವುದೇ ಸಾಮ್ರಾಜ್ಯವು ಉಜ್ವಲವಾಗಿ ಬೆಳೆಯಲು ಕೋಮು ಹಾಗೂ ಧರ್ಮವನ್ನು ಬಳಸಿಕೊಳ್ಳಬೇಕಾದ ಅಗತ್ಯವು ಇರಲಿಲ್ಲ. ವಿಜಯನಗರದ ಅರಸರು ಇತರೇ ಹಿಂದೂ ದೊರೆಗಳ ಮೇಲೆ ಯುದ್ಧ ಸಾರುತ್ತಿದ್ದರು. ಅಂತೆಯೇ ಶಾಹಿ ಸುಲ್ತಾನರು ಇತರೇ ಶಾಹಿ ಅರಸರ ಮೇಲೆ ಯುದ್ಧ ಸಾರುತ್ತಿದ್ದುದ್ದನ್ನು ನೋಡಬಹುದು.

ರಾಬರ್ಟ್ ಸಿವೆಲ್‌ರು ಬಳ್ಳಾರಿಯ ಕಲೆಕ್ಟರಾಗಿದ್ದಾಗ ಹಂಪಿ ಪ್ರದೇಶವನ್ನು ಸುತ್ತಾಡಿ ಇಲ್ಲಿನ ಚರಿತ್ರೆ ಸಂಸ್ಕೃತಿಯನ್ನು ಅರಿತರು. ಇಲ್ಲಿನ ಚರಿತ್ರೆಯನ್ನು ಕಟ್ಟಿಕೊಡುವ ನೆಪದಲ್ಲಿ ವಸಾಹತುಶಾಹಿ ಧೋರಣೆಯನ್ನು ಅನುಸರಿಸಿದ್ದಾರೆ. ಬ್ರಿಟಿಷರ ನೀತಿಗನುಸಾರವಾಗಿ ರಚಿತವಾದ ಈ ಕೃತಿಯು ಹಿಂದೂ ಮತ್ತು ಮುಸ್ಲಿಮರನ್ನು ಬೇರ್ಪಡಿಸಿ ಅದರ ರಾಜಕೀಯ ಲಾಭ ಪಡೆಯಲು ಹವಣಿಸಿ ಯಶಸ್ವಿಯಾದರು. ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ತಿರುಚಿ ಬರೆಯುವ ಪ್ರಯತ್ನ ಮಾಡಿದ್ದಾರೆ. ಮಧ್ಯಕಾಲೀನ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಯಾತ್ರಿಕರಿಂದ ಆಯ್ದ ಕಥಾನಕಗಳನ್ನು ಈ ಚರಿತ್ರೆಗೆ ಬಳಸಿಕೊಂಡಿದ್ದು, ಅವರ ವೈಭವಯುತವಾದ ಹೇಳಿಕೆಗಳನ್ನು ಹಾಗೆಯೇ ದಾಖಲಿಸಿಕೊಂಡು ಚರಿತ್ರೆಯನ್ನು ಹೆಣೆದಿರುವರು. ಈ ನೀತಿಯು ಸಾಮಾಜಿಕವಾಗಿ, ಸಾಂಸ್ಕೃತಿಕ, ಭೌತಿಕವಾಗಿ ಉನ್ನತ ಸ್ಥಾನಗಳಿಸಿದವರು ಅಂದರೆ ಐರೋಪ್ಯರು, ಇತರ ದೇಶಗಳ ಮೇಲೆ ಹೇರಿರುವ ಒಂದು ಶಾಸನ ಎನ್ನಬಹುದು. ಇದು ಯಾವುದೇ ಸಾಮ್ರಾಜ್ಯದ ಇತಿಹಾಸ, ಸಂಸ್ಕೃತಿ, ಜಾನಪದ ಆಗಿರಬಹುದು. ಇವುಗಳನ್ನು ಪರಿಶೀಲಿಸುವ ಒಂದು ಪ್ರಯತ್ನ ಮಾಡುವ ಅಗತ್ಯವಿದೆ.

ಯುರೋಪಿಯನ್ನರು ಹಾಗೂ ಆಂಗ್ಲರು ತಮ್ಮ ವ್ಯಾಪಾರ ವಹಿವಾಟುಗಳಿಗಾಗಿ ಜಗತ್ತಿನಾದ್ಯಂತ ಮಾರುಕಟ್ಟೆಯ ಕೇಂದ್ರಗಳನ್ನಾಗಿಸಿದ್ದೇ 'ವಸಾಹತು'ಗಳಾಗಿ ರೂಪು ತಳೆದವು. ಇವು ಕ್ರಮೇಣ ಸ್ಥಳೀಯ ವಿರೋಧಗಳಿಗೆ ಗುರಿಯಾದುದು ಇವರುಗಳ ಆಕ್ರಮಣಶೀಲ ಧೋರಣೆಗಳಿಂದಲೇ. ವಸಾಹತುಶಾಹಿ ಆಡಳಿತ ಪ್ರಭುಗಳು ಸ್ಥಳೀಯ ಸಾಂಸ್ಕೃತಿಕ ಅನನ್ಯತೆಗಳಿಗೆ ಭಂಗವನ್ನುಂಟು ಮಾಡಿದ್ದು, ಜಗತ್ತಿನಾದ್ಯಂತ ಉದಾಹರಣೆಗಳಾಗಿ ಅನಾವರಣಗೊಂಡಿವೆ. ಭಾರತದಲ್ಲಿ ವಸಾಹತುಶಾಹಿ ನೀತಿಯು ಹೆಚ್ಚು ಸ್ಫುಟಗೊಂಡಿದ್ದು, ಬ್ರಿಟಿಷರ ಆಡಳಿತವು ಭಾರತದಲ್ಲಿ ಬ್ರಿಟನ್ ರಾಣಿಯ ನೇರ ಆಳ್ವಿಕೆಗೆ ಒಳಪಟ್ಟಾಗ. ೧೮೫೭ರ ಸಿಪಾಯಿ ದಂಗೆಯ ಪರಿಣಾಮದಿಂದ 'ಎ ಫರ್‌ಗಾಟನ್ ಎಂಪೈರ್' ಕೃತಿಯು ನೇರವಾಗಿ ರಾಷ್ಟ್ರೀಯ ಚಳವಳಿಯ ಮೇಲೆ ಪರಿಣಾಮ ಬೀರಿತು. ಈ ನೀತಿಯಿಂದಾಗಿ ಈ ಕೃತಿಯನ್ನು ಒಂದು ರಾಷ್ಟ್ರೀಯ ಘಟನೆಯನ್ನಾಗಿ ಮೂಡಿಸಲು ಬಳಸಿಕೊಳ್ಳಲಾಯಿತು. ಬ್ರಿಟಿಷರ ವಿರುದ್ಧ ತೀವ್ರಗಾಮಿ ಹೋರಾಟ ಆಗಲೇ ಗರಿಗಟ್ಟುತ್ತಿದ್ದ ಕಾಲಮಾನ ಕೂಡ. ಈ ಸಂದರ್ಭದಲ್ಲಿ ಪ್ರಕಟವಾದ ಈ ಕೃತಿಯು ಭಾರತೀಯ ರಾಷ್ಟ್ರೀಯ ಹೋರಾಟದ ಮೇಲೆ ಹಾಗೂ ಕರ್ನಾಟಕ ಏಕೀಕರಣ ಚಳವಳಿಯ ಮೇಲೆ ಬೀರಿದ ಪರಿಣಾಮ ಅಪಾರ.

ಅಧ್ಯಾಯ ೫

# ತಳೆದ ನಿಲುವುಗಳು

೫

# ತಳೆದ ನಿಲುವುಗಳು

ಪ್ರಸ್ತುತ "ರಾಬರ್ಟ್ ಸಿವೆಲ್‌ರ ಚಾರಿತ್ರಿಕ ಬರೆಹಗಳ ವಿಶ್ಲೇಷಣೆ" ಎಂಬ ನಿಬಂಧವು ಬ್ರಿಟಿಷ್ ಆಡಳಿತಾಧಿಕಾರಿಯಾಗಿ ಹಾಗೂ ಬಳ್ಳಾರಿ ಜಿಲ್ಲೆಯ ಕಲೆಕ್ಟರಾಗಿದ್ದ ರಾಬರ್ಟ್ ಸಿವೆಲ್‌ರು ರಚಿಸಿರುವ ಚಾರಿತ್ರಿಕ ಬರೆಹಗಳ ವಿಶ್ಲೇಷಣೆಯಾಗಿದೆ. ಸಿವೆಲ್‌ರು ಬ್ರಿಟಿಷ್ ಭಾರತ ಕಂಡ ಒಬ್ಬ ಆಡಳಿತಾಧಿಕಾರಿ. ಅಂತೆಯೇ ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ಬರೆದ ಮೊದಲಿಗ. ಇವರು ಅನೇಕ ಮಹತ್ತ್ವದ ಕೃತಿಗಳನ್ನು ರಚಿಸಿದ್ದಾರೆ. ಮೇರುಕೃತಿ ಎಂದರೆ 'ಎ ಫರ್‌ಗಾಟನ್ ಎಂಪೈರ್'. ಈ ಕೃತಿಯಲ್ಲಿ ಬ್ರಿಟಿಷರು ಅನುಸರಿಸಿದ ನೀತಿಯ ಒಳನೋಟಗಳನ್ನು ಕಾಣಬಹುದು. ವಸಾಹತುಕಾಲೀನ ಘಟ್ಟದಲ್ಲಿ ರಚನೆಯಾದ ಈ ಕೃತಿಯು ಅನೇಕ ಅಂಶಗಳಿಗೆ ಮಹತ್ತ್ವದ ಮೈಲುಗಲ್ಲಾಗಿದೆ. ದಕ್ಷಿಣ ಭಾರತದ ಚರಿತ್ರೆಯ ರಚನೆಗೆ ಹೆಬ್ಬಾಗಿಲಾಗಿ ಪರಿಣಮಿಸಿದೆ. ಈ ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ಕಟ್ಟಿಕೊಟ್ಟ ಮೊದಲ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ರಾಬರ್ಟ್ ಸಿವೆಲ್‌ರು ಬಳ್ಳಾರಿ ಜಿಲ್ಲೆಯ ಕಲೆಕ್ಟರಾಗಿ, ಈ ಪ್ರದೇಶದಾದ್ಯಂತ ಜಾರಿಗೆ ತಂದ ಸಾಂಸ್ಕೃತಿಕ ಹಾಗೂ ಆಡಳಿತಾತ್ಮಕ ಸುಧಾರಣೆಗಳು ಇಂದಿಗೂ ಸ್ಮರಣೀಯವಾದುದು. ಸಿವೆಲ್‌ರು ಹಂಪಿಯ ಜೊತೆ ಅವಿನಾಭಾವ ಸಂಬಂಧ ಹೊಂದಿದ್ದರು ಎನ್ನುವುದನ್ನು ಹಂಪಿಯಲ್ಲಿ ಕೈಗೊಂಡ ಪುನರುಜ್ಜೀವನ ಕಾರ್ಯಗಳಿಂದ ತಿಳಿಯಬಹುದು. ಜಿಲ್ಲಾಧಿಕಾರಿಯಂತೆ ಬಳ್ಳಾರಿಯ ಜಿಲ್ಲಾ ನ್ಯಾಯಾಲಯದಲ್ಲಿ ೧೮೮೯ ರಿಂದ ೧೮೯೧ರವರೆಗೆ ನ್ಯಾಯಾಧೀಶನಾಗಿ ಕಾರ್ಯ ನಿರ್ವಹಿಸಿದ್ದ ಸಿವೆಲ್‌ರು ಕೇವಲ ಸಾಮ್ರಾಜ್ಯಗಳ ಚರಿತ್ರೆ ರಚಿಸಲಿಲ್ಲ. ಜೋತಿಷ್ಯಶಾಸ್ತ್ರ, ಶಾಸನಗಳ ಕುರಿತು ಅಧ್ಯಯನ ನಡೆಸಿದ್ದು, ಅವುಗಳ ಬಗ್ಗೆ ವಿಪುಲವಾದ ಮಾಹಿತಿ ಸಂಗ್ರಹಿಸಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಭಾರತೀಯ ವಿದ್ವಾಂಸರಾದ ಪಂಡಿತ ನಟೇಶಶಾಸ್ತ್ರಿ, ಶಂಕರ ಬಾಲಕೃಷ್ಣ ದೀಕ್ಷಿತ್, ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ ಜೊತೆ ಉತ್ತಮ ಬಾಂಧವ್ಯವಿತ್ತು.

ಈ ನಿಬಂಧವು ಸಿವೆಲ್‌ರು ರಚಿಸಿರುವ ಚಾರಿತ್ರಿಕ ಕೃತಿಗಳ ವಿಶ್ಲೇಷಣೆಯಾದರೂ ನಿರ್ದಿಷ್ಟ ಹಾಗೂ ವಿಶೇಷವಾಗಿ 'ಎ ಫರ್‌ಗಾಟನ್ ಎಂಪೈರ್' ಕೃತಿಯನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಸಿವೆಲ್‌ರನ್ನು ನಾವು ನೋಡುವ ದೃಷ್ಟಿಕೋನ ಹಾಗೂ ಅವರು ವಿಜಯನಗರ ಸಾಮ್ರಾಜ್ಯವನ್ನು ಗ್ರಹಿಸುವ ರೀತಿಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಬ್ರಿಟಿಷ್ ಅಧಿಕಾರಿಯಾಗಿ ರಚಿಸಿದ ಈ ಕೃತಿಯು ಅವರ ನೀತಿಗಳಿಂದ ಹೊರತಾಗಿಲ್ಲ. ಬ್ರಿಟಿಷರು ವಸಾಹತುಶಾಹಿ ಧೋರಣೆಯನ್ನು ಅನುಸರಿಸಿದ್ದಾರೆ. ವಸಾಹತುಶಾಹಿ ಅಧಿಕಾರಿಯಾಗಿ 'ಒಡೆದು ಆಳುವ' ಕೋಮುಭಾವನೆಯನ್ನು ಹಾಗೂ ಸಾಮ್ರಾಜ್ಯಶಾಹಿ ನೀತಿಯನ್ನೂ ಈ ಕೃತಿಯಲ್ಲಿ ಪ್ರತಿಬಿಂಬಿಸಿರುವರು. ಈ ಕೃತಿ ಕೇವಲ ರಾಜಕೀಯ ಚರಿತ್ರೆಗೆ ಮಾತ್ರ ಸೀಮಿತವಾಗಿದೆ. ಇಲ್ಲಿ ಧಾರ್ಮಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಅಂಶಗಳು ಗೌಣವಾಗಿವೆ. ವಿಜಯನಗರದ ಅರಸರ, ಬಹಮನಿ ಹಾಗೂ ಶಾಹಿ ಸುಲ್ತಾನರಿಗೆ ನಡೆದ ಯುದ್ಧಗಳಿಗೆ ಮತೀಯ ಬಣ್ಣ ನೀಡಿದ್ದಾರೆ. ವಾಸ್ತವವಾಗಿ ಈ ಯುದ್ಧಗಳು ಫಲವತ್ತಾದ ದೋ ಅಬ್ ಮೇಲಿನ ಹಿಡಿತಕ್ಕಾಗಿ ಇಲ್ಲವೇ ಸಂಪತ್ತಿನ ಆಸೆಗಾಗಿ ನಡೆದಿರುವಂತಹವು. ಸಿವೆಲ್‌ರು ಇದನ್ನೇ ಕೋಮುಭಾವನೆಯನ್ನು ಬೆಳೆಸಲು ಬಳಸಿಕೊಂಡಿರುವರು. ಭಾರತೀಯರಿಗೆ ಚಾರಿತ್ರಿಕ ಪ್ರಜ್ಞೆ ಇರಲಿಲ್ಲ ಎನ್ನುವುದನ್ನು ಪದೇ ಪದೇ ತೋರಿಸುವರು. ಅನೇಕ ಚಾರಿತ್ರಿಕ ಕೃತಿಗಳನ್ನು ರಚನೆ ಮಾಡುವ ಮೂಲಕ ಉಜ್ವಲವಾದ ಚರಿತ್ರೆಯನ್ನು ಕಟ್ಟಿಕೊಟ್ಟು ಅದನ್ನು ತಮ್ಮ ಅನುಕೂಲಕ್ಕೆ ತಕ್ಕಂತ ತಿರುಚುವ ಯತ್ನ ಮಾಡಿದರು. ಹಾಗೆಯೇ ವಿಜಯನಗರದ ಸಾಮ್ರಾಜ್ಯವನ್ನು ಸಾರಾಸಗಟಾಗಿ 'ಹಿಂದೂ ಸಾಮ್ರಾಜ್ಯ'ವೆಂಬಂತೆ ಚಿತ್ರಿಸಿದ್ದಾರೆ.

ಒಬ್ಬ ಹವ್ಯಾಸಿ ಚರಿತ್ರಕಾರರಾದ ಸಿವೆಲ್‌ರು ತಮ್ಮ ವಿಜಯನಗರದ ಚರಿತ್ರೆಗೆ ಸಂಬಂಧಿಸಿದ ಆಕರಗಳಿಗೆ ಹೆಚ್ಚಾಗಿ ಪೋರ್ಚುಗೀಸ್ ಪ್ರವಾಸಿಗರಿಗೆ ಹಾಗೂ ಬ್ರಿಟಿಷ್ ಚರಿತ್ರಕಾರರಿಗೆ ಮೊರೆ ಹೋಗಿದ್ದಾರೆ. ಪೋರ್ಚುಗೀಸರ ಬರಹಗಳಲ್ಲಿ ಹೆಚ್ಚು ವೈಭವಯುತವಾದ ವರ್ಣನೆಗಳನ್ನು ನೋಡಬಹುದು. ಸಿವೆಲರು ಇದನ್ನು ಪರಾಮರ್ಶಿಸದೆ ಹಾಗೆಯೇ ಬಳಸಿಕೊಂಡಿರುವುದರಿಂದ ಸಾಮ್ರಾಜ್ಯದ ಚರಿತ್ರೆಯ ನೈಜತೆಗೆ ಭಂಗ ತಂದಂತೆ ಆಗಿದೆ. ಇತರೆ ಬ್ರಿಟಿಷ್ ಬರಹಗಳನ್ನು ಅನುಮಾನಸ್ಪದವಾಗಿ ನೋಡುವಾಗ ಅವುಗಳನ್ನು ಸಿವೆಲ್ ಹಾಗೆಯೇ ಬಳಸಿಕೊಂಡಿರುವುದುಂಟು. ಇವರ ಬರಹಗಳು ಮತೀಯತೆಯನ್ನು ಹಾಗೂ ಒಡೆದು ಆಳುವ ನೀತಿಯನ್ನು ಪ್ರಚೋದಿಸಿದಂಥವು. ಪೋರ್ಚುಗೀಸ್ ಮತ್ತು ಬ್ರಿಟಿಷರು ಈ ಪ್ರದೇಶದ ಮೇಲೆ ಹಿಡಿತ ಸಾಧಿಸಲು ನಡೆಸಿದ ಹುನ್ನಾರಗಳು ಪರೋಕ್ಷವಾಗಿ ಈ ಕೃತಿಯ ಮೂಲಕ ನೋಡಬಹುದು. ಬ್ರಿಟಿಷ್ ಸಾಮ್ರಾಜ್ಯವನ್ನು ವಿಜಯನಗರ ಸಾಮ್ರಾಜ್ಯದೊಂದಿಗೆ ಸಮೀಕರಿಸಿ ದಕ್ಷಿಣ ಭಾರತದ ಕಡೆ ತಮ್ಮ ಚಿತ್ತವನ್ನು ಹರಿಸಿದರು. ಈ ಮೂಲಕ ದಕ್ಷಿಣದವರೆಗೆ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುವ ಮೂಲಕ ತಮ್ಮ ಸಾಮ್ರಾಜ್ಯಶಾಹಿ ನೀತಿಯನ್ನು ಪ್ರಕಟಪಡಿಸಿದ್ದಾರೆ.

ಸಿವೆಲ್‌ರನ್ನು ದಕ್ಷಿಣ ಭಾರತದ ಚರಿತ್ರೆಯನ್ನು ರಚಿಸುವ ಸಲುವಾಗಿಯೇ ನಿಯೋಜಿಸಿದಂತಿದೆ. ಬ್ರಿಟಿಷ್‌ರ ಇಂಗ್ಲೀಷಿನ ವ್ಯಾಮೋಹವನ್ನು ಹೊಂದಿರುವ ಈತ ರಾಣಿ ಎಲಿಜಬೆತ್‌ಳನ್ನು ಖುಷಿ ಪಡಿಸುವ ಕಾರ್ಯಕ್ಕೆ ನಿಯೋಜಿತನಾಗಿ, ಇಂಗ್ಲೆಂಡಿನ ಹೊಗಳು ಭಟ್ಟನಂತಿದ್ದಾನೆ. ಇವರ 'ಇಂಡಿಯಾ ಬಿಫೋರ್

ದಿ ಇಂಗ್ಲೀಷ್' ಕೃತಿಯನ್ನು ಇದಕ್ಕೇ ಮೀಸಲಿಟ್ಟಂತಿದೆ. ಇವರ 'ಎ ಫರ್‌ಗಾಟನ್ ಎಂಪೈರ್' ಕೃತಿಯು ವಿಜಯನಗರದ ಸಮಕಾಲೀನ ರಾಜ್ಯಗಳಾದ ಬಹಮನಿ, ಶಾಹಿ ಸುಲ್ತಾನರ ಚರಿತ್ರೆಯನ್ನು ಒಳಗೊಂಡಿದೆ. ಇವೆರೆಡು ರಾಜ್ಯಗಳನ್ನು ಹಿಂದೂ ಮತ್ತು ಮುಸ್ಲಿಮ್ ಎಂದು ಆ ರಾಜ್ಯದಲ್ಲಿ ವಾಸಿಸುವ ಅರಸರನ್ನು ಸಾರಾಸಗಟಾಗಿ 'ಹಿಂದೂ' ಹಾಗೂ 'ಮುಸ್ಲಿಮ್'ರೆಂದು ವಿಭಜಿಸಿದ್ದಾರೆ. ಆದರೆ ವಿಜಯನಗರ ಸಾಮ್ರಾಜ್ಯದಲ್ಲಿ ಹಿಂದೂಗಳಂತೆ ಮುಸ್ಲಿಮರು ಪ್ರಮುಖವಾದ ಸ್ಥಾನಗಳನ್ನು ಗಳಿಸಿದ್ದರು. ರಾಜಧಾನಿಯಲ್ಲಿ ಮಸೀದಿಗಳನ್ನು ನಿರ್ಮಿಸಿದ ಉಲ್ಲೇಖಗಳನ್ನು ಗಮನಿಸಿದಾಗ ಹಿಂದೂ ಮತ್ತು ಮುಸ್ಲಿಂರು ಸಾಮರಸ್ಯದಿಂದ ಇದ್ದರು ಎನ್ನಬಹುದು.

ಸಿವೆಲ್‌ರು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಗೊಂದಲವನ್ನು ಸ್ಪಷ್ಟವಾಗಿ ಬಿಡಿಸಿಲ್ಲ. ಕೆಲವೊಮ್ಮೆ ಹರಿಹರ-ಬುಕ್ಕರು ಸಾಮ್ರಾಜ್ಯ ಸ್ಥಾಪಿಸಿದರೆಂತಲೂ, ಇನ್ನೊಮ್ಮೆ ವಿದ್ಯಾರಣ್ಯರು ಅಥವಾ ಮಾಧವಾಚಾರ್ಯರು ಸ್ಥಾಪಿಸಿದರೆಂದು ಅಭಿಪ್ರಾಯಪಟ್ಟಿದ್ದಾರೆ. ಇವರು ಒಮ್ಮತದ ಅಭಿಪ್ರಾಯವನ್ನು ವ್ಯಕ್ತಪಡಿಸುವುದಿಲ್ಲ. ಆದರೆ ವಾರಂಗಲ್ ಮೂಲವನ್ನು ವ್ಯಕ್ತಪಡಿಸಿರುವರು ಹಾಗೂ ಕುರುಬ ಮೂಲವನ್ನು ಒಪ್ಪಿಕೊಂಡಿದ್ದು, ಹೊಯ್ಸಳರ ಮಾಂಡಲೀಕರಾಗಿದ್ದರು ಎನ್ನುವುದನ್ನು ತಿರಸ್ಕರಿಸುತ್ತಾರೆ. ಹೊಯ್ಸಳರ ಮಾಂಡಲೀಕರಾದ ಬಗ್ಗೆ ಅನೇಕ ಶಾಸನಗಳು ಉಲ್ಲೇಖಿಸುತ್ತವೆ. ಆದರೆ ವಾರಂಗಲ್, ತೆಲುಗು ಮೂಲದ ಬಗ್ಗೆ ಯಾವುದೇ ಶಾಸನಗಳು ದೊರೆಯುವುದಿಲ್ಲ. ಬ್ರಿಟಿಷರ ಒಡೆದು ಆಳುವ ನೀತಿಯನ್ನು ಇಲ್ಲಿ ಕಾಣಬಹುದು. ಆಂಧ್ರ ಹಾಗೂ ಕರ್ನಾಟಕದ ಮಧ್ಯೆ ದ್ವೇಷ, ಅಸೂಯೆ ಬೆಳೆಯಲು ಈ ಸಾಮ್ರಾಜ್ಯವು ಕಾರಣವಾಗಲು ಇವರು ಕಾರಣವಾಗುವರು. ಈ ವಾದಕ್ಕೆ ಅವರು ಯಾವುದೇ ರೀತಿಯ ದಾಖಲೆಯನ್ನು ಒದಗಿಸುವುದಿಲ್ಲ. ಸಿವೆಲ್ಲರ ಈ ವಾದ ಹಾಗೂ ಒಮ್ಮತಕ್ಕೆ ಬರಲು ವಿಪುಲ ಆಧಾರಗಳ ಮೊರೆ ಹೋಗಬೇಕಾಗಿತ್ತು. ಅಲ್ಲದೆ ಓದುಗರಿಗೆ ಸಿಗುವ ಮಾಹಿತಿಯನ್ನೇ ನೇರವಾಗಿ ನೀಡಬೇಕಿತ್ತು. ಈ ಕುರಿತು ಸಂಶೋಧನೆಗಳಿಗೆ ಇನ್ನೂ ಅವಕಾಶಗಳು ಸಾಕಷ್ಟಿವೆ.

ಇಂದಿಗೂ ವಿಜಯನಗರದ ಸ್ಥಾಪನೆಯ ಉದ್ದೇಶವನ್ನು ಪೂರ್ವಗ್ರಹ ಪೀಡಿತರಾಗಿಯೇ ಅಧ್ಯಯನ ನಡೆಸಿದ್ದಾರೆ. ಅದರ ವಾಸ್ತವತೆ ಏನಾಗಿತ್ತು ಎಂದು ನಿಷ್ಪಕ್ಷಪಾತವಾಗಿ ಆಲೋಚಿಸುವ ಅಗತ್ಯವಿದೆ. ಸಿವೆಲ್‌ರು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಉದ್ದೇಶವು ಉತ್ತರದ ಮುಸ್ಲಿಮರ ದಾಳಿಗಳನ್ನು ಎದುರಿಸುವುದಾಗಿತ್ತು ಎಂದು ತಮ್ಮ ಪ್ರಸ್ತಾವನೆಯಲ್ಲಿ ಹೇಳಿಕೊಂಡಿದ್ದಾರೆ. ವಿಜಯನಗರದ ಅರಸರು ಬರಿದಾದ ರಾಜಕೀಯ ಶೂನ್ಯವನ್ನು ತುಂಬಿ ಅಲ್ಲಿ ಎರಡೂರವರೆ ಶತಮಾನಗಳ ಕಾಲ ಆಳ್ವಿಕೆ ನಡೆಸಿದ್ದರು. ಸಮಕಾಲೀನವಾಗಿ ಬಹಮನಿ ಸಾಮ್ರಾಜ್ಯವನ್ನು ಇವರಿಗೆ 'ಪೈಪೋಟಿ ನಡೆಸುವ, ಪೈಪೋಟಿ ನಡೆಸಲೆಂದೇ ಹುಟ್ಟಿದ ಸಾಮ್ರಾಜ್ಯ' ಎಂದು ಚಿತ್ರಿಸಿದ್ದಾರೆ. ಈ ಸಾಮ್ರಾಜ್ಯದ ಉಗಮ ದೆಹಲಿ ದೊರೆಯ ವಿರುದ್ಧ ಸೆಟೆದು ನಿಂತು, ಅಸಹಾಯಕತೆಯನ್ನು ತೋರಿದುದರ ಪರಿಣಾಮವಾಗಿದೆ.

ಪ್ರಸ್ತುತ ಈ ನಿಬಂಧವು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಿಂದ ಅವನತಿಯವರೆಗೆ ಕೇವಲ ಉಗಮ, ಮೂಲ, ಅವನತಿಯನ್ನು ಹಾಗೂ ಆಕರಗಳ ವಿಶ್ಲೇಷಣೆಯನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದ್ದು, ರಾಜಕೀಯ ಚರಿತ್ರೆಯನ್ನು, ರಾಜರ ಯುದ್ಧ ನೀತಿಗಳನ್ನು, ಅವರ ಕಲ್ಯಾಣ ಯೋಜನೆಗಳನ್ನು ಕೈಬಿಡಲಾಗಿದೆ. ಕೇವಲ ರಾಜಕೀಯ ಚರಿತ್ರೆಗೆ ಮಾತ್ರ ಸೀಮಿತವಾದ ಈ ಕೃತಿಯು ಸಾಮಾಜಿಕ, ಆರ್ಥಿಕ, ಧಾರ್ಮಿಕ ಅಂಶಗಳನ್ನು ಕಡೆಗಣಿಸಲಾಗಿದೆ. ಚರಿತ್ರೆಯನ್ನು ರಕ್ತಗತ ಚರಿತ್ರೆಯನ್ನಾಗಿ ಕೊಲೆ, ಷಡ್ಯಂತ್ರ, ಸಂಚುಗಳನ್ನು ವಿಪುಲವಾಗಿ ಈ ಕೃತಿಯಲ್ಲಿ ನೋಡಬಹುದು. ಅವನತಿಯ ಕುರಿತು ಹಲವು ಮುನ್ನೋಟಗಳನ್ನು ನೀಡಿದ್ದು, ವಿಜಯನಗರ ಸಾಮ್ರಾಜ್ಯದ ಅವನತಿಗೆ ಮುಸ್ಲಿಮರಂತೆ ಹಿಂದೂ ಗಳಿಗೆ ಪಾಲಿದೆ ಎಂದಿದ್ದಾರೆ. ಶಾಹಿಸುಲ್ತಾನರು ಅನುಸರಿಸಿದ ನೀತಿಯಿಂದ ಇಂದು ಭಗ್ನಗೊಂಡಿರುವ ಹಂಪಿಯನ್ನು ನೋಡಬಹುದು. ಸಂಗಮ ವಂಶದ ಮೂಲವು ಇಂದಿಗೂ ವಾದಗ್ರಸ್ತವಾಗಿದೆ. ಸಂಗಮ ಸಹೋದರರು ವಾರಂಗಲ್ಲಿನಿಂದ ಆಗಮಿಸಿ ಇಲ್ಲಿ ಸಾಮ್ರಾಜ್ಯವೊಂದನ್ನು ಕಟ್ಟಿದರೆಂದು ಸಿವೆಲ್‌ರು ಅಭಿಪ್ರಾಯಪಟ್ಟಿದ್ದಾರೆ.

ಸಿವೆಲ್‌ರು ಬ್ರಿಟೀಷ್ ಅಧಿಕಾರಿಯಾಗಿದ್ದರಿಂದ ಇತಿಹಾಸದ ನೈಜತೆಗೆ ಅಡ್ಡಿ ಉಂಟು ಮಾಡಿದೆ. ಮದ್ರಾಸ್ ಆಡಳಿತವು ಇವರನ್ನು ಇಲ್ಲಿಯ ಚರಿತ್ರೆಯನ್ನು ರಚಿಸುವ ಉದ್ದೇಶದಿಂದಲೇ ನಿಯೋಜಿಸಿತ್ತು. ಇವರಲ್ಲಿ ಬ್ರಿಟಿಷ್ ಧೋರಣೆಗಳನ್ನು ನೋಡಿದರೂ ವಿಜಯನಗರ ಸಾಮ್ರಾಜ್ಯದಂತೆ ಬಹಮನಿ, ಶಾಹಿಸುಲ್ತಾನರ ವಿವರಗಳನ್ನು ಕಾಣಬಹುದು. ಅದನ್ನು ಮತೀಯ ಹಿನ್ನಲೆಯಲ್ಲಿ ಇವರು ನೋಡಲಿಲ್ಲ ಎನ್ನಬಹುದು. ಏಕೆಂದರೆ ಮತೀಯತೆಯನ್ನು ಪ್ರಚುರಪಡಿಸಿದವರು ಬ್ರಿಟಿಷ್ ವಸಾಹತುಶಾಹಿಯ ಲೇಖಕರು, ಚಿಂತಕರು. ವಿಜಯನಗರವನ್ನು ಬಲಿಷ್ಠ ಸಾಮ್ರಾಜ್ಯದಂತೆ ಚಿತ್ರಿಸಿ ಅದರಂತೆಯೇ ಬ್ರಿಟಿಷ್ ಸಾಮ್ರಾಜ್ಯವಿರಬೇಕು ಎಂಬ ನಿಲುವನ್ನು ತಳೆದವರು. ಸಿವೆಲ್‌ರು ರಾಣಿ ವಿಕ್ಟೋರಿಯಾ ಎಲಿಜಿಬೆತ್ ಳನ್ನು ಖುಷಿಪಡಿಸುವ ಸಲುವಾಗಿಯೇ ಈ ಎಲ್ಲಾ ಕೃತಿಗಳನ್ನು ರಚಿಸಿದ್ದಾರೆ. ವಸಾಹತುಶಾಹಿ ಸಾಮ್ರಾಜ್ಯಶಾಹಿ ಹಾಗೂ ಕೋಮುವಾದಿ ಧೋರಣೆಗಳು ಸಿವೆಲ್ ರನ್ನು ಅವರು ರಚಿಸಿದ ಈ ಕೃತಿಗಳ ಮುಖೇನ ಬಯಲು ಮಾಡಿದ್ದು ಸ್ಪಷ್ಟ. ವಾಸ್ತವವಾಗಿ ಸಿವೆಲ್‌ರು ಉದ್ಧರಿಸುವ ಯಾವ ದಾಖಲೆಯಲ್ಲಿಯು ಮತೀಯತೆಯ ಅಂಶವು ನೇರವಾಗಿ ಸ್ಫುಟಗೊಳ್ಳುವುದಿಲ್ಲ. ಹಿಂದೂ ಮತ್ತು ಮುಸ್ಲಿಮ್ ಸಾಮ್ರಾಜ್ಯಗಳೆನ್ನದೇ ಅವರ ಮಧ್ಯೆ ಇದ್ದ ಬದ್ಧವೈರತ್ವವನ್ನು ಹೊರಹಾಕಿದ್ದಾರೆ.

ಸಿವೆಲ್‌ರು ಕೆಲವೊಮ್ಮೆ ಪೂರ್ವಗ್ರಹಗಳಿಗೆ ಒಳಗಾಗಿ ಈ ಕೃತಿಯನ್ನು ರಚಿಸಿದಂತಿದೆ. ಹಿಂದೂ ಸಾಮ್ರಾಜ್ಯದ ವೈಭವವನ್ನು ತಮ್ಮ ಕೃತಿಯಲ್ಲಿ ಹೆಚ್ಚು ಪ್ರಚಾರಗಿಟ್ಟಿಸಿದೆ. ವಾಸ್ತವವಾಗಿ ಪೋರ್ಚುಗೀಸರ ಬರವಣಿಗೆಯು ಇದಕ್ಕೆ ಕಾರಣ. ಇವರನ್ನು ವಸಾಹತುಶಾಹಿ ದೃಷ್ಟಿಕೋನದಿಂದ ನೋಡಿದರೆ ಅದಕ್ಕೆ ಇವರು ಹೊಣೆಯಲ್ಲ. ಮೇಲಿನ ಅಜ್ಞಾನುಸಾರಿಗಳಿಗೆ ಮೆಚ್ಚಿಸಿ ಬರೆಯುವ ಅಗತ್ಯವಿತ್ತು. ಆ ಮೂಲಕ

ವಿಜಯನಗರ ಸಾಮ್ರಾಜ್ಯದ ಚರಿತ್ರೆಯ ರಚನೆಗೆ ನಾಂದಿ ಹಾಡಿದರು. ಬ್ರಿಟಿಷರು ಭಾರತದ ಆಯಕಟ್ಟಿನ ಸ್ಥಳದಲ್ಲಿ ನೆಲೆಗೊಂಡಿದ್ದು ಮದ್ರಾಸ್, ಬಾಂಬೆ, ಕಲ್ಕತ್ತಾಗಳ ಮೇಲೆ ಹಿಡಿತ ಹೊಂದಿದ್ದರು. ತಮ್ಮ ವಿಸ್ತರಣಾ ನೀತಿಯನ್ನು ಹೆಚ್ಚಿಸುವ ಸಲುವಾಗಿಯೇ ತಮ್ಮ ಬರಹಗಳ ಮೂಲಕ, ಯುದ್ಧಗಳ ಇಲ್ಲವೇ ವ್ಯಾಪಾರ ಕೋಠಿಗಳನ್ನು ಸ್ಥಾಪಿಸಿ ಅದರ ಮೇಲೆ ನಿಯಂತ್ರಣ ಮಾಡುತ್ತಿದ್ದರು. ಇವರ ಬರಹಗಳಿಂದ ಹೆಚ್ಚೆತ್ತ ರಾಷ್ಟ್ರೀಯ ನಾಯಕರು ಬ್ರಿಟಿಷರ ವಿರುದ್ಧ ರಾಷ್ಟ್ರೀಯ ಹೋರಾಟ ನಡೆಸತೊಡಗಿದರು. ಇಂತಹ ಸಂದಿಗ್ಧ ಕಾಲಘಟ್ಟದಲ್ಲಿ ರಚನೆಯಾದ ಈ ಕೃತಿಯು, ಭಾರತದ ಹಾಗೂ ಕರ್ನಾಟಕ ಸ್ವಾತಂತ್ರ್ಯ ಚಳವಳಿಯ ಮೇಲೆ ಬೀರಿದ ಪ್ರಭಾವ ಅಪಾರ. ಬಂಗಾಳದ ವಿಭಜನೆಯಲ್ಲಿ ಇದು ಪ್ರಮುಖ ಪಾತ್ರ ನಿರ್ವಹಿಸಿದೆ. ಹಾಗೂ ಈ ಘಟನೆಯನ್ನು ರಾಷ್ಟ್ರೀಯ ಘಟನೆಯೆಂದು ಬಿಂಬಿಸಿದೆ. ಸಿವೆಲ್‌ರ ಈ ಕೃತಿಯು ೨೦ನೇ ಶತಮಾನದ ಆರಂಭದ ಭಾರತದ ಇತಿಹಾಸದಲ್ಲಿ ಅನೇಕ ಕಾರಣಗಳಿಗಾಗಿ ಮಹತ್ವಪೂರ್ಣವಾದದ್ದು. ಬ್ರಿಟಿಷರ ದಾಸ್ಯದಲ್ಲಿದ್ದ ಭಾರತ, ಸ್ವಾತಂತ್ರ್ಯವಾಗಲು ಆ ಸಂದರ್ಭದಲ್ಲಿ ಹವಣಿಸಿದರೆ, ಬ್ರಿಟೀಷ್ ಚಕ್ರಾಧಿಪತ್ಯವು ರಾಷ್ಟ್ರೀಯ ಭಾರತದ ಮೇಲಿನ ತನ್ನ ಕಪಿಮುಷ್ಟಿಯನ್ನು ಬಿಗಿಗೊಳಿಸಿದ ಕಾಲವಾಗಿದೆ. ಈ ಕೃತಿಯನ್ನು ರಾಷ್ಟ್ರೀಯ ಘಟನೆಯನ್ನಾಗಿ ರಾಷ್ಟ್ರೀಯ ನಾಯಕರು, ಸ್ವಾತಂತ್ರ್ಯ ಚಳವಳಿಯಲ್ಲಿ ನೋಡಿದರು. ಆ ಮೂಲಕ ದಕ್ಷಿಣದಲ್ಲಿ ಮತೀಯ ಕಿಚ್ಚನ್ನು ಹತ್ತಿಸಿತು. ರಾಷ್ಟ್ರೀಯತೆ ಮೇಲೆ ಇದು ಈ ಹೊತ್ತಿಗೂ ದೊಡ್ಡ ಪರಿಣಾಮ ಬೀರಿದೆ.

ರಾಬರ್ಟ್ ಸಿವೆಲ್‌ರ ಕುರಿತಾದ ಈ ನಿಬಂಧವು ಒಟ್ಟು ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿಲ್ಲ. ಕೇವಲ 'ಎ ಫರ್‌ಗಾಟನ್ ಎಂಪೈರ್'ನ್ನು ಮಾತ್ರ ವಿಶೇಷವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇಲ್ಲಿಯೂ ಸಂಪೂರ್ಣವಾಗಿ ಅಧ್ಯಯನ ನಡೆಸಿಲ್ಲ ಮೂಲ, ಉಗಮ, ಅವನತಿ, ಪಠ್ಯದ ವಿಶ್ಲೇಷಣೆ ಹಾಗೂ ಆಕರಗಳ ವಿಶ್ಲೇಷಣೆಯನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇನ್ನೂ ರಾಜಕೀಯ ಚರಿತ್ರೆ, ಅವರ ಸಂಬಂಧಗಳು, ಇತರೆ ಅರಸು ಮನೆತನಗಳೊಂದಿಗೆ ಇದ್ದ ಸಂಬಂಧವನ್ನು ಅಧ್ಯಯನಕ್ಕೆ ಒಳಪಡಿಸಲು ಹಾಗೂ ಸಂಶೋಧನೆ ಕೈಗೊಳ್ಳಲು ವಿಪುಲ ಅವಕಾಶಗಳಿವೆ. ಅಂತೆಯೇ ಸಿವೆಲ್‌ರನ್ನು ಕುರಿತು ಮಾತನಾಡುವಾಗ ಅವರು ಒಬ್ಬ ವಸಾಹತುಶಾಹಿ ಅಧಿಕಾರಿಯಾಗಿರಬಹುದು. ಆದರೆ ಅವರು ಕೊಟ್ಟ ಚರಿತ್ರೆಯನ್ನು ಸಾಲು-ಸಾಲು ವಿದ್ವಾಂಸರು ತಮಗೆ ಬೇಕಾದ ರೀತಿಯಲ್ಲಿ ಬರೆದುಕೊಂಡಿದ್ದಾರೆ. ಮಧ್ಯಕಾಲೀನ ಭಾರತೀಯ ಇತಿಹಾಸ ರಚನೆಗೆ ಒದಗುವ ಆಧಾರಗಳನ್ನು ಸಮರ್ಥವಾಗಿ ಬಳಸಿಕೊಂಡು ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ಕಟ್ಟಿಕೊಟ್ಟು ಆ ಸಾಮ್ರಾಜ್ಯದ ಚರಿತ್ರೆಗೆ ಜೀವ ತುಂಬಿದವರು. ಇವರ ನೀತಿ ಏನೇ ಆಗಿರಬಹುದು, ಬ್ರಿಟಿಷರಲ್ಲದೆ ಬೇರೆ ಯಾವೊಬ್ಬ ಅಧಿಕಾರಿಯು ಈ ಕೃತಿಯನ್ನು ರಚಿಸಿದ್ದರೆ ಈ ಸಾಮ್ರಾಜ್ಯದ ಇತಿಹಾಸ ಬಹುಶಃ ಇಷ್ಟು ಉಜ್ವಲವಾಗುತ್ತಿರಲಿಲ್ಲವೇನೋ?

# ಆಕರ ಗ್ರಂಥಗಳು

## I ಪ್ರಾಥಮಿಕ ಆಕರ ಗ್ರಂಥಗಳು

೧. ರಾಬರ್ಟ್ ಸಿವೆಲ್.,(೧೯೭೫), ಸ್ಕೆಚ್ ಆಫ್ ದಿ ಡೈನಾಸ್ಟಿಸ್ ಆಫ್ ಸದರ್ನ್ ಇಂಡಿಯಾ, ದೆಹಲಿ: ಕಾಸ್ಮೋಸ್ ಪಬ್ಲಿಕೇಷನ್

೨. ರಾಬರ್ಟ್ ಸಿವೆಲ್.,(೧೯೦೦), ಎ ಫರ್‌ಗಾಟನ್ ಎಂಪೈರ್, ದೆಹಲಿ: ಏಶಿಯಾನ್ ಏಜುಕೇಶನಲ್ ಸರ್ವೀಸ್(೧೬ನೇ ಮರುಮುದ್ರಣ)(೨೦೦೯)

೩. ರಾಬರ್ಟ್ ಸಿವೆಲ್.,(೧೯೯೧), ಅನಲಾಟಿಕಲ್ ಹಿಸ್ಟರಿ ಆಫ್ ಇಂಡಿಯಾ, ದೆಹಲಿ: ಅಟ್ಲಾಂಟಿಕ್ ಪಬ್ಲೀಷರ್ಸ್

೪. ರಾಬರ್ಟ್ ಸಿವೆಲ್.,(೧೮೮೧), ಕ್ರೋನಲಾಜಿಕಲ್ ಟೇಬಲ್ಸ್ ಫಾರ್ ಸದರ್ನ್ ಇಂಡಿಯಾ ಫ್ರಮ್ ದಿ ಸಿಕ್ಸ್ತ್ ಸೆಂಚುರಿ ಎ.ಡಿ, ಮದ್ರಾಸ್: ಗವರ್ನಮೆಂಟ್ ಪ್ರೆಸ್

೫. ರಾಬರ್ಟ್ ಸಿವೆಲ್.,(೧೯೮೩), ಹಿಸ್ಟಾರಿಕಲ್ ಇನ್‌ಸ್ಕ್ರಿಪ್ಷನ್ ಆಫ್ ಸದರ್ನ್ ಇಂಡಿಯಾ, ನವದೆಹಲಿ: ಏಶಿಯಾನ್ ಏಜುಕೇಶನಲ್ ಸರ್ವಿಸ್

೬. ರಾಬರ್ಟ್ ಸಿವೆಲ್.,(೧೯೨೪), ದಿ ಸಿದ್ಧಾಂತಾಸ್ ಆಯಂಡ್ ದಿ ಇಂಡಿಯನ್ ಕ್ಯಾಲೆಂಡರ್, ಕಲ್ಕತ್ತಾ: ಭಾರತ ಸರ್ಕಾರ, ಸೆಂಟ್ರಲ್ ಪಬ್ಲಿಕೇಷನ್ ಬ್ರಾಂಚ್

೭. ರಾಬರ್ಟ್ ಸಿವೆಲ್.,(೧೯೮೭), ಇಂಡಿಯಾ ಬಿಫೋರ್ ದಿ ಇಂಗ್ಲೀಷ್, ದೆಹಲಿ: ಏಶಿಯಾನ್ ಏಜುಕೇಶನಲ್ ಸರ್ವಿಸ್

## II ಪೂರಕ ಆಕರ

೧. ಗೆಜೆಟಿಯರ್ ಮತ್ತು ಜರ್ನಲ್

೨. ಇಂಗ್ಲೀಷ್ ಕೃತಿಗಳು

**ಗೆಜೆಟಿಯರ್ ಮತ್ತು ಜರ್ನಲ್**

೧. ಅಭಿಶಂಕರ ಕೆ.,(೧೯೭೨), ಬಳ್ಳಾರಿ ಡಿಸ್ಟ್ರಿಕ್ಟ್ ಗೆಜೆಟಿಯರ್, ಬೆಂಗಳೂರು: ಗವರ್ನಮೆಂಟ್ ಪ್ರೆಸ್ಸ್

೨. ಜಾನ್ ಕೆಲ್ಸಲ್.,(ಸಂ), (೨೦೦೪), ಮ್ಯಾನುಯೆಲ್ ಆಫ್ ದಿ ಬಳ್ಳಾರಿ ಗೆಜೆಟಿಯರ್, ಬೆಂಗಳೂರು: ಗವರ್ನಮೆಂಟ್ ಆಫ್ ಕರ್ನಾಟಕ.

೩. ಸೂರ್ಯನಾಥ ಕಾಮತ್.,(೧೯೮೨), ಕರ್ನಾಟಕ ಸ್ಟೇಟ್ ಗೆಜೆಟಿಯರ್, ಬೆಂಗಳೂರು: ಗವರ್ನಮೆಂಟ್ ಆಫ್ ಕರ್ನಾಟಕ

೪. ಹಯವದನರಾವ್ ಸಿ.,(೧೯೮೪), ಮೈಸೂರು ಗೆಜೆಟಿಯರ್, ನವದೆಹಲಿ: ಬಿ.ಆರ್.ಪಬ್ಲಿಷಿಂಗ್ ಕಾರ್ಪೊರೇಷನ್

೫. ದಿ ಜರ್ನಲ್ ಆಫ್ ದಿ ರಾಯಲ್ ಏಶಿಯಾಟಿಕ್ ಸೊಸೈಟಿ ಆಫ್ ಗ್ರೇಟನ್ ಬ್ರಿಟನ್ ಆ್ಯಂಡ್ ಐರ್‌ಲ್ಯಾಂಡ್, ೧೯೨೬, ಫೆಬ್ರವರಿ, ಪಬ್ಲಿಷ್ಡ್ ಬೈ ದಿ ಸೊಸೈಟಿ ೭೪ ಗ್ರೂಪ್ ವೆನರ್ ಸ್ಟ್ರೀಟ್, ಲಂಡನ್

೬. ರಾಘುವಾಯ್ಯಂಗಾರ್ ಶ್ರೀನಿವಾಸ.,(೧೯೮೮), ಮೆಮೊರಾಂಡಮ್ ಆಫ್ ದಿ ಪ್ರೊಗ್ರೆಸ್ಸ್ ಆಫ್ ಮದ್ರಾಸ್ ಪ್ರೆಸಿಡೆನ್ಸಿ, ನವದೆಹಲಿ: ಏಶಿಯಾನ್ ಎಜುಕೇಷನಲ್ ಸರ್ವೀಸ್

**೨. ಇಂಗ್ಲೀಷ್ ಕೃತಿಗಳು**

೧. ಅನಿಲಾ ವರ್ಗೀಸ್.,(೨೦೦೧), ಆರ್ಕಿಯಾಲಾಜಿ ಆರ್ಟ್ ಆ್ಯಂಡ್ ರಿಲಿಜಿಯನ್ ನ್ಯೂ ಪರಸ್ಪೆಕ್ಟಿವ್ ಆನ್ ವಿಜಯನಗರ, ನವದೆಹಲಿ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ಸ್

೨. ಅನಿಲಾ ವರ್ಗೀಸ್.,(೨೦೦೨), ಹಂಪಿ ಮಾನೊಮೆಂಟಲ್ ಲೆಗೆಸಿ, ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ಸ್

೩. ಕುಲ್ಕೆ ಹರ್ಮನ್.,(ಸಂ), (೧೯೯೫), ದಿ ಸ್ಟೇಟ್ ಇನ್ ಇಂಡಿಯಾ ೧೦೦೦-೧೭೦೦, ದೆಹಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ಸ್

೪. ಕೃಷ್ಣಸ್ವಾಮಿ ಅಯ್ಯಂಗಾರ್ ಎಸ್.,(೧೯೯೧), ಸೌತ್ ಇಂಡಿಯಾ ಆ್ಯಂಡ್ ಹರ್ ಮಹಮ್ಮಡನ್ ಇನ್‌ವೇಡರ್ಸ್, ಮದ್ರಾಸ್: ಏಶಿಯನ್ ಎಜುಕೇಷನಲ್ ಸರ್ವೀಸ್

೫. ಕೃಷ್ಣಸ್ವಾಮಿ ಅಯ್ಯಂಗಾರ್ ಎಸ್.,(೧೯೧೯), ಸೋರ್ಸ್ ಆಫ್ ವಿಜಯನಗರ ಹಿಸ್ಟರಿ, ದೆಹಲಿ: ಗೈನ್ ಪಬ್ಲಿಷಿಂಗ್ ಹೌಸ್

೬. ನೀಲಕಂಠಶಾಸ್ತ್ರಿ ಕೆ.ಎ.,(ಸಂ) (೧೯೪೬), ಫರ್ದರ್ ಸೋರ್ಸ್ ಆಫ್ ವಿಜಯನಗರ ಹಿಸ್ಟರಿ, ಮದ್ರಾಸ್: ಮದ್ರಾಸ್ ಯುನಿವರ್ಸಿಟಿ

೭. ನೀಲಕಂಠಶಾಸ್ತ್ರಿ ಕೆ.ಎ.,(೧೯೭೧), ಎ ಹಿಸ್ಟರಿ ಆಫ್ ಸೌತ್ ಇಂಡಿಯಾ, ಲಂಡನ್: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್

೮. ಬರ್ಟನ್ ಸ್ಟೈನ್.,(೧೯೮೯), ದಿ ನ್ಯೂ ಕೆಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ ವಿಜಯನಗರ, ಲಂಡನ್: ಕೆಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್

೯. ಬರ್ಟನ್ ಸ್ಟೈನ್.,(೧೯೭೫), ಎಸ್ಸೇಸ್ ಆ್ಯನ್ ಸೌತ್ ಇಂಡಿಯಾ, ನವದೆಹಲಿ: ಮುನಿಶ್ರಮ್ ಮನೋಹರ್ ಲಾಲ್ ಪಬ್ಲೀಷರ್

೧೦. ಬರ್ಟನ್ ಸ್ಟೈನ್.,(೧೯೮೦), ಪೆಸೆಂಟ್ ಸ್ಟೇಟ್ ಆ್ಯಂಡ್ ಸೊಸೈಟಿ ಇನ್ ಮಿಡಿವಲ್ ಸೌತ್ ಇಂಡಿಯಾ, ನ್ಯೂಯಾರ್ಕ್: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್

೧೧. ಮಹಲಿಂಗಂ ಟಿ.ವಿ.,(೧೯೬೭), ಸೌತ್ ಇಂಡಿಯನ್ ಪಾಲಿಟಿ, ಮದ್ರಾಸ್: ಮದ್ರಾಸ್ ಯುನಿವರ್ಸಿಟಿ

೧೨. ಮಾರ್ಕ್ ವಿಲ್ಕ್ಸ್., (೧೯೮೯), ಹಿಸ್ಟಾರಿಕಲ್ ಸ್ಕೆಚ್ ಆಫ್ ದಿ ಸೌತ್ ಇಂಡಿಯನ್ ಹಿಸ್ಟರಿ, ದೆಹಲಿ: ಏಶಿಯಾನ್ ಎಜುಕೇಶನಲ್ ಸರ್ವೀಸ್

೧೩. ಮಾಧವ್ರೋ ಪಿ. ಪಾಟೀಲ.,(೧೯೯೯), ಕೋರ್ಟ್ ಲೈಫ್ ಅಂಡರ್ ದಿ ವಿಜಯನಗರ ರೂಲರ್ಸ್, ದೆಹಲಿ: ಬಿ.ಆರ್.ಪಬ್ಲಿಷಿಂಗ್ ಕಾರ್ಪೋರೇಷನ್

೧೪. ರೈಸ್ ಬಿ.ಎಲ್.,(೨೦೦೧), ಮೈಸೂರು ಎ ಗೆಜೆಟಿಯರ್, ದೆಹಲಿ: ಏಶಿಯಾನ್ ಎಜುಕೇಶನಲ್ ಸರ್ವೀಸ್

೧೫. ವಸುಂಧರಾ ಪಿಲಿಯೋಜಾ.,(೧೯೭೭), ವಿಜಯನಗರ, ದೆಹಲಿ: ನ್ಯಾಷನಲ್ ಬುಕ್ ಟ್ರಸ್ಟ್

೧೬. ವೀರತಪ್ಪ ಕೆ.,(೧೯೮೨), ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಆಯಂಡ್ ಕಲ್ಚರ್ ಸಂ-೨, ಮೈಸೂರು: ಭಾರತೀ ಪ್ರಕಾಶನ.

೧೭. ವೆಂಕಟರಮಣಯ್ಯ ಎನ್.,(೨೦೦೭), ವಿಜಯನಗರ ಹೊರಿಜನ್ ಆಫ್ ದಿ ಸಿಟಿ ಆ್ಯಂಡ್ ದಿ ಎಂಪೈರ್, ನವದೆಹಲಿ: ಎ.ಇ.ಎಸ್.ಪಬ್ಲಿಕೇಷನ್

೧೮. ವೆಂಕಟರತ್ನಂ ಎ.ವ್ಹಿ.,(೧೯೭೨), ಲೋಕಲ್ ಗವರ್ನಮೆಂಟ್ ಇನ್ ದಿ ವಿಜಯನಗರ ಎಂಪೈರ್, ಮೈಸೂರು: ಮೈಸೂರು ಯುನಿವರ್ಸಿಟಿ

೧೯. ಸರಸ್ವತಿ ಎನ್.,(೧೯೯೨), ದಿ ಪೊಸಿಶ್ಚನ್ ಆಫ್ ವುಮೆನ್ ಡ್ಯೂರಿಂಗ್ ವಿಜಯನಗರ ಪಿರಿಯಡ್ ೧೩೩೬-೧೬೪೬, ಮೈಸೂರು: ಸದರ್ನ್ ಪ್ರಿಂಟರ್ಸ್

೨೦. ಸೂರ್ಯನಾರಾಯಣರಾವ್ ಬಿ.,(೧೯೯೩), ಎ ಹಿಸ್ಟರಿ ಆಫ್ ವಿಜಯನಗರ : ದಿ ನೆವರ್ ಟು ಬಿ ಫರ್‌ಗಾಟನ್ ಎಂಪೈರ್, ಮದ್ರಾಸ್: ಏಶಿಯನ್ ಎಜುಕೇಷನಲ್ ಸರ್ವೀಸ್

## III ಪೂರಕ ಆಕರಗಳು

೧. ಕನ್ನಡ ಸಾಹಿತ್ಯ

೧. ಆಲೂರ ವೆಂಕಟರಾಯರು.,(೨೦೦೬), ಕರ್ನಾಟಕ ಗತವೈಭವ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ

೨. ಆಲೂರ ವೆಂಕಟರಾಯರು., (೧೯೩೦), ಕರ್ನಾಟಕದ ವೀರರತ್ನಗಳು, ಧಾರವಾಡ: ರಾಮಾಶ್ರಮ ಬುಕ್ ಡಿಪೋ

೩. ಒಡೆಯರ್ ಹೆಗ್ಗಡೆ ಡಿ.,(೨೦೦೩), ಹಕ್ಕ-ಬುಕ್ಕ, ಮೈಸೂರು, ತನುಮನ ಪ್ರಕಾಶನ

೪. ಕಿತ್ತೂರ ಕೃಷ್ಣಮೂರ್ತಿ.,(೧೯೭೮), ಗಳಗನಾಥರು ಮತ್ತು ಅವರ ಕಾದಂಬರಿಗಳು, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ

೫. ಕೃಷ್ಣ ಕೊಲ್ಹಾರ ಕುಲಕರ್ಣಿ.,(ಅನು), (೧೯೯೮), ಬುಸಾತಿನೆ-ಸಲಾತೀನ, (ಬಿಜಾಪುರದ ಅದಿಲ್ ಶಾಹಿಗಳ ಚರಿತ್ರೆ), ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

೬. ಗುರುಮೂರ್ತಿ ಪೆಂಡಕೂರು., (ಅನು), (೧೯೮೨), ರಾಯವಾಚಕ, ಕುಪ್ಪಂ: ದ್ರಾವಿಡ ವಿಶ್ವವಿದ್ಯಾಲಯ

೭. ಚಂದ್ರಶೇಖರ್ ಎಸ್.,(೨೦೦೬), ವಸಾಹತುಕಾಲೀನ ಕರ್ನಾಟಕ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ

೮. ಚಂದ್ರಶೇಖರ್ ಎಸ್.,(೧೯೯೯), ಸಾಹಿತ್ಯ ಮತ್ತು ಚರಿತ್ರೆ, ತಿಪಟೂರು: ನಮ್ಮ ಪ್ರಕಾಶನ

೯. ದಿವಾಕರ ಆರ್.ಆರ್.,(೨೦೦೬), ಕರ್ನಾಟಕ ಪರಂಪರೆ, ಸಂ-೨, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

೧೦. ದೀಕ್ಷಿತ್ ಜಿ.ಎಸ್.,(೧೯೮೮), ಸಂಗಮರ ಕಾಲದ ವಿಜಯನಗರ, ಅದರ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನ, ಬೆಂಗಳೂರು: ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

೧೧. ದೇಸಾಯಿ ಪಾಂಡುರಂಗರಾಯ.,(೧೯೩೬), ವಿಜಯನಗರ ಸಾಮ್ರಾಜ್ಯ ೧೩೩೬-೧೬೮೧, ಧಾರವಾಡ: ವಿಜಯನಗರ ಸ್ಮಾರಕೋತ್ಸವ ಮಂಡಲ

೧೨. ನರಸಿಂಹಮೂರ್ತಿ ಎ.ವಿ.,(ಅನು)(ಸಂ), ಮಜುಂದಾರ್ ಆರ್.ಸಿ.(ಮೂಲ)(ಸಂ)., (೨೦೦೧) ಮುಘಲ್ ಸಾಮ್ರಾಜ್ಯ ಭಾಗ-೨, ಬೆಂಗಳೂರು: ಭಾರತೀಯ ವಿದ್ಯಾಭವನ

೧೩. ನರಸಿಂಹಮೂರ್ತಿ ಎ.ವಿ.(ಅನು), ಮಜುಂದಾರ್ ಆರ್.ಸಿ.(ಮೂಲ)(ಸಂ), (೨೦೦೧), ದೆಹಲಿ ಸುಲ್ತಾನರ ಆಧಿಪತ್ಯ ಭಾಗ-೧, ಬೆಂಗಳೂರು: ಭಾರತೀಯ ವಿದ್ಯಾಭವನ

೧೪. ನಾಗರಾಜು ಎಚ್.ಎಂ.,(೧೯೯೯), ವಿಜಯನಗರದ ಇಮ್ಮಡಿ ದೇವರಾಯ, ಮೈಸೂರು: ಸಂವಹನ ಪ್ರಕಾಶನ.

೧೫. ನಾಗೇಗೌಡ ಎಚ್.ಎಲ್.,(೨೦೦೬), ಪ್ರವಾಸಿ ಕಂಡ ಇಂಡಿಯಾ ಸಂ-೨, ಬೆಂಗಳೂರು: ಐ.ಬಿ.ಹೆಚ್.ಪ್ರಕಾಶನ

೧೬. ಪುಟ್ಟಸ್ವಾಮಿ ಬಿ.ಎಸ್.,(೨೦೦೭), ಕೈಫಿಯತ್ತು ಕಂಡ ಮೈಸೂರು ರಾಜಕೀಯ ಚರಿತ್ರೆ, ಬೆಂಗಳೂರು: ಮುದ್ದುಶ್ರೀ ಗ್ರಂಥಮಾಲೆ

೧೭. ಬಾಲಸುಬ್ರಹ್ಮಣ್ಯ.,(ಅನು), (೨೦೦೦), ಮರೆಯಲಾಗದ ಮಹಾ ಸಾಮ್ರಾಜ್ಯ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೧೮. ಭೂಸನೂರು ಮಠ ಸಂ.ಶಿ.,(೧೯೮೮), ವಿಜಯಕಲ್ಯಾಣ, ಹಂಪಿ, ಮಹಾಕವಿ ಹರಿಹರ ಸ್ಮಾರಕ ಸಂಶೋಧನ ಕೇಂದ್ರ

೧೯. ಮಂಜುನಾಥ ಬೇವಿನಕಟ್ಟಿ.,(ಸಂ), (೧೯೯೭), ವಿಜಯನಗರದ ಸಾಂಸ್ಕೃತಿಕ ಆಯಾಮಗಳು, ಹೊಸಪೇಟೆ: ಶ್ರೀ ವಿದ್ಯಾವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್

೨೦. ಮಹದೇವ ಸಿ.,(ಸಂ),(೨೦೦೨), ಹೊಸಪೇಟೆ ತಾಲ್ಲೂಕು ದರ್ಶನ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೨೧. ಮಹದೇವ ಸಿ.,(ಸಂ)(೨೦೦೬), ಹಂಪಿ:ಅಂದು-ಇಂದು, ಹಂಪಿ: ಕನ್ನಡ ವಿಶ್ವವಿದ್ಯಾಲಯ.

೨೨. ಮೋಹನಕೃಷ್ಣ ರೈ ಕೆ.,(೨೦೦೯), ಚರಿತ್ರೆ ಕಥನ, ಬಳ್ಳಾರಿ: ಪಲ್ಲವ ಪ್ರಕಾಶನ

೨೩. ರಾಘುವೇಂದ್ರರಾವ್ ಎ.,(೧೯೪೯), ವಿಜಯನಗರ, ಮೈಸೂರು: ವಿದ್ಯಾನಿಧಿ ಬುಕ್ ಡಿಪೋ.

೨೪. ರಾಜಾರಾಮಹೆಗಡೆ.,(೨೦೦೫), ಗತ ಕಥನ, ಮಲ್ಲಾಡಿಹಳ್ಳಿ: ಆನಂದಕಂದ ಗ್ರಂಥಮಾಲೆ

೨೫. ವಸುಂಧರಾ ಫಿಲಿಯೋಜಾ.,(೧೯೮೦), ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್

೨೬. ವಸುಂಧರಾ ಪಿಲಿಯೋಜಾ.,(೧೯೯೨), ಅಳಿದುಳಿದ ಹಂಪೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತು

೨೭. ವಿರೂಪಾಕ್ಷಿ ಪೂಜಾರಹಳ್ಳಿ.,(೨೦೦೯), ವಸಾಹತುಕಾಲೀನ ಬಳ್ಳಾರಿ ಜಿಲ್ಲೆ, ಹಂಪಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.

೨೮. ವಿವೇಕ ರೈ ಬಿ.ಎ.,(ಸಂ)(೨೦೧೦), ಪ್ರವಾಸಿ ಕಂಡ ವಿಜಯನಗರ, ಹಂಪಿ: ಕನ್ನಡ ವಿಶ್ವವಿದ್ಯಾಲಯ.

೨೯. ಶರ್ಮ ತಿ.ತಾ.,(೧೯೭೦), ವಿಚಾರ ಕರ್ನಾಟಕ, ಬೆಂಗಳೂರು

೩೦. ಶರ್ಮ ತಿ.ತಾ.,(೧೯೭೧), ಚಾರಿತ್ರಿಕ ದಾಖಲೆಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ .

೩೧. ಶ್ರೀಕಂಠಯ್ಯ ಕೆ.,(೧೯೮೩), ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಮೈಸೂರು: ಗೀತಾಬುಕ್ ಹೌಸ್

೩೨. ಶ್ರೀಕಂಠಶಾಸ್ತ್ರಿ ಎಸ್.,(೧೯೭೫), ಸಂಶೋಧನಾ ಲೇಖನಗಳು, ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ

೩೩. ಸದಾನಂದ ಕನವಳ್ಳಿ.,(ಅನು) (೨೦೧೦), ಮರೆತು ಹೋದ ಮಹಾ ಸಾಮ್ರಾಜ್ಯ ವಿಜಯನಗರ, ಹಂಪಿ: ಕನ್ನಡ ವಿಶ್ವವಿದ್ಯಾಲಯ

೩೪. ಸೂರ್ಯನಾಥ್ ಕಾಮತ್.,(೨೦೦೬), ಕರ್ನಾಟಕದ ಇತಿಹಾಸ ಹಲವು ಮುಖಗಳು, ಬೆಂಗಳೂರು: ಸುಮುಖ ಪ್ರಕಾಶನ

೩೫. ಸೂರ್ಯನಾಥ ಕಾಮತ್.,(೧೯೭೩), ವಿಜಯನಗರ ಸಾಮ್ರಾಜ್ಯ, ಬೆಂಗಳೂರು: ಅರ್ಚನಾ ಪ್ರಕಾಶನ

೩೬. ಸೋಮಶೇಖರ್ ಎಸ್.ವೈ.,(೨೦೦೯), ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ, ವಿದ್ಯಾರಣ್ಯ: ಸಂಚಿಕೆ ಪ್ರಕಾಶನ

೩೭. ಷೇಕ್ ಅಲಿ ಬಿ.,(ಸಂ)(೧೯೯೭), ಕರ್ನಾಟಕ ಚರಿತ್ರೆ ಸಂ-೩, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

೩೮. ಹನುಮಂತಯ್ಯ ಆರ್.ವಿ.,(೧೯೫೨), ವಿಜಯನಗರ ಸಾಮ್ರಾಜ್ಯ ಚರಿತ್ರೆ, ಬೆಂಗಳೂರು

- ೦ -